
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 39 | ಸೆಪ್ಟೆಂಬರ್ 23-29, 2019 | ಪುಟ 16 | ರೂ. 10





ಅಸ್ಪೃಶ್ಯತೆ ಅಳಿಯದೆ ಕಲ್ಯಾಣವಾಗದು ಕರ್ನಾಟಕ



ಕಾಶ್ಮೀರಿಗಳು ನಿಧಾನವಾಗಿ ಸಾಯುತ್ತಿದ್ದಾರೆ

ಯೂಸೂಫ್ ತರಿಗಾಮಿ

ಸೌದಿ ತೈಲ ಸ್ಥಾವರಗಳ ಮೇಲೆ ಡ್ರೋಣ್ ದಾಳಿ ಗೆದ್ದವರು ಯಾರು?



ಸಾವಿರಾರು ಕಟ್ಟಡ ಕಾರ್ಮಿಕರ ವಿಧಾನಸೌಧ ಚಲೋ



ಎಡ ಪಕ್ಷಗಳ ಸಪ್ಟಂಬರ್ 20 ರಾಷ್ಟ್ರೀಯ ಸಮಾವೇಶದ ಕರೆ
ಅಕ್ಟೋಬರ್ 10ರಿಂದ 16–ದೇಶಾದ್ಯಂತ ಪ್ರತಿಭಟನಾ ಚಟುವಟಿಕೆಗಳು

ಐದು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಸಿಪಿಐ (ಎಂಎಲ್) ಲಿಬರೇಷನ್, ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ ಸಪ್ಟಂಬರ್ 20ರಂದು ನವದೆಹಲಿಯಲ್ಲಿ ಒಂದು ಜಂಟಿ ಸಮಾವೇಶವನ್ನು ಸಂಘಟಿಸಿವೆ. ಆಳಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಜನಗಳ ಮೇಲೆ ಹೆಚ್ಚೆಚ್ಚು ಪ್ರಮಾಣದಲ್ಲಿ ಹೇರಲಾಗುತ್ತಿರುವ ಸಂಕಟಗಳು, ಜತೆಗೆ ಒಂದು ಬೃಹತ್ ಪ್ರಮಾಣದ ಉದ್ಯೋಗನಷ್ಟದ ವಿರುದ್ಧ ರಾಷ್ಟ್ರೀಯ ಮಟ್ಟದ ಪ್ರತಿಭಟನಾ ಕಾರ್ಯಾಚರಣೆಗಳನ್ನು ಯೋಜಿಸಲು ಏರ್ಪಡಿಸಿದ **ಈ ಸಮಾವೇಶ ಸರಕಾರ ರಿಝರ್ವ್ ಬ್ಯಾಂಕಿನಿಂದ ತೆಗೆದುಕೊಂಡ 1.76 ಲಕ್ಷ ಕೋಟಿ ರೂ.ಗಳನ್ನು ಕಳೆದ ವರ್ಷ ನೋಟುರದ್ದತಿ ಮತ್ತು ಜಿಎಸ್‌ಟಿಯಿಂದಾಗಿ ಆಗಿರುವ 1.7 ಲಕ್ಷ ಕೋಟಿ ರೂ.ಗಳ ರೆವಿನ್ಯೂ ಕೊರತೆಯನ್ನು ತುಂಬಲು ಬಳಸದೆ, ಉದ್ಯೋಗಗಳನ್ನು ನಿರ್ಮಿಸುವ ಮತ್ತು ದೇಶದೊಳಗಿನ ಬೇಡಿಕೆಗಳನ್ನು ಹೆಚ್ಚಿಸುವ ಸಾರ್ವಜನಿಕ ಹೂಡಿಕೆಗಳಿಗೆ ಬಳಸಬೇಕು** ಎಂದು ಆಗ್ರಹಿಸುತ್ತ ಅಕ್ಟೋಬರ್ 10ರಿಂದ 16 ರವರೆಗೆ ದೇಶಾದ್ಯಂತ ಈ ಕೆಳಗಿನ ಬೇಡಿಕೆಗಳನ್ನು ಮೋದಿ ಸರಕಾರ ತಕ್ಷಣವೇ ಜಾರಿಗೊಳಿಸಬೇಕು ಎಂದು ಪ್ರತಿಭಟನಾ ಚಟುವಟಿಕೆಗಳನ್ನು ಸಂಘಟಿಸಲು ಕರೆ ನೀಡಿದೆ.

- ಉದ್ಯೋಗಾವಕಾಶ ನಿರ್ಮಾಣಕ್ಕೆ ಹೆಚ್ಚಿನ ಸಾರ್ವಜನಿಕ ಹೂಡಿಕೆ, ಮತ್ತು ಅದುವರೆಗೆ ಯುವಜನರಿಗೆ ನಿರುದ್ಯೋಗ ಭತ್ಯೆ.
- ಕನಿಷ್ಟ ಮಾಸಿಕ ವೇತನ ರೂ.18,000 ಖಾತ್ರಿಗೊಳಿಸಬೇಕು
- ಉದ್ಯೋಗದಿಂದ ತೆಗೆದುಹಾಕಿರುವ ಅಪಾರ ಸಂಖ್ಯೆಯ ಕಾರ್ಮಿಕರಿಗೆ ಮಾಸಿಕ ಬದುಕುವ ವೇತನ ಸಿಗುವಂತಾಗಬೇಕು
- ಖಾಸಗೀಕರಣವನ್ನು ನಿಲ್ಲಿಸಬೇಕು, ರಕ್ಷಣೆ ಮತ್ತು ಕಲ್ಲಿದ್ದಲು ವಲಯಗಳಲ್ಲಿ 100ಶೇ. ಎಫ್‌ಡಿಐ ಹಿಂತೆಗೆದುಕೊಳ್ಳಬೇಕು
- ಮನರೇಗದಲ್ಲಿ ಹಿಂದಿನ ಬಾಕಿ ಕೂಲಿಗಳನ್ನು ತೆರಲು ಮತ್ತು ಕನಿಷ್ಟ 200 ದಿನಗಳ ಕೆಲಸ ಒದಗಿಸಲು ಅದಕ್ಕೆ ಹಣನೀಡಿಕೆಯನ್ನು ಹೆಚ್ಚಿಸಬೇಕು
- ಕರ್ಷಕ ಸಂಕಟವನ್ನು ಎದುರಿಸಲು ರೈತರಿಗೆ ಒಂದು ಬಾರಿಯ ಸಾಲಮನ್ನಾ, ಲಾಗುವಾಡುಗಳ ವೆಚ್ಚದ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯ ಜಾರಿ
- ವಯಸ್ಸಾದವರಿಗೆ ಮತ್ತು ವಿಧವೆಯರಿಗೆ ಕನಿಷ್ಟ ಮಾಸಿಕ ಪೆನ್ಶನ್ ಮೊತ್ತವನ್ನು 3000ರೂ.ಗೆ ಏರಿಸಬೇಕು.

ಒಂದು ಜನತಾ ಪ್ರತಿಭಟನಾ ಆಂದೋಲನವನ್ನು ಕಟ್ಟಿ ಬೆಳೆಸಲು ಈ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಸೇರಿಕೊಳ್ಳಬೇಕು ಎಂದು ಎಡಪಕ್ಷಗಳು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಮನವಿ ಮಾಡಿವೆ.

ಹಣಕಾಸು ಮಂತ್ರಿಗಳ ಇನ್ನೊಂದು ಸುತ್ತಿನ ಪಥ್ಯಗಳು ಆರ್ಥಿಕ ನಿಧಾನಗತಿಯನ್ನು ಉಲ್ಬಣಗೊಳಿಸುತ್ತವೆಯಷ್ಟೇ, ನಿವಾರಿಸುವುದಿಲ್ಲ – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಆರ್ಥಿಕ ವ್ಯವಸ್ಥೆಗೆ ಹುರುಪು ತುಂಬಲೆಂದು ಹಣಕಾಸು ಮಂತ್ರಿಗಳು ಸಪ್ಟಂಬರ್ 14ರಂದು ಮತ್ತೊಂದು ಸುತ್ತಿನ ಪ್ರಕಟಣೆಗಳನ್ನು ಮಾಡಿದ್ದಾರೆ. ಆದರೆ ಆರ್ಥಿಕ ಹಿಂಜರಿತದ ಮಟ್ಟಕ್ಕೆ ಜಾರುತ್ತಿರುವ ನಿಧಾನಗತಿಯ ಸಮಸ್ಯೆಯನ್ನು ಎದುರಿಸಲು ನಮ್ಮ ಬಹು ಅಗತ್ಯವಾದ ಮೂಲರಚನೆಗಳನ್ನು ಕಟ್ಟುವ, ಆ ಮೂಲಕ ಉದ್ಯೋಗಾವಕಾಶಗಳನ್ನು ನಿರ್ಮಿಸಿ ದೇಶದೊಳಗಿನ ಬೇಡಿಕೆಯನ್ನು ಹೆಚ್ಚಿಸುವ ಬದಲು, ಹಣಕಾಸು ಮಂತ್ರಿಗಳು ಮತ್ತೊಮ್ಮೆ ಆ ನಿಧಾನಗತಿಗೆ ಕಾರಣವಾದ ಕ್ರಮಗಳನ್ನೇ ಪ್ರಕಟಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಟೀಕಿಸಿದೆ.

ರಿಯಲ್ ಎಸ್ಟೇಟ್ ವಲಯದಲ್ಲಿ ಖಾಸಗಿ ಹೂಡಿಕೆಗಳ ಮೇಲೆ ಗುರಿಯಿಡುವುದಕ್ಕೆ ಒತ್ತು, ಮತ್ತು ರಫ್ತುಗಳನ್ನು ಉತ್ತೇಜಿಸುವ ಪ್ರಯತ್ನಗಳು ಯಶಸ್ವಿಯಾಗಲಾರವು. ಏಕೆಂದರೆ ಜಾಗತಿಕ ವ್ಯಾಪಾರದ ಪ್ರಮಾಣಗಳು ಸಂಕುಚಿತಗೊಳ್ಳುತ್ತಿವೆ, ಮತ್ತು ಜನಗಳಲ್ಲಿ ಖರೀದಿ ಸಾಮರ್ಥ್ಯದ ಕೊರತೆಯಿಂದಾಗಿಯೇ ಮನೆಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ,

ಹಣಕಾಸು ಮಂತ್ರಿಗಳು ಪ್ರಕಟಿಸಿರುವ ಹೊಸ ಕ್ರಮಗಳ ಮೊತ್ತ 70,000 ಕೋಟಿ ರೂ.ಗಳು. ಇದನ್ನು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಲು ಬಳಸಬಹುದಾಗಿತ್ತು, ಮತ್ತು ಮನರೇಗದಲ್ಲಿ ಕೂಲಿಬಾಕಿಗಳನ್ನು ತೆರಲು ಬಳಸಿದ್ದರೆ ಗ್ರಾಮೀಣ ಭಾರತದಲ್ಲಿ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಬಹುದಿತ್ತು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಜನಗಳ ಸಂಕಟಗಳನ್ನು ನಿವಾರಿಸುವ ಬದಲು ಅವನ್ನು ಹೆಚ್ಚಿಸಿ, ಉಳ್ಳವರ ಲಾಭಗಳನ್ನು ಮಾತ್ರ ಗರಿಷ್ಟಗೊಳಿಸಲು ಅನುಕೂಲವಾಗುವಂತಹ ಈ ಧೋರಣೆಗಳ ವಿರುದ್ಧ ಪ್ರತಿಭಟಿಸಲು ಎದ್ದು ನಿಲ್ಲಬೇಕು ಎಂದು ಜನಗಳಿಗೆ ಕರೆ ನೀಡಿದೆ.

ಗಾಯಕ್ಕೆ ಉಪ್ಪು ತಿಕ್ಕುವ ಪ್ರಕಟಣೆಗಳು–ಯೆಚುರಿ

ಹಣಕಾಸು ಮಂತ್ರಿಗಳು ಸಪ್ಟಂಬರ್ 14ರಂದು ಮಾಡಿರುವ ಪ್ರಕಟಣೆಗಳು ಜನಗಳ ಗಾಯಗಳಿಗೆ ಉಪ್ಪು ತಿಕ್ಕುವಂತವುಗಳು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಟಿಪ್ಪಣಿ ಮಾಡಿದ್ದಾರೆ. ಮತ್ತೊಮ್ಮೆ ಅವೇ ಹಳಸಲು ನಿಷ್ಪ್ರಯೋಜಕ ಪಥ್ಯಗಳನ್ನೇ ಪ್ರಕಟಿಸಲಾಗಿದೆ. ಈ ಕ್ರಮಗಳಿಂದ ಆರ್ಥಿಕ ಚೇತರಿಕೆಯೂ ಬರಲಾರದು, ಜನಗಳು ಕಾತುರದಿಂದ ನಿರೀಕ್ಷಿಸುತ್ತಿರುವ ಪರಿಹಾರಗಳೂ ಸಿಗಲಾರವು ಎಂದು ಅವರು ಹೇಳಿದ್ದಾರೆ.

ಹಣಕಾಸು ಮಂತ್ರಿಗಳ ಹೊಸ ಪ್ರಕಟಣೆಗಳು ಬರುವ ಹಿಂದಿನ ದಿನವೇ ಆಗಸ್ಟ್ ತಿಂಗಳಲ್ಲಿ ರಫ್ತುಗಳಲ್ಲಿ 6.05% ಇಳಿಕೆಯಾಗಿದೆ, ರಫ್ತುಗಳಲ್ಲಿ 13.45% ಇಳಿಕೆಯಾಗಿದೆ ಎಂಬ ಸುದ್ದಿ ಬಂದಿತ್ತು. ಈ ರೀತಿ ಆಮದು ಮತ್ತು ರಫ್ತು ಇಷ್ಟೊಂದು ತೀವ್ರ ರೀತಿಯಲ್ಲಿ ಕುಗ್ಗಿರುವುದು ಆಥಿಕ ಚಟುವಟಿಕೆಗಳು ಕುಗುತ್ತಿರುವುದನ್ನು ಸೂಚಿಸುತ್ತದೆ. ಅಂದರೆ ಭಾರತೀಯ ಆರ್ಥಿಕ ವ್ಯವಸ್ಥೆ ಅಭೂತಪೂರ್ವ ಬಿಕ್ಕಟ್ಟಿಗೆ ಒಳಗಾಗಿದೆ, ಇದಕ್ಕೂ ವಾಣಿಜ್ಯಮಂತ್ರಿಗಳು ಹೇಳಿದ ಗುರುತ್ವಾಕರ್ಷಣಕ್ಕಾಗಲೀ, ಅಥವ ಹಣಕಾಸು ಮಂತ್ರಿಗಳು ಹೇಳಿದ ಈ ಶತಮಾನದ ನವಯುವಕರ ಮನೋಭಾವಕ್ಕಾಗಲೀ ಯಾವುದೇ ಸಂಬಂಧವಿಲ್ಲ. ಇದಕ್ಕೆ ಸರಕಾರದಲ್ಲಿ ಕೂತಿರುವವರೇ ಹೊಣೆಗಾರರು ಎಂದು ತಿಳಿಯಲು ಐನ್‌ಸ್ಟೈನ್ ಏನೂ ಬೇಕಾಗಿಲ್ಲ ಎಂದು ಸೀತಾರಾಮ್ ಯೆಚುರಿ ಟಿಪ್ಪಣಿ ಮಾಡಿದ್ದರು.

ಹಿಂದಿ ಭಾಷೆಯ ಹೇರಿಕೆಯನ್ನು ತಿರಸ್ಕರಿಸಿ –ಸಿಪಿಐ(ಎಂ) ಪೊಲಿಟ್ ಬ್ಯುರೊ

ಹಿಂದಿ ಭಾಷೆಯನ್ನು ರಾಷ್ಟ್ರಭಾಷೆ ಎಂದು ಕಾಣಬೇಕು ಎಂಬ ಕೇಂದ್ರ ಗೃಹಮಂತ್ರಿಗಳ ಪ್ರಕಟಣೆ ಭಾರತೀಯ ಸಂವಿಧಾನದ ಭಾವನೆಗೆ ಮತ್ತು ನಮ್ಮ ದೇಶದ ಭಾಷಾ ವೈವಿಧ್ಯತೆಗೆ ತದ್ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಸಂವಿಧಾನದ 8ನೇ ಶೆಡ್ಯೂಲಿನಲ್ಲಿ ಪಟ್ಟಿ ಮಾಡಿರುವ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳು, ಅವೆಲ್ಲವನ್ನೂ ಸಮಾನವಾಗಿ ಕಾಣಬೇಕು. ಯಾವುದೇ ಒಂದು ಭಾಷೆಯನ್ನು ಹೇರುವ ಯಾವುದೇ ಪ್ರಯತ್ನ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಛಿದ್ರಗೊಳಿಸುವುದಕ್ಕೆ ದಾರಿಯಾಗುತ್ತದೆ ಎಂದು ಅದು ಎಚ್ಚರಿಸಿದೆ.

ಇಂತಹ ಪ್ರಯತ್ನಗಳನ್ನು ಬಲವಾಗಿ ವಿರೋಧಿಸುತ್ತೇವೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಪ್ರಯತ್ನಗಳು ಆರೆಸ್ಸೆಸ್ ನ "ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಭಾಷೆ" ಎಂಬ ಪರಿಕಲ್ಪನೆಯಿಂದ ಹೊಮ್ಮಿರುವಂತದ್ದು ಎಂದು ಹೇಳಿದೆ.

ಭಾರತದ ಸಂವಿಧಾನಿಕ ವ್ಯವಸ್ಥೆಯ ಮೇಲೆ ಬಹುವಿಧ ದಾಳಿಗಳು

–ಸಿಪಿಐ(ಎಂ) ಪೊಲಿಟ್‌ಬ್ಯುರೋ ಟೀಕೆ

*** ಎನ್‌ಆರ್‌ಸಿ, ಎನ್‌ಪಿಆರ್, ಇವಿಪಿ ಮುಂತಾದ ಅನಗತ್ಯ ದುಬಾರಿ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು,**

*** ಸಬ್ಸಿಡಿ ದರಗಳಲ್ಲಿ ಆಹಾರಧಾನ್ಯ ನೀಡಿಕೆಗಳನ್ನು ಹೆಚ್ಚಿಸಬೇಕು,**

*** ಅರಣ್ಯ ಹಕ್ಕುಗಳ ಕಾಯ್ದೆ ಜಾರಿಯಾಗಬೇಕು**

*** ಕಾನೂನು ಉಲ್ಲಂಘಿಸುವವರಿಗೆ ರಕ್ಷಣೆ ನಿಲ್ಲಬೇಕು**

ಸಪ್ಟಂಬರ್ 18 ಮತ್ತು 19ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೊ ಪ್ರಸಕ್ತ ಬೆಳವಣಿಗೆಗಳನ್ನು ಚರ್ಚಿಸಿದ ನಂತರ ಪ್ರಕಟಿಸಿರುವ ಹೇಳಿಕೆ

ಪುಟ 12 ನೋಡಿ

ಅರಣ್ಯ ಹಕ್ಕುಗಳ ಕಾಯ್ದೆಗೆ ಸವಾಲಿನ ವಿಚಾರಣೆಯಲ್ಲಿ ಮತ್ತೆ ಉನ್ನತ ಕಾನೂನು ಅಧಿಕಾರಿಗಳ ಗೈರು ಹಾಜರಿ

"ಕೇಂದ್ರ ಸರಕಾರದ ಅತ್ಯಂತ ಆತಂಕಕಾರಿ, ಆಕ್ಷೇಪಾರ್ಹ ನಡೆ"–ಅರಣ್ಯ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ



"ಕಳೆದ ಒಂದೂವರೆ ವರ್ಷದಿಂದ, ಹಂತ–ಹಂತವಾಗಿ ಅರಣ್ಯ ಹಕ್ಕು ಕಾಯ್ದೆಯ ವಿರುದ್ಧ ಆಕ್ರೋಶಕಾರಿ ಕಾನೂನಾತ್ಮಕ ಸವಾಲು ಕೇಂದ್ರ ಸರಕಾರದ ಕಡೆಯಿಂದ ಯಾವುದೇ ರಕ್ಷಣಾತ್ಮಕ ಕ್ರಮಗಳಿಲ್ಲದೆ ಮುಂದಕ್ಕೆ ಹೋಗುತ್ತಿದೆ. ಇತ್ತೀಚೆಗೆ, ಅರಣ್ಯ ಕಾಯ್ದೆ, 1927ಕ್ಕೆ ಕರಡು ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ ನಾನು ವ್ಯಕ್ತಪಡಿಸಿದ ಆತಂಕಗಳಿಗೆ ಸ್ಪಂದಿಸುತ್ತ, ತಮ್ಮ ಮಂತ್ರಾಲಯ ಬುಡಕಟ್ಟು ಸಮುದಾಯಗಳ ಹಕ್ಕುಗಳ ರಕ್ಷಣೆಗೆ ಬದ್ಧವಾಗಿದೆ ಎಂದು ನೀವು ಹೇಳಿದ್ದಿರಿ. ಆದರೆ ಇದು ಸುಪ್ರಿಂ ಕೋರ್ಟಿನಲ್ಲಿರುವ ಮೊಕದ್ದಮೆಯಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಗೆ ಸವಾಲಿನ ಅತ್ಯಂತ ನಿರ್ಣಾಯಕ ಪ್ರಶ್ನೆಯಲ್ಲಿ ತಮ್ಮ ಮಂತ್ರಾಲಯದ ಪಾತ್ರದಲ್ಲಿ ಕಾಣಿಸುತ್ತಿಲ್ಲ ಎಂದು ಹೇಳಲು ನನಗೆ ಖೇದವಾಗುತ್ತಿದೆ."



ನರೇಂದ್ರ ಮೋದಿ ನೇತೃತ್ವದ ಎರಡನೇ ಬಿಜೆಪಿ ಸರಕಾರವೂ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಉದ್ದೇಶಪೂರ್ವಕವಾಗಿ ಬುಡಮೇಲು ಮಾಡಲು ಮುಂದಾಗಿರುವಂತೆ ಕಾಣುತ್ತದೆ. ಈ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ 2008 ರಲ್ಲಿ, ನಂತರ ಮತ್ತೆ 2016ರಲ್ಲಿ ಹಾಕಿದ್ದ ಅರ್ಜಿಯ ವಿಚಾರಣೆ ಸಪ್ಟಂಬರ್ 12ರಂದು ಸುಪ್ರಿಂ ಕೋರ್ಟಿನಲ್ಲಿ ಇತ್ತು. ನ್ಯಾಯಪೀಠ ಸರಕಾರದ ಪರವಾಗಿ ವಾದ ಮಂಡಿಸಬೇಕಾದ ಸಾಲಿಸಿಟರ್ ಜನರಲ್ ಹಾಜರಿದ್ದಾರೆಯೇ ಎಂದು ಕೇಳಿತು. ಅವರು ಹಾಜರಿರಲಿಲ್ಲ, ಕೇಂದ್ರ ಸರಕಾರವನ್ನು ಪ್ರತಿನಿಧಿಸುವ ಬೇರೆ ಯಾವ ಹಿರಿಯ ಕಾನೂನು ಪ್ರತಿನಿಧಿಯೂ ಇರಲಿಲ್ಲ. ಕಾಯ್ದೆಯನ್ನು ಪ್ರಶ್ನಿಸಿದ್ದ ಅರ್ಜಿದಾರರು ಈ ಬಾರಿ ಮತ್ತೆ ಲಕ್ಷಾಂತರ ಬುಡಕಟ್ಟು ಜನಗಳು ಮತ್ತು ಅರಣ್ಯವಾಸಿಗಳ ಹಿತಗಳಿಗೆ ವಿರುದ್ಧವಾದ ಮೂರು ಅರ್ಜಿಗಳನ್ನು ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಲು ಕೇಂದ್ರ ಸರಕಾರದ ಕಡೆಯಿಂದ ಯಾರೂ ಇಲ್ಲದ್ದರಿಂದ ನ್ಯಾಯಪೀಠ ಅವನ್ನು ಕೂಡ ವಿಚಾರಣೆಗೆ ಸ್ವೀಕರಿಸಿ, ಈ ಕುರಿತಂತೆ ಮುಂದಿನ ವಿಚಾರಣೆಯನ್ನು ನವಂಬರ್ 26 ರಂದು ನಡೆಸುವುದಾಗಿ ಹೇಳಿದೆ.

ಇದು ಕೇಂದ್ರ ಸರಕಾರದ ಕಡೆಯಿಂದ ಅತ್ಯಂತ ಆತಂಕಕಾರಿಯಾದ ಮತ್ತು ಆಕ್ಷೇಪಾರ್ಹ ನಡೆ ಎಂದು ಸಿಪಿಐ(ಎಂ)ನ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಕೇಂದ್ರ ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆ ಇಲಾಖೆಯ ಮಂತ್ರಿಗಳಾದ ಪ್ರಕಾಶ ಜಾವ್ಡೇಕರ್ ರವರಿಗೆ ಮರುದಿನವೇ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ. ಕಳೆದ ಒಂದೂವರೆ ವರ್ಷದಿಂದ, ಹಂತ–ಹಂತವಾಗಿ ಅರಣ್ಯ ಹಕ್ಕುಗಳ ಕಾಯ್ದೆಯ ವಿರುದ್ಧ ಆಕ್ರೋಶಕಾರಿ ಕಾನೂನಾತ್ಮಕ ಸವಾಲು ಕೇಂದ್ರ ಸರಕಾರದ ಕಡೆಯಿಂದ ಯಾವುದೇ ರಕ್ಷಣಾತ್ಮಕ ಕ್ರಮಗಳಿಲ್ಲದೆ ಮುಂದಕ್ಕೆ ಹೋಗುತ್ತಿದೆ ಎಂಬ ಸಂಗತಿಯನ್ನು ಈ ಪತ್ರದಲ್ಲಿ ಮಂತ್ರಿಗಳ ಗಮನಕ್ಕೆ ತರಲಾಗಿದೆ.

ಕಳೆದ ಫೆಬ್ರುವರಿಯಲ್ಲಿ, ಸುಪ್ರಿಂ ಕೋರ್ಟ್ ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ಹಕ್ಕುಗಳು ತಪ್ಪುಕಾರಣಗಳಿಗಾಗಿ ನಿರಾಕರಿಸಲ್ಪಟ್ಟಿರುವ ಸುಮಾರು 10 ಲಕ್ಷ ಅರಣ್ಯವಾಸಿಗಳನ್ನು ಕೂಡಲೇ ಒಕ್ಕಲೆಬ್ಬಿಸುವ

ಪುಟ 7 ಕ್ಕೆ

ಸಂಪಾದಕೀಯ

ಅಸ್ಪೃಶ್ಯತೆಯು ಅಳಿಯದೆ ಕಲ್ಯಾಣವಾಗದು ಕರ್ನಾಟಕ

ಹೈದರಾಬಾದ್ ಕರ್ನಾಟಕ ಎಂದು ಕರೆಸಿಕೊಳ್ಳುತ್ತಿದ್ದ ಬೀದರ್ ಕಲಬುರ್ಗಿ ಯಾದಗಿರಿ ರಾಯಚೂರು ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ಭಾಗಕ್ಕೆ ಅಧಿಕೃತವಾಗಿ ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಿದ್ದು ಸ್ವಾಗತಾರ್ಹವೇ. ಇದುವರೆಗೆ ಪ್ರತಿ ವರ್ಷ ಸೆಪ್ಟಂಬರ್ 17 ರಂದು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನವೆಂದು ಆಚರಿಸುತ್ತಾ ಮುಸಲ್ಮಾನರ ವಿರುದ್ಧ ದ್ವೇಷವನ್ನು ಬಡಿದೆಬ್ಬಿಸಿ ಒಂದು ರೀತಿಯ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಿಸಲಾಗುತ್ತಿತ್ತು. 1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಹೈದರಾಬಾದ್ ನಿಜಾಮ್ ಭಾರತ ಒಕ್ಕೂಟ ಸೇರಲು ಪ್ರತಿರೋಧ ಒಡ್ಡಿದ ಅಂದು ಅಸ್ತಿತ್ವದಲ್ಲಿದ್ದ 560 ಸಂಸ್ಥಾನಗಳಲ್ಲಿ ಹಲವರು ಕೂಡಲೇ ಭಾರತ ಒಕ್ಕೂಟ ಸೇರಲು ಮುಂದಾಗಲಿಲ್ಲ. ಅವರಲ್ಲಿ ನಿಜಾಂ ಮುಸಲ್ಮಾನನಾಗಿದ್ದಾರೆ ಕಾಶ್ಮೀರದ ರಾಜ ಹರಿಸಿಂಗ್ ಇಂದು ಮತವಲಂಭಯಾಗಿದ್ದ. ಹೈದರಾಬಾದ್ ವಿಜಯಾನಂದ ಕಾಶ್ಮೀರದ ರಾಜ ಹರಿಸಿಂಗ್ ಸಹ ಭಾರತ ಒಕ್ಕೂಟಕ್ಕೆ ಸೇರುವ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿರಲಿಲ್ಲ. ಆತನೊಬ್ಬ ಆರೆಸ್ಸೆಸ್ ಬೆಂಬಲಿಸುವ ಹಿಂದೂ ರಾಜ ಆಗಿದ್ದನೆಂಬ ಒಂದೇ ಕಾರಣಕ್ಕೆ ಸಂಘ ಪರಿವಾರ ಆತನ ಕುತಂತ್ರಗಳನ್ನು ಮರೆಮಾಚುತ್ತಿದೆ.

12ನೇ ಶತಮಾನದಲ್ಲಿ ಶರಣರು ನಡೆದಾಡಿದ ನೆಲವನ್ನು ಈಗ ಕಲ್ಯಾಣ ಕರ್ನಾಟಕ ಎಂದು ಕರೆಯಲು ನಿರ್ಧರಿಸಿದ್ದು ಒಂದು ಶ್ಲಾಘನೀಯ ತೀರ್ಮಾನ. ಅನೇಕ ಸೂಫಿ ಸಂತರು ಸಹ ನೆಲೆಸಿದ ನಾಡು. ಶರಣ ಸೂಫಿ ಪರಂಪರೆಗೆ ಅನ್ವರ್ಥಕವಾದ ಹೆಸರದು. ಆದರೆ, ಕೇಂದ್ರದಲ್ಲಿ ಮತ್ತು ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ನೂರಾರು ವರ್ಷಗಳಷ್ಟು ಹಳೆಯದಾದ ಮುಸ್ಲಿಂ ಸ್ಥಳ ನಾಮಗಳನ್ನು ಬದಲಾಯಿಸಿ ಹಿಂದು ಹೆಸರುಗಳೊಂದಿಗೆ ಮರು ನಾಮಕರಣ ಮಾಡುವ ಪ್ರವೃತ್ತಿ ಆರಂಭವಾಗಿದೆ. ಇಂತಹ ಪ್ರಯತ್ನಗಳಿಂದ ದೇಶದಲ್ಲಿ ಅಶಾಂತಿ ಹೆಚ್ಚಾಗುವ ಅಪಾಯವಿದೆ. 'ಹೆಸರಿನಲ್ಲಿ ಏನಿದೆ'? ಎಂದು ಸುಮ್ಮನಿರಬಹುದು. ಆದರೆ ನಮ್ಮಲ್ಲಿ ಹೆಸರುಗಳೊಂದಿಗೆ ಭಾವನಾತ್ಮಕ ಸಂಬಂಧ ಇಟ್ಟುಕೊಂಡವರಿದ್ದಾರೆ. ಅಂತವರಿಗೆ ಚರಿತ್ರೆಯೊಂದಿಗೆ ಬಂದಿರುವ ಒಂದು ಹೆಸರನ್ನು ಬದಲಾಯಿಸಿ ಹಿಂದು ಹೆಸರನ್ನು ಇಟ್ಟಾಗ ಅವರಿಗೆ ಅಘಾತವಾಗದೆ ಇರಲಾರದು. ಇದರಿಂದಾಗಿ ಅವರಲ್ಲಿ ಪ್ರತ್ಯೇಕತಾ ಭಾವನೆ ಬೆಳೆದರೆ ಆಶ್ಚರ್ಯವಿಲ್ಲ.

ಆದರೆ, ಕಲ್ಯಾಣ ಕರ್ನಾಟಕದ ವಿಷಯದಲ್ಲಿ ಯಾರು ಆತಂಕಪಡುವವರು ಇರಲಿಕ್ಕಿಲ್ಲ. ಈ ಮರುನಾಮಕರಣ ಯಾವುದೇ ಧಾರ್ಮಿಕ ಭಾವನೆಯನ್ನು ಕೆರಳಿಸುವುದಿಲ್ಲ. ಇದರಿಂದ ವರ್ಷಕ್ಕೊಮ್ಮೆ 'ವಿಮೋಚನ ದಿನಾಚರಣೆ' ಹೆಸರಲಿ ಕೋಮುದ್ವೇಷವನ್ನು ಬಡಿದೆಬ್ಬಿಸುವ ಪ್ರಯತ್ನ ಅಂತ್ಯವಾಗುವುದಾದರೆ ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವೇ ಅದಾಗಲಿದೆ.

ಅದು ಶರಣರ ಸೂಫಿಸಂತರ ಕನಸಿನ ಕಲ್ಯಾಣ. ಕೇವಲ ಮರು ನಾಮಕರಣದಿಂದ ಅವರ ಕನಸು ನನಸಾಗುವುದಿಲ್ಲ. ಅವರ ಸಂದೇಶವನ್ನು ಅನುಷ್ಠಾನಗೊಳಿಸಲು ನಾವೆಲ್ಲರೂ ಶಕ್ತಿಮೀರಿ ಶ್ರಮಿಸಬೇಕು. ಕಲ್ಯಾಣ ಕರ್ನಾಟಕ, ಅದು ಕಾಯಕ ಜೀವಿಗಳ ಕರ್ನಾಟಕ. ಕೈಲಾಸ ಎಂದರೆ ಸುಖ. ಭೌತಿಕ ಸುಖ. ಇಲ್ಲಿ ನೆಲೆಸಿದವರೆಲ್ಲರೂ ಸುಖವಾಗಿರಬೇಕು. ಕಾಯಕ ಅವರ ಹಕ್ಕಾಗಬೇಕು. ಕಾಯಕಕ್ಕೆ ತಕ್ಕ ಪ್ರತಿಫಲ ಅವರಿಗೆ ದೊರೆಯಬೇಕು. ಪ್ರತಿಫಲ ಅಪೇಕ್ಷಿಸಿದ ಎಲ್ಲರಿಗೂ ಕಾಯಕದ ಹಕ್ಕನ್ನು ನೀಡುವ ಕಲ್ಯಾಣ ಕರ್ನಾಟಕದ ಉದಯವಾಗಬೇಕು. ಕಾಯಕಗಳಲ್ಲಿ ಮೇಲೆಲ್ಲ, ಕೀಳಿಲ್ಲ. ಕಾಯಕದಲ್ಲಿ ನಿರತರಾದವರು ನಂತರವಾದರೂ ಗೌರವಾರ್ಹರು.

ಶರಣರು ಸೂಫಿಗಳು ಪ್ರತಿಪಾದಿಸಿದ ಕಲ್ಯಾಣ ಸಮಾನತೆಯ ಕಲ್ಯಾಣ. ಆರ್ಥಿಕ ಸಮಾನತೆಯ ಜೊತೆಯಲ್ಲಿ ಸಾಮಾಜಿಕ ಸಮಾನತೆಯನ್ನು ಅವರು ಪ್ರಬಲವಾಗಿ ಪ್ರತಿಪಾದಿಸಿದರು ಅವರು ಕಟ್ಟ ಬಯಸಿದ ಕಲ್ಯಾಣ ಜಾತಿ ಮತ ಕುಲ ವರ್ಣ ವರ್ಗ ಮತ್ತು ಲಿಂಗ ತಾರತಮ್ಯ ಮುಕ್ತವಾದ ನಾಡು. ಅಸ್ಪೃಶ್ಯತೆಗೆ ನೆಲೆಯಾಗಿರುವ ವೇದಗಳು, ಮನುಧರ್ಮ ಶಾಸ್ತ್ರವನ್ನು ಕರ್ಮ ಸಿದ್ಧಾಂತವನ್ನು ಅವರು ತಿರಸ್ಕರಿಸಿದರು. ಭಿನ್ನ ಜಾತಿಗಳಿಗೆ ಸೇರಿದ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆ ಮಾಡಿಸಿ ಜಾತಿ ಪದ್ಧತಿಯ ನಿರ್ಮೂಲನೆಗಾಗಿ ಕ್ರಾಂತಿಕಾರಿ ದಾರಿ ತುಳಿದರು. ಇಂದು ಶರಣರ, ಸೂಫಿಗಳ ನಾಡಿಗೆ ಅದರ ಮೂಲ ಹೆಸರನ್ನು ಮರಳಿಸಿ ಗೌರವಿಸುವಾಗ ನಮ್ಮ ನಾಡಿನಲ್ಲಿ ಇಂದು ಶರಣ ಸೂಫಿಗಳ ಸಂದೇಶಕ್ಕೆ ಆಗುತ್ತಿರುವ ಅವಮಾನವನ್ನು ಪಶ್ಚಾತಾಪದ ಭಾವದಿಂದ ಕಂಡುಕೊಳ್ಳಬೇಕಾಗಿದೆ.

ಜಾತಿ ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಿದ ಶರಣ ಸೂಫಿಗಳ ಈ ನಾಡಿನಲ್ಲಿ ತಳ ವರ್ಗಗಳ ಜನತೆಯ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಲೇ ಇವೆ. ದಲಿತರಿಗೆ ದೇವಸ್ಥಾನ, ಸಾರ್ವಜನಿಕ ಕೆರೆ. ಬಾವಿ, ಕ್ಷೌರದ ಅಂಗಡಿ, ಚಹಾದಂಗಡಿ ಪ್ರವೇಶ ನಿರಾಕರಣೆ, ಬಾಡಿಗೆ ಮನೆ ನಿರಾಕರಣೆ, ಮಲ ಹೊರಿಸುವುದು, ಕೊಳಚೆ ಚರಂಡಿ ಸ್ವಚ್ಛ ಮಾಡಿಸುವುದು, ಸವರ್ಣೀಯ ಯುವಕ ಅಥವಾ ಯುವತಿಯನ್ನು ಪ್ರೀತಿಸಿ ಮದುವೆಯಾದರೆ ಕೊಚ್ಚಿ ಕೊಲೆ ಮಾಡುವುದು. ಬಾಬಾಸಾಹೇಬ್ ಅಂಬೇಡ್ಕರ್ ಪ್ರತಿಮೆ ಧ್ವಂಸ ಮಾಡುವುದು ಮುಂತಾದ ಹತ್ತು ಹಲವು ರೀತಿಯ ದೌರ್ಜನ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ. ಇಂತಹ ಅಸ್ಪೃಶ್ಯತಾ ಆಚರಣೆಗಳನ್ನು ಕೊನೆಗಾಣಿಸಲು ಕಲ್ಯಾಣ ಕರ್ನಾಟಕ ಉದಯವಾಗುವುದೆ? ಹೆಸರುಗಳನ್ನು ಬದಲಾಸಬಹುದು. ಬದಲಾಗಬೇಕಾದದ್ದು ಇಂತಹ ಅಮಾನವೀಯ ಪ್ರವೃತ್ತಿಗಳು. ಜಾತಿ ಅಸ್ಪಶತೆಯನ್ನು ಜೀವಂತವಾಗಿಟ್ಟು ಕಲ್ಯಾಣ ಕರ್ನಾಟಕ ಎಂದು ಹೆಸರಿಡಲು ಮುಂದಾಗುವುದು ಆ ಮಹಾನ್ ಶರಣ ಸೂಫಿ ಪರಂಪರೆಗೆ ಮಾಡುವ ಅವಮಾನ.

ಕೆಲವು ಮಠಾಧಿಪತಿಗಳು ಯಡಿಯೂರಪ್ಪನವರನ್ನು ಅಭಿನವ ಬಸವಣ್ಣ ಎಂದು ಬಿರುದು ನೀಡಿ ಅಭಿನಂದಿಸಲು ಮುಂದಾಗಿದ್ದಾರಂತೆ. ಬಸವಣ್ಣ ರವರನ್ನು ಮತ್ತೆ ಮತ್ತೆ ಕೊಲ್ಲಲು ಹೇಸದ ಜನ! ಪಂಚಾಚಾರ್ಯರು ಪಲ್ಲಕಿಗಳ ಮೇಲೆ ಮೆರೆಯುತ್ತಾರೆ. ಪೇಜಾವರರು ದಲಿತ ಕೇರಿಗೆ ಪಾದ ಬೆಳೆಸುತ್ತಾರೆ. ಅಲ್ಲಿ ಗೊಲ್ಲರಹಟ್ಟಿಯಲ್ಲಿ ದಲಿತ ಸಂಸದರೊಬ್ಬರಿಗೆ ಗ್ರಾಮದೊಳಗೆ ಪ್ರವೇಶ ನಿರಾಕರಿಸುತ್ತಾರೆ. ಒಬ್ಬ ಸಂಸದನಿಗೆ ಈ ರೀತಿಯ ಅವಮಾನವಾದರೆ ಒಬ್ಬ ಸಾಮಾನ್ಯ ದಲಿತನ ಪಾಡೇನು?

ಈ ಕ್ರೂರ ಅಸ್ಪೃಶ್ಯತೆ, ಅಳಿಯದೇ ಕಲ್ಯಾಣ ವಾಗದು ಕರ್ನಾಟಕ. ಬಿಜೆಪಿ ಸರ್ಕಾರ ಇದಕ್ಕೆ ಬದ್ಧವಾಗಿದೆಯಾ? ಅಥವಾ ದಲಿತರನ್ನು ದಲಿತರ ವಿರುದ್ಧ, ದಲಿತರನ್ನು ಅಲ್ಪಸಂಖ್ಯಾತ ಮುಸ್ಲಿಮರ ವಿರುದ್ಧ ಕೊಲ್ಲುವ ಆಯುಧಗಳಾಗಿ ಬಳಸುತ್ತದೆಯಾ? ಕಲ್ಯಾಣ ಕರ್ನಾಟಕ ಆಗುವುದೆಂದರೆ ಕೇವಲ 6 ಜಿಲ್ಲೆಗಳಲ್ಲ. ಇಡೀ ಕರ್ನಾಟಕವೇ ಕಲ್ಯಾಣ ಕರ್ನಾಟಕವಾಗಬೇಕು. ಆದರೆ ಅದು ಯಾರ ಕಲ್ಯಾಣ ಕರ್ನಾಟಕ? ಬಸವಣ್ಣನವರ ಕಲ್ಯಾಣವೇ ಅಥವಾ ಬಿಜ್ಜಳನ ಕಲ್ಯಾಣವೇ?

ಹಿಂದಿ ಹೇರಿಕೆಗೆ ಸಿಪಿಐ(ಎಂ) ವಿರೋಧ

15.09.2019 ಪತ್ರಿಕಾ ಹೇಳಿಕೆ

'ಹಿಂದಿ ರಾಷ್ಟ್ರ ಭಾಷೆಯಾಗಬೇಕು' ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ರವರ ಪ್ರತಿಪಾದನೆಯನ್ನು ಸಿಪಿಎಂ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ವಿರೋಧಿಸಿದೆ. ದೇಶದ ಮೇಲೆ ಒಂದು ಭಾಷೆಯನ್ನು ಹೇರುವುದರೊಂದಿಗೆ ದೇಶದ ಐಕ್ಯತೆ ಬಲಗೊಳ್ಳುವುದಿಲ್ಲ. ಒಂದು ಭಾಷೆಯನ್ನು ದೇಶದ ಜನತೆಯ ಮೇಲೆ ಬಲವಂತವಾಗಿ ಹೇರುವುದರಿಂದ ರಾಷ್ಟ್ರೀಯ ಐಕ್ಯತೆಗೆ ಧಕ್ಕೆಯಾಗಲಿದೆ.

ಭಾರತದಲ್ಲಿ ಅನೇಕ ಭಾಷೆಗಳಲ್ಲಿ ಮಾತನಾಡುವ ಜನರಿದ್ದಾರೆ. ಭಾಷೆ ಒಂದು ಸಂಸ್ಕೃತಿಯ ಪ್ರತೀಕವಾಗಿದೆ. ಒಂದೊಂದು ಭಾಷೆ ಒಂದೊಂದು ಪ್ರತ್ಯೇಕ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಆ ಅರ್ಥದಲ್ಲಿ ನಮ್ಮ ದೇಶ ಭಾರತ ಹಲವು ಭಾಷೆಗಳ, ಹಲವು ಸಂಸ್ಕೃತಿಗಳ ದೇಶ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿದ ದೇಶ. ನಾವು ಭಾರತ ದೇಶದ ಜನತೆ ಇಲ್ಲಿಯ ಎಲ್ಲ ಭಾಷೆಗಳನ್ನು ಸಮಾನವಾಗಿ ಗೌರವಿಸಬೇಕು. ಎಲ್ಲ ಭಾಷೆಗಳ ಅಭಿವೃದ್ಧಿ ಭಾರತ ಸರ್ಕಾರದ ಧೋರಣೆಯಾಗಬೇಕು. ಒಂದು ದೇಶ, ಒಂದು ಭಾಷೆ ಘೋಷಣೆಗೆ ಅವಕಾಶ ಕೊಟ್ಟರೆ್ದ ಆದರೆ ಅದು ಮುಂದೆ ಒಂದು ದೇಶ, ಒಂದು ಭಾಷೆ ಎಂಬಲ್ಲಿಗೆ ನಿಲ್ಲದೆ ಒಂದು ಧರ್ಮ, ಒಂದು ಆಹಾರ ಪದ್ಧತಿ ಇತ್ಯಾದಿ ಅಪಾಯಕಾರಿ ಆಯಾಮ ಪಡೆಯುವ ಸಾಧ್ಯತೆ ಇದೆ.

ಈ ಸಂದರ್ಭದಲ್ಲಿ ಕೇಂದ್ರ ಗೃಹ ಮಂತ್ರಿಗಳಿಗೆ ಗಾಂಧೀಜಿಯವರ ನೆನಪಾಗಿರುವುದು ಸೋಜಿಗವಾಗಿದೆ. ಗಾಂಧೀಜಿಯವರನ್ನು ಕೊಲೆಮಾಡಿ ಅವರ ಎಲ್ಲ ಕನಸುಗಳನ್ನೂ ಕೊಂದವರನ್ನು ಆದರಿಸುವ ಮೋದಿ, ಶಾ ರಂತವರಿಂದ ದೇಶ ಕಲಿಯಬೇಕಾದದ್ದು ಏನೂ ಇಲ್ಲ. ಬೆದರಿಕೆಗಳ ಮೂಲಕ ಇವರು ಜಾರಿ ಮಾಡಲು ಹೊರಟಿರುವ ಹಿಟ್ಲರ್‌ಶಾಹಿ ನೀತಿಯನ್ನು ವಿರೋಧಿಸಿ ಎಲ್ಲರೂ ಒಂದಾಗಿ ಹೋರಾಡುವ ಅಗತ್ಯವಿದೆ.

ಹಿಂದಿ ಹೇರಿಕೆ ವಿರುದ್ಧದ ಹೋರಾಟ ಹಿಂದಿ ಭಾಷಿಕರ ವಿರುದ್ಧದ ಹೋರಾಟವಾಗಿ ಪರಿಣಮಿಸಬಾರದು. ಕರ್ನಾಟಕದಲ್ಲಿ ಹಿಂದಿ ಮಾತೃ ಭಾಷೆ ಹೊಂದಿದ ಜನರಿದ್ದಾರೆ. ಅವರಿಗೆ ಆತಂಕ ಉಂಟುಮಾಡುವ ಪ್ರಯತ್ನಕ್ಕೆ ಯಾರೂ ಮುಂದಾಗಬಾರದೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ

ಪಶ್ಚಿಮ ಬಂಗಾಳ: ವಿದ್ಯಾರ್ಥಿ ಯುವಜನರ ಮೇಲೆ ಪೋಲೀಸ್ ದೌರ್ಜನ್ಯ

ಪಶ್ಚಿಮ ಬಂಗಾಲದ ತೃಣಮೂಲ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ವಿದ್ಯಾರ್ಥಿ ಯುವಜನರ ಮೇಲೆ ನಡೆಸಿದ ಪೋಲೀಸರ ಬರ್ಬರ ಕೃತ್ಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ಸೆಪ್ಟಂಬರ್ 12, 13 ರಂದು ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ಉದ್ಯೋಗದ ಹಕ್ಕುಗಳಿಗಾಗಿ ಮತ್ತು ಶಿಕ್ಷಣ ಸಂಸ್ಥೆಗಳ ಪ್ರಜಾಸತ್ತಾತ್ಮಕ ನಿರ್ವಹಣೆಗಾಗಿ ಮತ್ತು ಶಾಂತಿಯುತ ವಾತಾವರಣಕ್ಕಾಗಿ ರಾಜ್ಯ ಮಟ್ಟದ ಶಾಂತಿಯುತ ಹೋರಾಟಕ್ಕೆ ಕರೆ ನೀಡಿತ್ತು. ಈ ಘೋಷಣೆಯಡಿಯಲ್ಲಿ ಸಾವಿರಾರು ವಿದ್ಯಾರ್ಥಿ ಯುವಜನರು ಸಿಂಗೂರಿನಿಂದ ನ್ಯಾಬನ್ನೂರ್ ಹಾದಿಯಲ್ಲಿ ಸಾಗುತ್ತಿರುವ ಸಂದರ್ಭದಲ್ಲಿ ರಾಜ್ಯ ಪೋಲೀಸರಿಂದ ಅಮಾನುಷ ದಾಳಿಯಾಗಿದೆ.

ಸ್ಥಗಿತಗೊಂಡಿರುವ ಕೈಗಾರಿಕೆಗಳನ್ನು ಪುನರಾರಂಭಿಸಬೇಕು. ಯುವಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕೆಂಬುದು ಹೋರಾಡದ ಪ್ರಮುಖ ಬೇಡಿಕೆಯಾಗಿತ್ತು.

ಕೈಗಾರಿಕೆಗಳು ಸ್ಥಗಿತಗೊಂಡಿರುವುದನ್ನು ತೆರೆಯಬೇಕೆಂಬ ಬೇಡಿಕೆಗಳ ಪಟ್ಟಿಯನ್ನು ಒತ್ತಾಯಿಸಿ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಯವರಿಗೆ ಮನವಿ ನೀಡಲು ಹೋದ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ರಾಜ್ಯದ ಪೋಲಿಸರು ಯಾವುದೆ ಸೂಚನೆ ನೀಡದೆ ವಿದ್ಯಾರ್ಥಿ ಯುವಜನರ ಮೇಲೆ ಮಾರಣಾಂತಿಕ ಲಾಠಿ ಚಾರ್ಜ್, ಸೀಸಾ ಮಿಶ್ರಿತ ರಾಸಾಯನಿಕ ಇರುವಂತಹ ಟಿಯರ್ ಗ್ಯಾಸ್ ಸಿಡಿಸಿದ್ದಾರೆ. ಮಾನವೀಯತೆ ಇಲ್ಲದೆ ಲಾಠಿ ಚಾರ್ಜ್ ಮಾಡಲಾಗಿದೆ. ಈ ಹೋರಾಟದಲ್ಲಿ ಸಣ್ಣ ಹೆಣ್ಣು ಮಕ್ಕಳು ಸಹ ಭಾಗವಹಿಸಿದ್ದರು.

ಸಣ್ಣ ಮಕ್ಕಳು ಅಂತಹ ನೋಡದೆ ಹೊಡೆದಿದ್ದು, ಕೆಲವರಿಗೆ ತೀವ್ರ ತರವಾದ ಗಾಯಗಳಾಗಿವೆ. ಅದೇ ರೀತಿಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯಾಧ್ಯಕ್ಷರು ಮತ್ತು ಪ್ರದಾನ ಕಾರ್ಯದರ್ಶಿ ಹಾಗು ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಕಾರ್ಯದರ್ಶಿಯವರಿಗೆ ತಲೆಗೆ ತೀವ್ರವಾಗಿ ಪೆಟ್ಟಾಗಿದೆ. ನೂರಾರು ಯುವಜನ ವಿದ್ಯಾರ್ಥಿಗಳಿಗೆ ಪೋಲಿಸರು ಲಾಠಿ ಚಾರ್ಜ್ ಮಾಡಿರುವ ಹಿನ್ನೆಲೆಯಲ್ಲಿ ತೀವ್ರ ಗಾಯಗಳಾಗಿ ಪ್ರಜ್ಞೆ ಇಲ್ಲದೆ ಹೌರಾ ಆಸ್ಪತ್ರೆಗೆ ಸೇರಿಸಿದ್ದಾರೆ. ಅವರುಗಳ ಪರಿಸ್ಥಿತಿ ಗಂಭೀರವಾಗಿದೆ.

ಪುರುಷ ಪೋಲಿಸರು ಹೆಣ್ಣುಮಕ್ಕಳೆನ್ನದೆ ನಡು ಬೀದಿಯಲ್ಲಿ ಅತ್ಯಂತ ಅಮಾನವೀಯವಾಗಿ ಬೀದಿಗಳಲ್ಲಿ ಹೊಡೆದಿದ್ದಾರೆ.

ಯುವಕರು ವಿದ್ಯಾರ್ಥಿಗಳಿಗೆ ರಕ್ತಸ್ರಾವವಾಗುತ್ತಿದ್ದರೂ ಮತ್ತೆ ಮತ್ತೆ ಲಾಠಿ ಚಾರ್ಜ್ ಮಾಡಲಾಗಿದೆ.

ರಾಜ್ಯದ ಪೋಲಿಸ್ ಪೋರ್ಸ್ ರಾಜ್ಯದ ಮುಖ್ಯಮಂತ್ರಿಯವರ ನಿಯಂತ್ರಣದಲ್ಲಿರುವುದರಿಂದ ಇಂತಹ ಅಮಾನವೀಯ ರೀತಿಯಲ್ಲಿ ಪಶ್ಚಿಮ ಬಂಗಾಳದ ಪೋಲಿಸರ ಮೂಲಕ ವಿದ್ಯಾರ್ಥಿ ಯುವಜನರ ಮೇಲೆ ದಾಳಿ ಮಾಡಿರುವುದಕ್ಕೆ ಪರೋಕ್ಷವಾಗಿ ಕಾರಣರಾಗುತ್ತಾರೆಂದು ಹೇಳ ಬಯಸುತ್ತೇವೆ.

ಇಂತಹ ಪ್ರಚೋದನಾತ್ಮಕ ದಾಳಿ ಮತ್ತು ಕೃತ್ಯವನ್ನು ನಡೆಸಿದ ತೃಣಮೂಲ ಕಾಂಗ್ರೆಸ್ ಸರ್ಕಾರದ ಪೋಲಿಸ್ ನವರ ಕೃತ್ಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಹೋರಾಟ ಮಾಡುತ್ತಿರುವ ಪಶ್ಚಿಮ ಬಂಗಾಳದ ವಿದ್ಯಾರ್ಥಿ ಯುವಜನರ ಹೋರಾಟವನ್ನು ಬೆಂಬಲಿಸುತ್ತದೆ. ಮತ್ತು ಅವರ ಹೋರಾಟದ ಜೊತೆಯಲ್ಲಿ ನಾವು ಅವರೊಂದಿಗೆ ನಿಲ್ಲುತ್ತೇವೆಂದು ಈ ಮೂಲಕ ತಿಳಿಯಬಯಸುತ್ತೇವೆ. ●

ಶಿಕ್ಷಣ ಉದ್ಯೋಗ ಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಎಸ್.ಎಫ್.ಐ, ಡಿ.ವೈ.ಎಫ್.ಐ ಕಾರ್ಯಕರ್ತರ ಮೇಲೆ ನಡೆದ ಲಾಠಿ ಚಾರ್ಜ ಖಂಡಿಸಿ ಪ್ರತಿಭಟನೆ



ಶಿಕ್ಷಣ ಮತ್ತು ಉದ್ಯೋಗ ನೀಡುವಂತೆ ಆಗ್ರಹಿಸಿ ಪಶ್ಚಿಮ ಬಂಗಾಳದಲ್ಲಿ ಎಸ್.ಎಫ್.ಐ– ಡಿವೈಎಫ್ಐ ಸೇರಿದಂತೆ 12 ಸಂಘಟನೆಗಳು ನಡೆಸಿದ ಪ್ರತಿಭಟನೆಯ ಮೇಲೆ ಮಮತಾ ಬ್ಯಾನರ್ಜಿ ಸರಕಾರ ಲಾಠಿ ಬೀಸಿದೆ. ಸರಕಾರದ ಈ ಕ್ರಮವನ್ನು ವಿರೋಧಿಸಿ ಎಸ್.ಎಫ್.ಐ ಕಾರ್ಯಕರ್ತರು ಹಾವೇರಿಯ ಹೊಸಮನಿ ಸಿದ್ದಪ್ಪ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಮಾತನಾಡುತ್ತಾ, ಶಿಕ್ಷಣ – ಉದ್ಯೋಗ ನಮ್ಮ ಮೂಲಭೂತ ಹಕ್ಕಾಗಬೇಕು. ಅದನ್ನು ಕೇಳಿದವರ ಮೇಲೆ ಲಾಠಿ ಬೀಸುವುದು, ಜಲಫಿರಂಗಿ ಬಳಸುವುದು ಸರಿಯಾದ ಕ್ರಮವಲ್ಲ. ಇದು ವಿದ್ಯಾರ್ಥಿ–ಯುವಜನ ವಿರೋಧಿ ನೀತಿಯಾಗಿದೆ. ದೌರ್ಜನ್ಯದ ಮೂಲಕ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ. ದೇಶದಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಅವುಗಳನ್ನು ನಿವಾರಿಸುವ ಬದಲು ಲಾಠಿ ಭಿಸುತ್ತಾರೆ ಎಂದರೆ ಆ ಸಮಸ್ಯೆಗಳನ್ನು ಮರೆ ಮಾಚುವುದು ಸರಕಾರದ ಕೆಲಸವಾಗಿವೆ. ಇದು ಖಂಡನೀಯ. ಉಚಿತ ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ದೇಶವ್ಯಾಪಿ ಪ್ರತಿಭಟನೆ ನಡೆಸುತ್ತೇವೆ ಎಂದರು.

ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ಲಾಠಿ ಬೀಸುವ ಸಂಸ್ಕೃತಿಯು ಸರ್ವಾಧಿಕಾರಿ ಧೋರಣೆಯನ್ನು ಎತ್ತಿ ಹಿಡಿಯುತ್ತದೆ. ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿ ಯುವಜನರನ್ನು ಕಾಡುತ್ತಿದೆ. ಅದು ಪ್ರಮುಖ ಪ್ರಶ್ನೆಯಾಗಿದೆ. ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ನಿರುದ್ಯೋಗವನ್ನು ನಿವಾರಿಸಿ ಎಂದು ಪ್ರತಿಭಟನೆ ನಡೆಸಿದವರ ಮೇಲೆ ಹಲ್ಲೆ, ದೌರ್ಜನ್ಯ ನಡೆಸುತ್ತಾರೆ ಎಂದಾದರೆ ಅದು ಅಮಾನವೀಯ. ದಾಳಿ ಮೂಲಕ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ. ಗೋಲಿಬಾರ್ ನಡೆಸಿದರೂ ಯಾವ ಚಳುವಳಿಗಳು ನಿಲ್ಲುವುದಿಲ್ಲ. ಹಾಗಾಗಿ ಆಳುವ ಸರಕಾರಗಳು ಶಿಕ್ಷಣ ಮತ್ತು ಉದ್ಯೋಗ ನೀಡಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ. ಡಿವೈಎಫ್ಐ ನ ಮುಕ್ತಾನಂದ ಹಿರೇಮನಿ. ಜ್ಯೋತಿ ದೊಡ್ಮನಿ, ಬಸನಗೌಡ, ಜ್ಯೋತಿ ಪೋಲಿಸಗೌಡ, ಅಭಿಷೇಕ ಕಲಾಲ್, ಮಂಜುನಾಥ್ ಮಡಿವಾಳರ, ಲಕ್ಷಣ ಕೆಂಗಪ್ಪಳವರ, ಬೀರೇಶ್ ಹೀಲದಳ್ಳಿ, ಶ್ರೀಕಾಂತ ಬಾರ್ಕಿ, ಸೇರಿದಂತೆ ಅನೇಕರಿದ್ದರು. ●

ವೃತ್ತಿಪರ ವಸತಿ ನಿಲಯವನ್ನು ಮಂಜೂರು ಮಾಡಲು ಆಗ್ರಹ

ರಾಣೇಬೆನ್ನೂರ : ನಗರವು ಒಂದು ವಿಶಾಲವಾದ ವಿದ್ಯಾರ್ಥಿ ಸಮುದಾಯ ಹೊಂದಿದ ನಗರವಾಗಿದೆ. ರಾಣೇಬೆನ್ನೂರ ನಗರಕ್ಕೆ ವಿದ್ಯಾಭ್ಯಾಸಕ್ಕಾಗಿ ಅತಿ ದೂರದ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದುಕೊಳ್ಳಲು ವಸತಿ ನಿಲಯಕ್ಕಾಗಿ ಅಲೆದಾಡುವಂತಾಗಿದೆ. ಕೂಡಲೇ ಸರ್ಕಾರ ನಗರಕ್ಕೆ ವೃತ್ತಿಪರ ವಸತಿ ನಿಲಯವನ್ನು ಮಂಜೂರು ಮಾಡುವಂತೆ ಒತ್ತಾಯಿಸಿ ಎಸ್.ಎಫ್.ಐ ಕಾರ್ಯಕರ್ತರು ತಾಲೂಕ ತಹಶೀಲ್ದಾರ ಮೂಲಕ ಸಿಎಂ ಅವರಿಗೆ ಮನವಿ ಸಲ್ಲಿಸಿದರು.

ಎಸ್.ಎಫ್.ಐ. ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ ಮಾತನಾಡಿ ನಗರದಲ್ಲಿ ಕಾನೂನು, ಐಟಿಐ, ಡಿಪ್ಲೋಮಾ, ಬಿಎಡ್, ಬಿಪಿಎಡ್, ಪ್ಯಾರಾ ಮೆಡಿಕಲ್, ಟಿಸಿಹೆಚ್, ಇಂಜಿನಿಯರಿಂಗ್ ಮುಂತಾದ ವೃತ್ತಿಪರ ಕೋರ್ಸಿನ ಸಾವಿರಾರು ವಿದ್ಯಾರ್ಥಿಗಳು ರಾಣೇಬೆನ್ನೂರ ತಾಲ್ಲೂಕಿನಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ವೃತ್ತಿಪರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿ ನಿಲಯ ಇಲ್ಲದ ಕಾರಣಕ್ಕೆ ಬಹುತೇಕ ವಿದ್ಯಾರ್ಥಿಗಳು ನರಳಾಡುವಂತಹ ಸ್ಥಿತಿ ನಿರ್ಮಾಣವಾಗಿದೆ ಕೆಲವರು ಬೇರೆ ಜಿಲ್ಲೆಯಲ್ಲಿ ಶಿಕ್ಷಣ ಮುಂದುವರೆಸಿರುತ್ತಾರೆ. ಇನ್ನೂ ಕೆಲವರು ಅರ್ಧಕ್ಕೆ ಮೊಟಕುಗೊಳಿಸಿರುತ್ತಾರೆ. ಬೇರೆ ಜಿಲ್ಲೆಯ ಬೇರೆ ತಾಲ್ಲೂಕಿನಿಂದ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣಕ್ಕಾಗಿ ವಿದ್ಯಾಭ್ಯಾಸ ಮಾಡಲು ರಾಣೇಬೆನ್ನೂರಿಗೆ ಬಂದಿರುತ್ತಾರೆ. ಆದ ಕಾರಣ ರಾಣೇಬೆನ್ನೂರ ತಾಲ್ಲೂಕನ್ನು ಅಭಿವೃದ್ಧಿ ಪರ ಶಿಕ್ಷಣ ಕೇಂದ್ರವಾಗಿ ಮುಂದಿನ ದಿನಗಳಲ್ಲಿ ಬೆಳೆಯಲು ಆದ್ಯತೆ ನೀಡಿ ವೃತ್ತಿಪರ ಕೋರ್ಸ್ ಮಾಡುವ ವಿದ್ಯಾರ್ಥಿಗಳ ಬೇಡಿಕೆಗೆ ಈ ಕೂಡಲೇ ಸರ್ಕಾರ ಸ್ಪಂದಿಸಿ ವೃತ್ತಿಪರ ಕೋರ್ಸಿನ ವಿದ್ಯಾರ್ಥಿಗಳಿಗೆ ವಸತಿ ನಿಲಯ ಮಂಜೂರು ಮಾಡಬೇಕು ಎಂದು ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ ಒತ್ತಾಯಿಸಿದರು.



ಮುಖಂಡರಾದ ಗಿರೀಶ ಹೊಸಮನಿ ಮಾತನಾಡಿ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡಬೇಕು ಮತ್ತು ಪ್ರಸ್ತುತ ವಸತಿ ನಿಲಯಗಳು ಆರಂಭವಾಗಿದ್ದು ವೃತ್ತಿಪರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ ಆ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಣೆ ಮಾಡದೆ ವಸತಿ ಕಲ್ಪಿಸಬೇಕೆಂದು ಮುಂದಿನ ದಿನಗಳಲ್ಲಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ,ಅಲ್ಪಸಂಖ್ಯಾತ ,ಪರಿಶಿಷ್ಟ ಪಂಗಡ ಇಲಾಖೆಗಳಿಂದ ವಸತಿ ನಿಲಯ ಮಂಜೂರು ಮಾಡಬೇಕು ಒಂದು ವೇಳೆ ವಿದ್ಯಾರ್ಥಿಗಳ ಬೇಡಿಕೆ ಈಡೇರದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ತೆರನಾದ ಹೋರಾಟ ಮಾಡಲಾಗುವುದು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕಾರ್ಯದರ್ಶಿ ಲಕ್ಷ್ಮಣ ಕೆಂಗಪ್ಪಳವರ, ಮುಖಂಡರಾದ ಗಿರೀಶ್ ಹೊಸಮನಿ, ಶ್ರೀಕಾಂತ್ ಬಾರ್ಕಿ, ಆದಿತ್ಯ ಉದಾವತ್, ಮಾರುತಿ ನೇಶ್ವಿ, ದಿನೇಶ್ ವಿಭೂತಿ, ಕಿರಣ ಭಜಂತ್ರಿ, ವಿನಾಯಕ ಇದ್ದರು.

ಬಸವರಾಜ ಭೋವಿ

ಜೆಎನ್‌ಯು ವಿದ್ಯಾರ್ಥಿ ಒಕ್ಕೂಟದ ಚುನಾವಣೆಯಲ್ಲಿ ಎಡ ಸಂಯುಕ್ತ ಅಭ್ಯರ್ಥಿಗಳ ಜಯಭೇರಿ



ಜವರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟಕ್ಕೆ ಸೆಪ್ಟೆಂಬರ್ 6 ರಂದು ನಡೆದ ಚುನಾವಣೆಯಲ್ಲಿ ಪದಾಧಿಕಾರಿ ಸ್ಥಾನಗಳಲ್ಲಿ ಸ್ಪರ್ಧಿಸಿದ ಎಲ್ಲಾ 4 ಎಡ ಸಂಯುಕ್ತ ಒಕ್ಕೂಟದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ದೆಹಲಿ ಹೈಕೋರ್ಟ್ ಅನುಮತಿ ನೀಡಿದ ಬಳಿಕ ಚುನಾವಣೆ ನಡೆಸಿದ ಚುನಾವಣಾ ಸಮಿತಿಯ ಫಲಿತಾಂಶವನ್ನು ಪ್ರಕಟಿಸಿತು.

ಎಡ ಸಂಯುಕ್ತ ಒಕ್ಕೂಟದ ಅಭ್ಯರ್ಥಿಯಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಸ್‌ಎಫ್‌ಐನ ಆಯಿಶ್ ಘೋಶ್ 2313 ಮತಗಳನ್ನು ಗಳಿಸಿ ಆಯ್ಕೆಯಾದರು. ಅವರ ವಿರುದ್ಧ ಸ್ಪರ್ಧಿಸಿದ್ದ ಎಬಿವಿಪಿ ಅಭ್ಯರ್ಥಿ ಮಾನಿಷ್ ಜಂಗೀಡ್ 1128 ಮತ ಪಡೆದು ಸೋಲು ಅನುಭವಿಸಿದರು.

ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಎಡ ಸಂಯುಕ್ತ ಒಕ್ಕೂಟದ ಅಭ್ಯರ್ಥಿ ಸಾಂಕೇತ್ ಮೂನ್ 3365 ಮತಗಳನ್ನು ಪಡೆದು ಜಯಶೀಲರಾದರು. ಎಬಿವಿಪಿಯ ಶೃತಿ ಅಗ್ನಿಹೋತ್ರಿ 1335 ಮತಗಳನ್ನು ಪಡೆದು ಎರಡನೇ ಸ್ಥಾನ ಪಡೆದರು.

ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು 2518 ಮತಗಳನ್ನು ಪಡೆದು ಎಡ ಸಂಯುಕ್ತ ಒಕ್ಕೂಟದ ಸತೀಶ್ ಯಾದವ್ ಗೆದ್ದು ಕೊಂಡರು. 1355 ಮತಗಳನ್ನು ಪಡೆದ ಎಬಿವಿಪಿಯ ಸಬರೀಷ್ ಎರಡನೇ ಸ್ಥಾನ ಪಡೆದರು.

ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಡ ಸಂಯುಕ್ತ ಒಕ್ಕೂಟದ ಅಭ್ಯರ್ಥಿ ಮಹಮ್ಮದ್ ಡ್ಯಾನಿಷ್ 3295 ಮತಗಳನ್ನು ಪಡೆದು ಜಯಶೀಲರಾದರೆ, ಎಬಿವಿಪಿಯ ಸುಮಾಂತ ಕುಮಾರ್ ಸಾಹು 1508 ಮತಗಳನ್ನು ಪಡೆದು ಎರಡನೆಯ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

ಹಿಂದಿನ ವರ್ಷವೂ ಎಲ್ಲ 4 ಸ್ಥಾನಗಳನ್ನು ಎಡ ಸಂಯುಕ್ತ ಒಕ್ಕೂಟದ ಅಭ್ಯರ್ಥಿಗಳೇ ಗೆದ್ದು ಕೊಂಡಿದ್ದರು. ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ಎಡ ಸಂಯುಕ್ತ ವಿದ್ಯಾರ್ಥಿ ಒಕ್ಕೂಟವನ್ನು ಬೆಂಬಲಿಸುವ ಎಸ್‌ಎಫ್‌ಐ, ಎಐಎಸ್‌ಎಫ್, ಎಐಎಸ್‌ಎ, ಡಿಎಸ್‌ಎಫ್ ಸಂಘಟನೆಗಳ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಮೆರವಣಿಗೆ ನಡೆಸಿ ವಿಜಯೋತ್ಸವವನ್ನು ಆಚರಿಸಿದರು.

ಪ್ರಜಾಪ್ರಭುತ್ವವನ್ನು ಕೊನೆಗೊಳಿಸಲು ಒಂದು ವಿವೇಚನೆಯಿಲ್ಲದ ಕರೆ



ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಭಾರತದಲ್ಲಿ ಅಂಗೀಕರಿಸಲ್ಪಟ್ಟ ಆಡಳಿತ ವ್ಯವಸ್ಥೆಯನ್ನು ಮತ್ತು ಅದು ಜಾರಿಗೆ ತಂದಿರುವ ವ್ಯವಸ್ಥೆಗಳನ್ನು ಪ್ರಶ್ನಿಸುವ ಒಂದರ ನಂತರ ಒಂದು ವಿಚಾರವನ್ನು ಹೊರತಂದಿರುವುದು ಆಕಸ್ಮಿಕವಲ್ಲ. ರಾಷ್ಟ್ರವನ್ನು 'ಏಕೀಕರಿಸಲು' ಹಿಂದಿಯನ್ನು ರಾಷ್ಟ್ರೀಯ ಭಾಷೆಯಾಗಿ ಪ್ರತಿಪಾದಿಸಿದ ಕೂಡಲೇ, ಅವರು ದೇಶದ ಬಹು-ಪಕ್ಷ ವ್ಯವಸ್ಥೆಯ ಉಪಯೋಗಗಳು ಮತ್ತು ಪರಿಣಾಮಕಾರಿತ್ವದ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ. ಹಿಂದಿಯೇತರ ರಾಜ್ಯಗಳ ವಿರೋಧವನ್ನು ಎದುರಿಸಿದ ನಂತರ ಅವರು ಇತರ ಭಾಷೆಗಳನ್ನು, ಕಡಿಮೆ ಪ್ರಾಮುಖ್ಯತೆ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದ್ದರೂ, ಅದು ಎಲ್ಲ ಅನುಮಾನಗಳನ್ನು ಪರಿಹರಿಸಿಲ್ಲ. ವಾಸ್ತವವಾಗಿ, ಆಲೋಚನೆಗಳನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗುವುದಿಲ್ಲ,ಮತ್ತು ಸ್ಪಷ್ಟೀಕರಣಗಳು ಮತ್ತು ಹಿಂತೆಗೆದುಕೊಳ್ಳುವಿಕೆಯ ನಂತರವೂ ಅವು ಮನಸ್ಸಿನಲ್ಲಿ ಕಾಲಹರಣ ಮಾಡುತ್ತವೆ. ಮೊದಲಿಗೆ ಅವುಗಳನ್ನು ಪ್ರಸ್ತಾಪಿಸುವ ಹಿಂದಿನ ಉದ್ದೇಶವೆಂದರೆ ಜನರ ಮನಸ್ಸಿನಲ್ಲಿ ಅವುಗಳ ಬೀಜವನ್ನು ಬಿತ್ತುವುದು. ಭವಿಷ್ಯದ ಯೋಜನೆಗಳ ಸುಳಿವುಗಳನ್ನು ನೀಡುವುದು ಮತ್ತು ಅವುಗಳನ್ನು ಅಲ್ಲಿಯೇ ಇಡುವುದು, ಅದರ ಪರಿಣಾಮವನ್ನು ಕಡಿಮೆ ಮಾಡಿದ ನಂತರ, ಸಮಯ ನೋಡಿ ಅದನ್ನು ಕಾರ್ಯಾಚರಣೆಗೆ ತರುವುದೇ ತತ್‌ಕ್ಷಣದ ಇದರ ಉದ್ದೇಶ.

ಹಿಂದಿಗೆ ಪ್ರಾಮುಖ್ಯತೆ ನೀಡುವ ಮತ್ತು ಅದರ ಸ್ಥಾನಮಾನವನ್ನು ಹೆಚ್ಚಿಸುವ ಯಾವುದೇ ಕ್ರಮಕ್ಕಿಂತ ಬಹು-ಪಕ್ಷ ವ್ಯವಸ್ಥೆಯ ಬಗ್ಗೆ ಷಾ ಅವರ ಟೀಕೆ ಹೆಚ್ಚು ಮೂಲಭೂತವಾದದ್ದು ಮತ್ತು ಅಪಾಯಕಾರಿ. ರಾಜಕೀಯ ಪಕ್ಷಗಳ ಬಹುಸಂಖ್ಯೆಯ ಅಸ್ತಿತ್ವದ ಮೇಲೆ ನಿರ್ಮಿಸಲಾದ ಪ್ರಜಾಪ್ರಭುತ್ವದ ಕಲ್ಪನೆಯನ್ನು ಇದು ಪ್ರಶ್ನಿಸುತ್ತದೆ. "ಹೊಸ ಭಾರತ, ಗ್ರೇಟ್ ಇಂಡಿಯಾ" ಕುರಿತ ಸಮಾವೇಶದಲ್ಲಿ, "ಬಹು-ಪಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯು ಜನರ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆಯೆ" ಎಂದು ಶಾ ಆಶ್ಚರ್ಯಪಟ್ಟರು. ಮತ್ತು ಮುಂದುವರಿದು ಅವರು "ಸಂಸ್ಥಾಪಕ ಪಿತಾಮಹರ ಕಣ್ಣೋಟ ಸಾಫಲ್ಯತೆ ಕಂಡಿದೆಯೆ' ಎಂಬ ಪ್ರಶ್ನೆ ಜನರ ಮನಸ್ಸಿನಲ್ಲಿದೆ ಎಂದು ಹೇಳಿದರು. ಈಗವರು ಸಂಸ್ಥಾಪಕ ಪಿತಾಮಹರ ಬಗ್ಗೆ ಔದಾರ್ಯ ಪ್ರದರ್ಶನ ಮಾಡುತ್ತಿದ್ದಾರೆ, ಏಕೆಂದರೆ ಅವರೆಲ್ಲರನ್ನು ದೂಷಿಸುವುದು ಹಾಗೂ ಖಂಡಿಸುವುದು, ವಿಶೇಷವಾಗಿ ಪ್ರಸಕ್ತ ಪರಿಸ್ಥಿತಿಯಲ್ಲಿ ವಿರುದ್ಧ ಪರಿಣಾಮ ಬೀರುತ್ತದೆ. ಬಹು ಪಕ್ಷೀಯ ವ್ಯವಸ್ಥೆ ಭಾರತದಂತಹ ವೈವಿಧ್ಯತೆಯ ದೇಶಕ್ಕೆ ಬಹು ಸೂಕ್ತವಾಗಿದೆ ಎಂದು ಸಂಸ್ಥಾಪಕ ಪಿತಾಮಹರು ನಿರ್ಧರಿಸಿದ್ದರು ಮತ್ತು ಷಾ ರವರು ಪಟ್ಟಿ ಮಾಡಿರುವ ಭ್ರಷ್ಟಾಚಾರ, ಭದ್ರತೆಯ ಪ್ರಶ್ನೆ, ಧೋರಣಾತ್ಮಕ ಅವನತಿ ಅಥವಾ ಕಣ್ಣೋಟದ ಕೊರತೆ ಇತ್ಯಾದಿ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಬಿಡಿ ಬಿಡಿಯಾಗಿ ಅಥವಾ ಎಲ್ಲವೂ ಒಟ್ಟಾಗಿ, ಆ ನಿರ್ಧಾರದಿಂದಾಗಿ ಹೊರ ಹೊಮ್ಮಿದವುಗಳಲ್ಲ; ಮಾತ್ರವಲ್ಲ ಅದನ್ನು ಒಂದು ತಪ್ಪು ಆಯ್ಕೆಯಾಗಿಸುವುದಿಲ್ಲ.

ಪ್ರಜಾಪ್ರಭುತ್ವ ಅನೇಕ ನ್ಯೂನತೆಗಳನ್ನು ಹೊಂದಿದೆ. ಆದರೂ ಅದೊಂದು ಅತ್ಯುತ್ತಮ ವ್ಯವಸ್ಥೆ. ಅದು ಅತ್ಯಂತ ದಕ್ಷ ವ್ಯವಸ್ಥೆಯೆಂದೇನೂ ಅಲ್ಲ; ಬದಲಾಗಿ ಒಂದು ಅತ್ಯಂತ ಪ್ರಾತಿನಿಧಿಕ ಹಾಗೂ ಒಳಗೊಳ್ಳುವಿಕೆಯ ವ್ಯವಸ್ಥೆಯಾಗಿರುವುದರಿಂದಾಗಿ- ಇದಕ್ಕೆ ಪರ್ಯಾಯವೆಂದರೆ ಈ ಎಲ್ಲಾ ನ್ಯೂನತೆಗಳು, ಹೆಚ್ಚು ಬೃಹತ್ತಾಗಿ ಮತ್ತು ವ್ಯಾಪಕ ರೂಪದಲ್ಲಿ ಇದ್ದೇ ಇರುವ ಏಕಪಕ್ಷೀಯ ವ್ಯವಸ್ಥೆ. ಏಕಪಕ್ಷೀಯ ವ್ಯವಸ್ಥೆಯಲ್ಲಿನ ಸರ್ಕಾರ ಅನಿವಾರ್ಯವಾಗಿ ನಿರಂಕುಶ ಸರ್ವಾಧಿಕಾರಿಯಾಗಿರುತ್ತದೆ ಹಾಗೂ ಜನರ ಹಕ್ಕುಗಳನ್ನು ನಿರಾಕರಿಸಿ ಅವರಿಗೆ ಬದಲಾವಣೆಯ ಅವಕಾಶವನ್ನು ಕೊಡದೆ ತನ್ನ ಬುಡಭದ್ರ ಮಾಡಿಕೊಳ್ಳುತ್ತದೆ. ಇದೇ ಸಂಘ ಪರಿವಾರದ ಗುರಿ ಮತ್ತು ಶಾ ರವರು ಅದನ್ನೇ ನಿಖರವಾಗಿ ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ರೀತಿಯ ಅಭಿವ್ಯಕ್ತಿಯ ಮೂಲಕ ಅವರು 'ಕಾಂಗ್ರೆಸ್ ಮುಕ್ತ ಭಾರತ' ಘೋಷಣೆಯನ್ನು ವಿಸ್ತರಿಸಿ 'ಪ್ರತಿಪಕ್ಷ ಮುಕ್ತ ಭಾರತದ' ಮಟ್ಟಕ್ಕೆ ತಂದಿಟ್ಟಿದ್ದಾರೆ. ಪ್ರಜಾಪ್ರಭುತ್ವ ರಹಿತ ಭಾರತಕ್ಕಾಗಿ ಇದೊಂದು ಶಿಫಾರಸ್ಸು ಘೋಷಣೆ.

ಡೆಕ್ಕನ್ ಹೆರಾಲ್ಡ್ ಕೃಪೆ
ಅನುವಾದ : ಎಂ.ಆರ್. ಶೆಣೈ

ಕ್ಷಮಿಸಿ ಬಿಡು ಮಗು

ಕವನ

ಕ್ಷಮಿಸಿ ಬಿಡು ಮಗು
ಮಗು, ನೀನಿನ್ನೂ
ಹೂವಾಗಿ ಅರಳಬೇಕಿತ್ತು
ಅರಳುವ ಮುನ್ನವೇ
ನಿನ್ನ ಬದುಕನ್ನು
ಮೊಗ್ಗಿನಲ್ಲೇ ಚಿವುಟಿ ಹಾಕಿದ
ಆ ಕೈಗಳನ್ನು
ಕ್ಷಮಿಸಿ ಬಿಡು

ಹಸಿದ ಹೊಟ್ಟೆಯ
ನಿನ್ನ ಆರ್ತನಾದ
ನನ್ನ ಸಮಾಜದ ಕಿವಿಗಳಿಗೆ
ಕೇಳಿಸಲಿಲ್ಲ.
ಅಥವಾ,
ಜಾಣಕಿವುಡರಾಗಿದ್ದೆವೋ! ಏನೋ!
ಆದರೂ ನೀನು
ಕ್ಷಮಿಸಿ ಬಿಡು ನಮ್ಮನ್ನು

ನಿನಗೊಂದು ತುತ್ತು
ಅನ್ನ ನೀಡಲು
ಯಾರಿಗೂ ಕಷ್ಟವಿರಲಿಲ್ಲ
ಆದರೆ
ಲಾಭವಿರಲಿಲ್ಲ ನಮಗೆ
ಲಾಭ-ನಷ್ಟ ಲೆಕ್ಕಾಚಾರದಲಿ
ನಿನ್ನ ಜೀವ ಹೋದರೂ
ನಮಗೆ ಚಿಂತೆಯಿರಲಿಲ್ಲ
ಕಣ್ಣುಗಳಿದ್ದರೂ ನಮಗೆ
ಕರುಣೆಯಿರಲಿಲ್ಲ.

ಕ್ಷಮಿಸಿ ಬಿಡು ಮಗು
ನಿನ್ನ ಸಾವಿನ ಸಂಕಟ
ತಟ್ಟಲಿಲ್ಲ ನಮ್ಮ ಹೃದಯವನ್ನು
ಹೃದಯಗಳು ಕಲ್ಲಾಗಿ ಬಿಟ್ಟಿವೆ
ಕಲ್ಲು ಹೃದಯದ ನನ್ನನ್ನೂ
ನನ್ನ ಸಮಾಜವನ್ನೂ
ಕ್ಷಮಿಸಿಬಿಡು ಮಗು
ಸಾವಿನ ಸಂತೆಯಲಿ
ನಿನ್ನ ಹೆಣವೂ ಒಂದು ಸರಕು
ಟಿ.ಆರ್.ಪಿ.ಹೆಚ್ಚಿಸಲು
ಬೇಕಿಲ್ಲ ಬೇರೊಂದು ಸರಕು
ಟಿ.ವಿ.ಪರದೆಯ ಮೇಲೆ
ಮೊಸಳೆ ಕಣ್ಣೀರು
ಸುರಿಸುವವರನ್ನು ಕಂಡು
ನೊಂದುಕೊಳ್ಳಬೇಡ
ಸಾಧ್ಯವಾದರೆ
ಯೇಸುವಿನಂತೆ
ಅವರನ್ನೊಮ್ಮೆ
ಕ್ಷಮಿಸಿ ಬಿಡು ಮಗು.

(ಬೆಳಗಾವಿ ಜಿಲ್ಲೆಯಲ್ಲಿ ನೆರೆ ಸಂತ್ರಸ್ತ ಮಗುವೊಂದು ಹಸಿವಿನಿಂದ ಸಾವನ್ನಪ್ಪಿದ ಘಟನೆಯ ಕುರಿತು ಬರೆದ ಕವನ)

-ಹುಲಿಕಟ್ಟಿ ಚನ್ನಬಸಪ್ಪ
ಹರಿಹರ.

ದಲಿತ ಹಕ್ಕುಗಳ ಸಮಿತಿ ಯ ಆಶ್ರಯದಲ್ಲಿ 'ಜಾನಪದ ಲೋಕ' ದಲ್ಲಿ ಮೂರು ದಿನಗಳ ಕಾಲ ಅಧ್ಯಯನ ಶಿಬಿರ.... ಅಕ್ಟೋಬರ್ 18 ರಿಂದ 20 '2019

ಗೋಪಾಲಕೃಷ್ಣ ಹರಳಹಳ್ಳಿ

ಆಧುನಿಕ ಭಾರತದಲ್ಲಿ ಆರ್ಥಿಕ, ಮತ್ತು ಸಾಮಾಜಿಕ ವಾಗಿ ಅಸ್ಪೃಶ್ಯತೆ ಹಾಗೂ ಜಾತಿ ತಾರತಮ್ಯಕ್ಕೆ ತುತ್ತಾಗಿ ತೀವ್ರ ತರದಲಿ ವಂಚನೆಗೆ ಒಳಪಟ್ಟವರು ದಲಿತ ಸಮುದಾಯ. ಈ ಶ್ರೇಣಿಕೃತ ಜಾತಿ ಪದ್ಧತಿಯ ನಿರ್ಮೂಲನೆ ಹಾಗೂ ದಲಿತ ಸಮುದಾಯದ ಸಂವಿಧಾನ ಬದ್ಧ ಹಕ್ಕುಗಳ ರಕ್ಷಣೆಗಾಗಿ, "ದಲಿತ ಹಕ್ಕುಗಳ ಸಮಿತಿ"(ಡಿ.ಎಚ್.ಎಸ್) ಕರ್ನಾಟಕ ರಾಜ್ಯದಲ್ಲಿ ನಿರಂತರವಾಗಿ ಹೋರಾಟ ಮಾಡಿಕೊಂಡು ಬರುತ್ತಿದೆ. ಡಿ.ಎಚ್.ಎಸ್. ಅಖಿಲ ಭಾರತ ಮಟ್ಟದಲ್ಲಿ "ದಲಿತ್ ಶೋಷಣ್ ಮುಕ್ತಿ ಮಂಚ್" (ಡಿ.ಎಸ್.ಎಂ.ಎಂ) ನ ವೇದಿಕೆಗೆ ಸೇರ್ಪಡೆಯಾಗಿದೆ....

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 72 ವರ್ಷಗಳು ತುಂಬಿದೆ. 1950 ರಲ್ಲಿ ಗಣತಂತ್ರವಾಗಿ "ಒಂದು ಪ್ರಬುದ್ಧ ಸಂವಿಧಾನ" ವನ್ನು ಒಪ್ಪಿಕೊಂಡು 69 ವರ್ಷಗಳನ್ನು ಕಳೆದಿದ್ದೇವೆ. ಸಂವಿಧಾನದ ಅನುಚ್ಛೇದ 15, ಅಸ್ಪೃಶ್ಯತಾ ಆಚರಣೆಗಳನ್ನು ರದ್ದುಗೊಳಿಸಿದೆ. ಆದಾಗ್ಯೂ, ಇದರ ಆಳವಾದ ಬೇರುಗಳು ನಮ್ಮ ಸಮಾಜದಲ್ಲಿ ಎಷ್ಟರ ಮಟ್ಟಿಗೆ ಆವರಿಸಿಕೊಂಡಿದೆ ಎಂಬುದಕ್ಕೆ, ಕೆಲವೇ ದಿನಗಳ ಹಿಂದೆ, "ಸಂಸತ್ ಸದಸ್ಯ" ರೊಬ್ಬರನ್ನು ದಲಿತ ನೆಂಬ ಕಾರಣದಿಂದ ಪಾವಗಡ ತಾಲ್ಲೂಕಿನ ಪೆಮ್ಮನ ಹಳ್ಳಿಯ ಗೊಲ್ಲರಹಟ್ಟಿ ಪ್ರವೇಶಕ್ಕೆ ತಡೆಯೊಡ್ಡಿ, ಅವಮಾನಿಸಿದ ಘಟನೆ ಈ ಶ್ರೇಣಿಕೃತ ಅಸ್ಪೃಶ್ಯತಾ ಆಚರಣೆಯು ಎಷ್ಟೊಂದು ಕಠೋರವಾಗಿ ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಕನ್ನಡಿ ಹಿಡಿದ ಅಗಿದೆ.

ಇಂಡಿಯನ್ ಕೌನ್ಸಿಲ್ ಫಾರ್ ಸೋಷಿಯಲ್ ಸೈನ್ಸ್ ರಿಸರ್ಚ್ ನವ ದೆಹಲಿ ಯ, ಪ್ರೊ.ಸುಖದೇವ್ ಥೋರಟ್ ರ ಸಂಶೋಧನೆ ಪ್ರಕಾರ, ಭಾರತ ದೇಶದಲ್ಲಿ " ಜಾತಿ " ಎಂಬ ಹೆಸರಿನಲ್ಲಿ ಸಾಮಾಜಿಕ ಬಹಿಷ್ಕಾರ ಮತ್ತು ಆರ್ಥಿಕ ತಾರತಮ್ಯ " ಕ್ಕೆ ತುತ್ತಾಗಿ ವಂಚಿಸಲ್ಪಟ್ಟ ಸಮುದಾಯ ಎಂದರೆ " ದಲಿತರು " , ಇವರನ್ನು ಈ ನಾಗರಿಕತೆಯ ಸಮಾಜ ಇನ್ನೂ ಅಸ್ಪೃಶ್ಯತೆ ಯ ಆಚರಣೆಯ ಮೂಲಕ ಇವರನ್ನು ಅವಮಾನಿಸುತ್ತಿದೆ. ಇದನ್ನು ನಿರ್ಮೂಲನೆ ಮಾಡಲು " ದೃಢವಾದ ರಾಜಕೀಯ ಇಚ್ಛಾಶಕ್ತಿ " ಇರಬೇಕು. ಆದರೆ, ಪಾಳೇಗಾರ ಪದ್ಧತಿಯ ಮೌಲ್ಯಗಳು ಹಾಗೂ ಮನು ಸ್ಮೃತಿಯ ಮೌಢ್ಯಗಳು ಪ್ರಸ್ತುತ ಬಂಡವಾಳಶಾಹಿ ಶೋಷಣೆ ಯೊಂದಿಗೆ ಶಾಮೀಲಾಗಿ, ಜಾತಿ ಪದ್ಧತಿಯನ್ನು ಪ್ರೋತ್ಸಾಹ ಮಾಡುತ್ತಿದೆ ಎಂದಿದ್ದಾರೆ. ಜಾತಿಯ ಹೆಸರಿನಲ್ಲಿ ದೌರ್ಜನ್ಯ ಗಳು, 2014 ರಿಂದೀಚೆಗೆ ಯಥೇಚ್ಛವಾಗಿ ವಿಜೃಂಭಿಸುತ್ತಿರುವುದನ್ನು ನೋಡುತ್ತಿದ್ದೇವೆ.

ಇತ್ತೀಚಿನ ಕೆಲವು ವರ್ಷಗಳಿಂದ ಅಂದರೆ, 2014 ರಿಂದೀಚೆಗೆ, ಪ್ರಧಾನಿ ನರೇಂದ್ರ ಮೋದಿಯವರ ಬಿಜೆಪಿ ನೇತೃತ್ವದ ಸರಕಾರದ ಈ ಅವಧಿಯಲ್ಲಿ, ಅಸ್ಪೃಶ್ಯತಾ ಹೆಸರಿನಲ್ಲಿ ದಾಳಿಗಳು ಮತ್ತು ದೌರ್ಜನ್ಯ ಗಳು ಹೆಚ್ಚಾಗಿರುವುದನ್ನು ಅಧಿಕೃತ ಅಂಕಿ ಅಂಶಗಳು ಸಾಭೀತು ಪಡಿಸುತ್ತವೆ. ಆದರೆ ಶಿಕ್ಷೆಯ ಪ್ರಮಾಣ ಅತಿ ಕಡಿಮೆಯಾಗಿ ತೀವ್ರ ವಾಗಿ ಕುಸಿದಿದೆ. ಜೊತೆಗೆ, ಅಸ್ಪೃಶ್ಯತಾ ಸ್ವರೂಪಗಳು ಹೊಸ ರೂಪದಲ್ಲಿ ಆಚರಣೆಗೆ ಬಂದಿವೆ. ಅಂದರೆ, ಮನುವಾದ ಪ್ರೇರಿತ "ಹಿಂದುತ್ವದ ಪರಿಕಲ್ಪನೆ" ಯ ಅಡಿಯಲ್ಲಿ " ಜಾತಿ ಆಧಾರಿತ ಸಮಾಜದ ಪ್ರಾಮುಖ್ಯತೆ " ಯನ್ನು ಪುನರ್ ಸ್ಥಾಪಿಸಲು ಹಾಗೂ ನಾಗರಿಕ ಸಮಾಜವನ್ನು ಅವೈಜ್ಞಾನಿಕ ವಾದ ಮೌಢ್ಯತನದತ್ತ ಕೊಂಡೊಯ್ಯುವ ಆರ್.ಎಸ್.ಎಸ್.ನ ಕಾರ್ಯ ಸೂಚಿಗಳನ್ನು ಉದಾಹರಣೆಗೆ, ಗೋ ಸಂರಕ್ಷಣೆ ಹೆಸರಿನಲ್ಲಿ ಆಹಾರ ಪದ್ಧತಿಯ ಮೇಲೆ ದಾಳಿ ನಡೆಸುವುದು, ನೈತಿಕ ಪೊಲೀಸ್ ಗಿರಿ, ಲವ್ ಜಿಹಾದ್ ಮತ್ತು ಮರ್ಯಾದೆ ಹತ್ಯೆಗಳ ಹೆಸರಿನಲ್ಲಿ ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ವಿವಾಹಿತರ ಮೇಲೆ ದಾಳಿ ಮಾಡುವುದು, ಒಟ್ಟಾರೆಯಾಗಿ, ಸಂವಿಧಾನದ ಆಶಯಗಳಾದ, ಪ್ರಜಾಪ್ರಭುತ್ವ, ಸಮಾನತೆ, ಜಾತ್ಯಾತೀತತೆ, ಸಾಮಾಜಿಕ ನ್ಯಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಹೆಚ್ಚಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ದಲಿತ ವಿದ್ಯಾರ್ಥಿ –ಸಂಶೋದಕರ ಮೇಲೆ ದಾಳಿಗಳು ಮತ್ತು ಉನ್ನತ ಹುದ್ದೆಗಳಲ್ಲಿರುವ ದಲಿತ ಅಧಿಕಾರಿಗಳಿಗೆ ಕಿರುಕುಳ ಮತ್ತು ಜಾತಿ ನಿಂದನೆ ಮಾಡುವುದು. ಇದರಿಂದ ಹಲವು ದಲಿತ ಐಎಎಸ್ ಅಧಿಕಾರಿಗಳು ಕೆಲಸ ಬಿಟ್ಟು ಹೊರ ಬರುತ್ತಿರುವುದು ಸರ್ವೆ ಸಾಮಾನ್ಯ ದೃಶ್ಯ ವಾಗಿದೆ.

ರಾಷ್ಟ್ರೀಯ ಅಪರಾಧ ನೊಂದಾಣಿ ಬ್ಯೂರೋ (ಎನ್.ಸಿ.ಆರ್.ಬಿ)

ಯ ಪ್ರಕಾರ, ದೌರ್ಜನ್ಯ ತಡೆ ಕಾಯಿದೆ (ಪಿ.ಓ.ಎ.) ಅಡಿಯಲ್ಲಿ ನೊಂದಾಣಿ ಯಾಗಿರುವ ಅಂಕಿಅಂಶಗಳು ಈಗಿವೆ.

2014 ರಲ್ಲಿ 47,124 ಪ್ರಕರಣಗಳು, 2015 ರಲ್ಲಿ 44 839 ಪ್ರಕರಣಗಳು ಸ್ವಲ್ಪ ಕಡಿಮೆ ಎನಿಸಿದರು, 2016 ರಲ್ಲಿ, ರಲ್ಲಿ 47,338 ದಾಟಿದೆ. 2017 ಮತ್ತು 2018 ರ ಈ ದೌರ್ಜನ್ಯ ಪ್ರಕರಣಗಳ ಅಂಕಿಅಂಶಗಳನ್ನು ಬಿಡುಗಡೆ ಗೊಳಿಸದೆ ತಡೆಹಿಡಿಯಲಾಗಿದೆ. ಇದರರ್ಥ ಮತ್ತಷ್ಟು ಹೆಚ್ಚಾಗಿರುವುದೆ ಕಾರಣವಾಗಿರ ಬಹುದು. ಆದಾಗ್ಯೂ, 2014 ರಲ್ಲಿ, ಶೇ.28.8 ರಷ್ಟು ನ್ನು ಚಾರ್ಜ್ ಶೀಟ್ ಹಾಕಿ, ಕೋರ್ಟಿಗೆ ಶಿಕ್ಷೆಗಾಗಿ ತರಲಾಗಿದೆ. ಅದರಲ್ಲಿ ಶೇ.85.3 ರಷ್ಟು ಇನ್ನೂ ಬಾಕಿ ಉಳಿದಿವೆ. ಶೇ.71.2 ರಷ್ಟು ಸಾಕ್ಷಿ ಗಳಿಲ್ಲದೆ ಖುಲಾಸೆ ಯಾಗಿವೆ. 2015 ರಲ್ಲಿ, ಶೇ.25.8 ರಷ್ಟು ಶಿಕ್ಷೆಗಾಗಿ ಕೋರ್ಟ್ ಗೆ ಹಾಜರು ಪಡಿಸಲಾಗಿದೆ. ಶೇ.74.2 ರಷ್ಟು ಖುಲಾಸೆಯಾಗಿವೆ. ಶೇ.87.3 ರಷ್ಟು ಇನ್ನೂ ಇತ್ಯರ್ಥ ವಾಗದೆ ಬಾಕಿ ಉಳಿದಿವೆ. 2016 ರಲ್ಲಿ, ಶೇ.24.9 ರಷ್ಟು ಶಿಕ್ಷೆಗಾಗಿ ಕೋರ್ಟ್ ಗೆ ತರಲಾಗಿದೆ. ಅದರಲ್ಲಿ ಶೇ.75.1 ರಷ್ಟು ಖುಲಾಸೆಗೊಂಡು, ಶೇ.89.3 ರಷ್ಟು ಬಾಕಿ ಉಳಿದಿವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ 1989 ರ ಕಾಯಿದೆಯಲ್ಲಿನ ಲೋಪದೋಷಗಳನ್ನು ಬಳಸಿಕೊಂಡು, ಸೂಕ್ತ ಸಾಕ್ಷಿಗಳು ಸಿಗದ ಕಾರಣ ನೀಡಿ, ದೌರ್ಜನ್ಯ ಎಸಗಿದ ಪ್ರಬಲ ಜಾತಿಯವರು, ಹೇಗೆ ಕಾನೂನಿನ ಮೂಲಕವೇ ಖುಲಾಸೆಯಾಗುತ್ತಿದ್ದಾರೆ ಎಂಬುದಕ್ಕೆ ಈ ಅಂಕಿಅಂಶಗಳು ಸಾಕ್ಷಿಯಾಗಿವೆ.

ಈ ಹಿನ್ನೆಲೆಯಲ್ಲಿ ಡಿ.ಎಚ್.ಎಸ್. ನ, ಬೇಡಿಕೆಗಳನ್ನು ಈ ಕೆಳಗೆ ನಮೂದಿಸಿದ್ದೇವೆ. ಇವುಗಳ ಈಡೇರಿಕೆಗಾಗಿ ಡಿ.ಎಚ್.ಎಸ್. ನಿರಂತರವಾಗಿ ಹೋರಾಡುತ್ತಿದೆ.

* ಅಸ್ಪೃಶ್ಯತಾ ಆಚರಣೆಗಳು ಮತ್ತು ಜಾತಿ ತಾರತಮ್ಯ ನಿರ್ಮೂಲನೆಗಾಗಿ ಜಾಗೃತಿ ಮೂಡಿಸಲು "ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಸರ್ಕಾರದ ವತಿಯಿಂದಲೇ " ಅಭಿಯಾನ" ನಡೆಸಬೇಕೆಂದು ಒತ್ತಾಯಿಸುತ್ತೇವೆ. ಈ ಅಭಿಯಾನದಲ್ಲಿ ಅಸ್ಪೃಶ್ಯತೆ ವಿರುದ್ಧ ಹೋರಾಡುವ ಎಲ್ಲಾ ಪ್ರಗತಿಪರ ವ್ಯಕ್ತಿಗಳು ಹಾಗೂ ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ಒಳಗೊಳಿಸಬೇಕು.
* ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯಿದೆಯನ್ನು ಬಲಪಡಿಸ ಬೇಕು ಮತ್ತು ಅಸ್ಪೃಶ್ಯತೆ ಮತ್ತು ಜಾತಿ ನಿಂದನೆ ಆಚರಣೆ ಮಾಡುವವರಿಗೆ ಕಾನೂನಿನ ಪ್ರಕಾರ ಕಠಿಣ ಶಿಕ್ಷೆಗೆ ಒಳ ಪಡಿಸಬೇಕು. ಅವರು ಸಮಾಜದಲ್ಲಿ ಎಷ್ಟೇ ಪ್ರಭಾವಿತ ವ್ಯಕ್ತಿ, ಉನ್ನತ ಅಧಿಕಾರಿ ಹಾಗೂ ರಾಜಕಾರಣಿ ಯಾಗಿದ್ದರು ಸಹಾ, ಅಂಥಹವರಿಗೂ, ಕಾನೂನಿನ ಪ್ರಕಾರ ಶಿಕ್ಷೆ ವಿಧಿಸಬೇಕು.
* ಪರಿಶಿಷ್ಟ ಜಾತಿ ಉಪ ಯೋಜನೆ ಕಾಯಿದೆಯ – ಅಡಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಹಣ ಹಂಚಿಕೆಯಾಗ ಬೇಕು ಮತ್ತು ಈ ಹಣವನ್ನು ಬೇರೆಡೆಗೆ ವರ್ಗಾವಣೆ ಮಾಡಕೂಡದು, ಮಾಡುವ ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಪಡಿಸಬೇಕು.

ಹೀಗೆ ಹಂಚಿಕೆಯಾದ ಹಣವನ್ನು ಆದ್ಯತೆಯ ಮೇರೆಗೆ ದಲಿತರಿಗೆ ಭೂಮಿ ಹಂಚಿಕೆ ಮತ್ತು ನಿವೇಶನ, ವಸತಿ ಒದಗಿಸಲು ಹಾಗೂ ಶಿಕ್ಷಣ, ಉದ್ಯೋಗ, ಆರೋಗ್ಯ ಸಂರಕ್ಷಣೆ ಯಂತಹ, ಮೂಲ ಸೌಕರ್ಯಗಳ ಅಭಿವೃದ್ಧಿ ಗಾಗಿ ಉಪಯೋಗಿಸಬೇಕು. ಹಾಗೂ ಕರ್ನಾಟಕ ಮತ್ತು ಆಂಧ್ರಪ್ರದೇಶದ ಲ್ಲಿರುವಂತೆ, ಎಲ್ಲಾ ರಾಜ್ಯ ಹಾಗೂ ಕೇಂದ್ರದಲ್ಲಿಯೂ ಸಹಾ, ಎಸ್.ಸಿ.ಎಸ್.ಪಿ ಕಾನೂನನ್ನು ರೂಪಿಸಬೇಕು. ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿ ; ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ ; ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಸುಮಾರು 2 ಲಕ್ಷಕ್ಕೂ ಅಧಿಕ ಸರ್ಕಾರಿ ಹುದ್ದೆಗಳು ಮತ್ತು ಅಖಿಲ ಭಾರತ ಮಟ್ಟದಲ್ಲಿ ಖಾಲಿ ಇರುವ ಸುಮಾರು 60 ಲಕ್ಷಕ್ಕೂ ಹೆಚ್ಚಾಗಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ, ಭರ್ತಿ ಮಾಡಬೇಕು. ಈ ಹುದ್ದೆಗಳಲ್ಲಿ ಮೀಸಲಾತಿ' ಯನ್ನು ಸಂವಿಧಾನ ಆಶಯಗಳಂತೆ, ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕು.

* ಮುಂಬಡ್ತಿ ಯಲ್ಲಿ ಮೀಸಲಾತಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಗಳಲ್ಲಿಯೂ ಮೀಸಲಾತಿ ಅಗತ್ಯತೆ ಕಡ್ಡಾಯ ಮಾಡ ಬೇಕು.
* ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಉನ್ನತ ಹುದ್ದೆಗಳಲ್ಲಿರುವ ಪರಿಶಿಷ್ಟ ಜಾತಿಯ ನೌಕರ ಹಾಗೂ ಅಧಿಕಾರಿಗಳಿಗೆ ಜಾತಿ ಅಸ್ಪೃಶ್ಯತೆ ಯಿಂದ ನಡೆಯುವ ಕಿರಿಕುಳ ಅವಮಾನ ತಪ್ಪಿಸಲು, "ರೋಹಿತ್ ಕಾಯಿದೆ " ಜಾರಿಗೆ ತರಬೇಕು.
* ಅಂತರ್ಜಾತಿ ವಿವಾಹಿತರ ರಕ್ಷಣೆ ಹಾಗೂ ಪ್ರೋತ್ಸಾಹ ಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಮರ್ಯಾದೆ ಹತ್ಯೆ ತಡೆಯಲು ಕಾಯಿದೆ ರೂಪಿಸ ಬೇಕು. ದೇವದಾಸಿ ಪದ್ಧತಿಯನ್ನು ರದ್ದುಗೊಳಿಸಬೇಕು. ಈಗಿರುವ ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳಿಗೆ ಪುನರ್ವಸತಿ ಸೌಕರ್ಯಗಳನ್ನು ಒದಗಿಸಬೇಕು.
* ಪ್ರತಿ ಗ್ರಾಮಗಳಲ್ಲಿ, ದಲಿತರಿಗಾಗಿ ಪ್ರತ್ಯೇಕ ಸ್ಮಶಾನ ಕ್ಕಾಗಿ ಭೂಮಿಯನ್ನು ಮಂಜೂರು ಮಾಡಬೇಕು. ಹಾಗೂ ಸ್ಮಶಾನ ಕಾರ್ಮಿಕರಿಗೆ, ಮಂಗಳವಾದ್ಯ ಕಲಾವಿದರಿಗೆ, ಸಫಾಯಿ ಕರ್ಮಚಾರಿ ಮತ್ತು ನೈರ್ಮಲ್ಯ ಕಾರ್ಮಿಕರಿಗೆ ಸೂಕ್ತ ರಕ್ಷಣೆ ನೀಡಬೇಕು. ಅವರು ಘನತೆ ಗೌರವ ದಿಂದ ಬದುಕಲು ಪ್ರೋತ್ಸಾಹ ಕಲ್ಪಿಸಬೇಕು. ವೈಜ್ಞಾನಿಕ ತಂತ್ರಜ್ಞಾನ ವನ್ನು ಬಳಸುವ ಮೂಲಕ, ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸವನ್ನು ರದ್ದು ಪಡಿಸಬೇಕು.

ಈ ಮೇಲೆ ಪ್ರಸ್ತಾಪಿಸಿರುವ ಅಂಶಗಳ ಪ್ರಾಮುಖ್ಯತೆ ಯನ್ನು ಚರ್ಚಿಸಿ, ಅವಲೋಕಿಸಿ, "ಅಸ್ಪೃಶ್ಯತಾ ಆಚರಣೆಗಳು ಮತ್ತು ಜಾತಿ ತಾರತಮ್ಯ ನಿರ್ಮೂಲನೆ ಗಾಗಿ ""ವಿಶಾಲವಾದ ಪ್ರಜಾಸತ್ತಾತ್ಮಕ ತಳಹದಿಯಲ್ಲಿ ಚಳುವಳಿ ಕಟ್ಟಿ ಹೋರಾಡಲು, ದಲಿತ ಸಮುದಾಯ' ವನ್ನು ಜಾಗೃತ ಗೊಳಿಸುವ ನಿಟ್ಟಿನಲ್ಲಿ " 3 ದಿನಗಳ ಕಾಲ ಅಧ್ಯಯನ ಶಿಬಿರ" ವನ್ನು ರಾಮನಗರ ದಲ್ಲಿರುವ "ಜನಪದ ಲೋಕ" ದಲ್ಲಿ ಆಯೋಜಿಸಿದ್ದೇವೆ.

ಇದಕ್ಕೆ ಪೂರ್ವ ಬಾವಿಯಾಗಿ "ಸಂವಿಧಾನದ ಆಶಯಗಳು ಮತ್ತು ದಲಿತರ ಹಕ್ಕುಗಳು, ಶಿಕ್ಷಣ, ಮೀಸಲಾತಿ, ಭೂಮಿ, ವಸತಿ ಹಾಗೂ ನಿವೇಶನ ಕುರಿತಂತೆ "ವಿಚಾರ ಸಂಕಿರಣ" ವನ್ನು ಹಮ್ಮಿಕೊಳ್ಳಲಾಗಿದೆ. ದೊಡ್ಡ ಸಂಖ್ಯೆಯಲ್ಲಿ ದಲಿತರು, ದಲಿತೇತರರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಬೇಕೆಂದು, ಸ್ವಾಗತ ಸಮಿತಿ ಯ ಪರವಾಗಿ ವಿನಂತಿಸಿ ಕೊಳ್ಳುತ್ತೇವೆ.

ಮಹದಾಯಿ ವಿವಾದ ಪ್ರಧಾನಮಂತ್ರಿಗಳ ಮಧ್ಯಪ್ರವೇಶವೇ ಪರಿಹಾರ



ಮಹದಾಯಿ ನ್ಯಾಯಾಧೀಕರಣ ಈಗಾಗಲೇ ಐತೀರ್ಪು ನೀಡಿದ್ದು ಇದರಿಂದ ಕರ್ನಾಟಕಕ್ಕೆ ಮಹದಾಯಿ ನೀರು ಹಂಚಿಕೆಯಲ್ಲಿ ದೊಡ್ಡ ಅನ್ಯಾಯವಾಗಿದೆ. ಕರ್ನಾಟಕಕ್ಕೆ ತೀರ್ಪಿನನ್ವಯ 13 ಟಿಎಂಸಿ ನೀರು ಹಂಚಿಕೆಯಾಗಿದ್ದು ಆ ನೀರನ್ನು ಮಲಪ್ರಭೆಗೆ ಹರಿಸಲು ಅನುವುವಾಗುವಂತೆ ಕೇಂದ್ರ ಸರಕಾರ ಕೂಡಲೇ ಅಧಿಸೂಚನೆ ಹೊರಡಿಸಬೇಕಾಗಿತ್ತು ಆದರೇ ಕೇಂದ್ರ ಯಾಕೆ ಎಳಂಭ ಮಾಡುತ್ತಿದೆ, ಹೆಚ್ಚುವರಿ ಕರ್ನಾಟಕದ ನೀರಿನ ಹಕ್ಕನ್ನು ಪಡೆಯಲು ಸರ್ವೋಚ್ಚ ನ್ಯಾಯಾಲಯಕ್ಕೆ ರಾಜ್ಯದಿಂದ ಮೇಲ್ಮನವಿ ಹೋಗಲಾಗಿದ್ದು ರಾಜ್ಯ ಸರಕಾರ ನ್ಯಾಯಾಲಯದಲ್ಲಿ ಸಮರ್ಥವಾಗಿ ರಾಜ್ಯದ ನೀರಿನ ಹಕ್ಕನ್ನು ಪಡೆಯಲು ವಾದ ಮಂಡಿಸಬೇಕು.

ಈ ಹಿಂದೆಯೂ ಸಂಬಂದಿಸಿದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಿ ಸೌಹಾರ್ದಿತವಾಗಿ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಲು ಪ್ರಯತ್ನಗಳು ನಡೆದಾಗೂ ಗೋವಾ ರಾಜ್ಯ ತನ್ನ ಮೊಂಡತನವನ್ನು ಪ್ರದರ್ಶಿಸುತ್ತದೆ ಬಂದಿದೆ, ಮತ್ತೇ ಈ ಪ್ರಯತ್ನನ್ನು ಮತ್ತು ಕೇಂದ್ರ ಸಚಿವರ ಸಲಹೆಯನ್ನು ಧಿಕ್ಕರಿಸಿ ನಾವು ನ್ಯಾಯಾಲಯದ ಮೂಲಕವೇ ಸಮಸ್ಯೆ ಇತ್ಯರ್ಥ ಮಾಡಿಕೊಳ್ಳುತ್ತೇವೆಂದು ಕಡಾಖಂಡಿತವಾಗಿ ಗೋವಾ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಹಿಂದೆ ಸಂಬಂದಿದ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಅಧಿಕಾರವಿತ್ತು. ಆದರೆ ಈಗ ಕೇಂದ್ರದಲ್ಲಿ ಮತ್ತು ಗೋವಾ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಒಂದೇ ಪಕ್ಷದ ಸರಕಾರವಿದ್ಯಾ ಸಮಸ್ಯೆ ಪರಿಹಾರಕ್ಕೆ ಒಮ್ಮತಮೂಡುತ್ತಿಲ್ಲ. ಈ ಹಿನ್ನಲೆಯಲ್ಲಿ ರಾಜ್ಯ ಸರಕಾರ ತಮ್ಮದೇ ಪಕ್ಷದ ಪ್ರಧಾನಮಂತ್ರಿಗಳಿಗೆ ಒಕ್ಕೂಟ ವ್ಯವಸ್ಥೆಯಲ್ಲಿ ಅಂತರಾಜ್ಯ ವ್ಯಾಜ್ಯಗಳಿಗೆ ಪರಿಹಾರ ಕಂಡುಕೊಳ್ಳಲು ತಮ್ಮ ಸಾಂವಿಧಾನಿಕ ಅಧಿಕಾರವನ್ನು ಬಳಸಿಕೊಂಡು ಕೂಡಲೇ ಮಧ್ಯಸ್ಥಿಕೆ ವಹಿಸುವಂತೆ ಒತ್ತಾಯಿಸಬೇಕು ಇದೇ ಸಮಸ್ಯೆಗೆ ಪರಿಹಾರವಾಗಿದ್ದು ಆ ನಿಟ್ಟಿನಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಗಂಭೀರ ಪ್ರಯತ್ನಗಳನ್ನು ಮಾಡಿ ತಾವು ಈ ಒಂದೆ 15 ದಿನಗಳಲ್ಲಿ ನೀರು ಹರಿಸುವೆ ಎಂದು ಹೇಳಿದ ಮಾತನ್ನು ಈಗಲಾದರೂ ಉಳಿಸಿಕೊಳ್ಳಬೇಕೆಂದು ಆಗ್ರಹಿಸುತ್ತೇವೆ.

ಅಮೃತ ಇಜಾರಿ

ದೇಶದ ಐಕ್ಯತೆಗೂ, ಹಿಂದಿ ಭಾಷೆಗೂ ಹಿಂದಿ ಹೇರಿಕೆ ಹಾನಿಕಾರಕ

ಭಾಷೆಗಳ ಸಮಾನತೆ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳಿಗೆ ಮಾನ್ಯತೆ ಪ್ರಜಾಪ್ರಭುತ್ವವನ್ನು ಮತ್ತು ಒಕ್ಕೂಟ ತತ್ವವನ್ನು ಗಟ್ಟಿಗೊಳಸುತ್ತವೆ. ಈ ಪ್ರಜಾಸತ್ತಾತ್ಮಕ ಭಾಷಾ ಧೋರಣೆಗೆ ವ್ಯತಿರಿಕ್ತವಾದ ಯಾವುದೇ ಪ್ರಯತ್ನ ದೇಶದ ಐಕ್ಯತೆಗೆ ಹಾನಿಯುಂಟು ಮಾಡುತ್ತದೆ. ಹಿಂದಿಯನ್ನು ಒಂದು ಪ್ರಭುತ್ವ–ಪ್ರಾಯೋಜಿತ ರಾಷ್ಟ್ರಭಾಷೆಯಾಗಿ ಮಾಡುವುದು ಅಂತಹ ಒಂದು ಪ್ರಯತ್ನ.



ಪ್ರಕಾಶ ಕಾರಟ್

ಭಾರತ ಒಂದು ಭಾಷೆಯನ್ನು ಹೊಂದುವ ಅಗತ್ಯವಿದೆ, ಮತ್ತು ಅದು, ದೇಶವನ್ನು ಒಂದುಗೂಡಿಸಬಲ್ಲ ಹಿಂದಿ ಎಂಬ ಕೇಂದ್ರ ಗೃಹಮಂತ್ರಿ ಅಮಿತ್ ಷಾ ಹೇಳಿಕೆ ಆರೆಸ್ಸೆಸ್ ಮತ್ತು ಹಿಂದುತ್ವ ಶಕ್ತಿಗಳ ನಿಲುವು ಗೊತ್ತಿರುವವರಿಗೆ ಆಶ್ಚರ್ಯವೇನ್ನೇನೂ ಉಂಟು ಮಾಡಿಲ್ಲ. ಹಿಂದಿ ರಾಷ್ಟ್ರ ಭಾಷೆಯಾಗಬೇಕು ಎಂದೂ ಅಮಿತ್ ಷಾ ಪರೋಕ್ಷವಾಗಿ ಹೇಳಿದರು.

ವಿ.ಡಿ.ಸಾವರ್ಕರ್ "ಹಿಂದಿ, ಹಿಂದು, ಹಿಂದುಸ್ಥಾನ್" ಎಂದು ಮೊದಲಿಗೆ ಕರೆ ನೀಡಿದವರು. ಆರೆಸ್ಸೆಸ್ "ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ" ಎಂದು ಪ್ರತಿಪಾದಿಸುತ್ತ ಬಂದಿದೆ. ಒಂದು ರಾಷ್ಟ್ರಭಾಷೆಯ ಹಿಂದುತ್ವ ಶಕ್ತಿಗಳ ಪ್ರಯತ್ನಗಳು ದೇಶದ ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ವಿರುದ್ಧವಾಗಿರುವಂತವುಗಳು.

ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಘೋಷಿಸಬೇಕು ಎಂಬ ಆಗ್ರಹಗಳು ಸಂವಿಧಾನ ಸಭೆಯಲ್ಲಿ ಬಂದಿದ್ದವು. ಆಗ ಹಿಂದೂ ಮಹಾಸಭಾದ ಮುಖ್ಯಸ್ಥರಾಗಿದ್ದ, ನಂತರ ಭಾರತೀಯ ಜನಸಂಘದ ಅಧ್ಯಕ್ಷರಾದ ಶ್ಯಾಮಪ್ರಸಾದ್ ಮುಖರ್ಜಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಬೇಕು ಎಂದು ಆಗ್ರಹಿಸಿದ್ದರು. ಆದರೆ ಅದನ್ನು ಸ್ವೀಕರಿಸಲಿಲ್ಲ. ಬದಲಿಗೆ, ಸಂವಿಧಾನ ಹಿಂದಿ ಅಧಿಕೃತ ಭಾಷೆಯಾಗಿರುತ್ತದೆ, ಮತ್ತು 15 ವರ್ಷಗಳ ಅವಧಿಯ ವರೆಗೆ ಇಂಗ್ಲಿಷ್ ಅಧಿಕೃತ ಭಾಷೆಯಾಗಿರುತ್ತದೆ ಎಂದೂ ಹೇಳಿತು. ಇಂಗ್ಲಿಷ್‌ನ ಬಳಕೆಯನ್ನು ವಿಸ್ತರಿಸಲು ಅಧಿಕೃತ ಭಾಷೆ ಕಾಯ್ದೆಯನ್ನು 1965ರಲ್ಲಿ ತಿದ್ದುಪಡಿ ಮಾಡಲಾಯಿತು.

ಒಂದು ರಾಷ್ಟ್ರಭಾಷೆಯ ಬದಲು, ಸಂವಿಧಾನದ ಎಂಟನೇ ಶೆಡ್ಯೂಲ್ 14 ಪ್ರಾದೇಶಿಕ ಭಾಷೆಗಳನ್ನು ಪಟ್ಟಿ ಮಾಡಿತು. ಈ ಪಟ್ಟಿ ಈಗ 22ಕ್ಕೆ ಏರಿದೆ. ಶೆಡ್ಯೂಲ್‌ನಲ್ಲಿರುವ ಈ ಎಲ್ಲ ಭಾಷೆಗಳು ಸಮಾನ ಸ್ಥಾನಮಾನ ಹೊಂದಿವೆ. ರಾಜ್ಯಗಳು ತಮ್ಮದೇ ಅಧಿಕೃತ ಭಾಷೆ ಅಥವ ಭಾಷೆಗಳನ್ನು ಘೋಷಿಸುವ ಅವಕಾಶವೂ ಸಂವಿಧಾನದಲ್ಲಿದೆ.

ಸಂವಿಧಾನದಲ್ಲಿ ಭಾಷೆಗಳ ಈ ರೀತಿಯ ರಚನೆ ಭಾರತದ ಬಹುಭಾಷಾ ಸ್ವರೂಪವನ್ನು ಗಮನಕ್ಕ ಎತಗೊಂಡಿತ್ತು. ಅದಾದ ನಂತರ, ಶೀಘ್ರವೇ ಭಾರತೀಯ ಪ್ರಭುತ್ವ ರಚನೆಯನ್ನು ಭಾಷಾವಾರು ರಾಜ್ಯಗಳ ರಚನೆಯೊಂದಿಗೆ ಮರು ಸಂಘಟಿಸಲಾಯಿತು. ಇದು ಈ ರಾಜ್ಯಗಳ ಸಂಘ ಯಾವ ಭಾಷಾ ನೀತಿಯ ಮೇಲೆ ನಿಂತಿದೆ ಎಂಬುದಕ್ಕೆ ನೀಡಿದ ಮತ್ತೊಂದು ಮಾನ್ಯತೆಯಾಗಿದೆ. ಈ ಒಕ್ಕೂಟ ಸ್ವರೂಪ ಮತ್ತು ಭಾಷಾ ವೈವಿಧ್ಯತೆಗೆ ತದ್ವಿರುದ್ಧವಾಗಿ ಬಿಜೆಪಿ–ಆರೆಸ್ಸೆಸ್‌ನದ್ದು ಹಿಂದಿ ರಾಷ್ಟ್ರಭಾಷೆಯಾಗಿರುವ ಒಂದು ಏಕಘಟಕ ಮಾದರಿ.

ಮೋದಿ ಸರಕಾರದ ಹಿಂದಿನ ಅವಧಿಯಲ್ಲಿಯೇ ಸಂಸ್ಕೃತ ಮತ್ತು ಹಿಂದಿಯನ್ನು ಹಿಂದಿಯೇತರ ರಾಜ್ಯಗಳ ಮೇಲೆ ಹೇರುವ ವಿವಿಧ ಪ್ರಯತ್ನಗಳು ನಡೆದವು. ಆಗಲೂ ಇವಕ್ಕೆ ವಿರೋಧಗಳು ಎದುರಾದವು.

ಹಿಂದಿ ದೇಶವನ್ನು ಒಂದುಗೂಡಿಸುವ ಏಕೈಕ ಭಾಷೆ ಎಂಬ ಅಮಿತ್ ಷಾ ಉಚ್ಚಾರಕ್ಕೆ ಹಿಂದಿಯೇತರ ರಾಜ್ಯಗಳಿಂದ, ವಿಶೇಷವಾಗಿ ದಕ್ಷಿಣದ ರಾಜ್ಯಗಳಿಂದ ಬಲವಾದ ಪ್ರತಿಭಟನೆಗಳು ಬಂದವು. ಹಿಂದಿಯನ್ನು ಹೇರುವ ಯಾವುದೇ ಪ್ರಯತ್ನ, ಅದರ ಭವಿಷ್ಯದ ಅವಕಾಶಗಳಿಗೆ ಹಾನಿ ಉಂಟುಮಾಡುತ್ತದಷ್ಟೇ. ಏಕೆಂದರೆ, ದೇಶದ ಅತಿ ದೊಡ್ಡ ವಿಭಾಗ ಈ ಭಾಷೆಯನ್ನಾಡುತ್ತಿದೆ ಮತ್ತು ಇದು ಹೆಚ್ಚು ವ್ಯಾಪಕವಾಗಿ ತಿಳಿದಿರುವ ಭಾಷೆಯೂ ಆಗಿದೆ. ಭಾರತೀಯ ರಾಜಕೀಯ ವ್ಯವಸ್ಥೆ ಮತ್ತು ಸಮಾಜದಲ್ಲಿ ಹಿಂದಿಗೆ ಒಂದು ಮಹತ್ವದ ಪಾತ್ರವಿದೆ.

ಹಿಂದಿಯನ್ನು ಒಂದು ಪ್ರಭುತ್ವ–ಪ್ರಾಯೋಜಿತ ರಾಷ್ಟ್ರಭಾಷೆಯಾಗಿ ಮಾಡುವ ಪ್ರಯತ್ನ ದೇಶದ ಐಕ್ಯತೆಗೆ ಹಾನಿಯುಂಟು ಮಾಡುತ್ತದೆ. ಎಲ್ಲ ಭಾರತೀಯ ಭಾಷೆಗಳು ಒಂದು ಸಮಾನ ಸ್ಥಾನಮಾನ ಹೊಂದಿರಬೇಕು ಮತ್ತು ಅವುಗಳಿಗೆ ತಂತಮ್ಮ ರಾಜ್ಯಗಳಲ್ಲಿ ಜೀವನದ ಎಲ್ಲ ರಂಗಗಳಲ್ಲಿ ಉತ್ತೇಜನೆಗಳನ್ನು ಒದಗಿಸಬೇಕು. ಭಾಷೆಗಳ ಸಮಾನತೆ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳಿಗೆ ಮಾನ್ಯತೆ ಪ್ರಜಾಪ್ರಭುತ್ವವನ್ನು ಮತ್ತು ಒಕ್ಕೂಟ ತತ್ವವನ್ನು ಗಟ್ಟಿಗೊಳಿಸುತ್ತವೆ.ಈ ಪ್ರಜಾಸತ್ತಾತ್ಮಕ ಭಾಷಾ ಧೋರಣೆಗೆ ವ್ಯತಿರಿಕ್ತವಾದ ಯಾವುದೇ ಕ್ರಮವನ್ನು ವಿರೋಧಿಸಬೇಕು.

ಒಂದು ರಾಷ್ಟ್ರ ಒಂದು ಭಾಷೆ



...ಒಂದು ಬೇಡಿಕೆ!

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

"ಕೇಂದ್ರ ಸರಕಾರದ ಅತ್ಯಂತ ಆತಂಕಕಾರಿ, ಆಕ್ಷೇಪಾರ್ಹ ನಡೆ" –ಅರಣ್ಯ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಪುಟ 2 ರಿಂದ



ಆದೇಶವನ್ನು ನೀಡಿತ್ತು. ಆ ನಿರ್ಣಾಯಕ ದಿನದಂದೂ ಕೇಂದ್ರ ಸರಕಾರದ ಪರವಾಗಿ ಈ ಕಾಯ್ದೆಯನ್ನು ಸಮರ್ಥಿಸಿಕೊಳ್ಳಬೇಕಾದ, ಆಮೂಲಕ ಬುಡಕಟ್ಟು ಜನಗಳ ಹಿತರಕ್ಷಣೆ ಮಾಡಬೇಕಾದ ಸಾಲಿಸಿಟರ್ ಜನರಲ್ ಮತ್ತು ಕೇಂದ್ರ ಸರಕಾರದ ಬೇರೆ ಯಾವುದೇ ಹಿರಿಯ ಕಾನೂನು ಅಧಿಕಾರಿಯ ಗೈರು ಹಾಜರಿಯಲ್ಲಿ ಈ ಆದೇಶ ಬಂದಿತ್ತು.

ಈ ಆದೇಶದ ವಿರುದ್ಧ ದೇಶಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾದ ನಂತರವೇ ಎಚ್ಚೆತ್ತ ಕೇಂದ್ರ ಸರಕಾರ ತಡೆಯಾಜ್ಞೆ ನೀಡಬೇಕೆಂದು ಸುಪ್ರಿಂ ಕೋರ್ಟಿಗೆ ಧಾವಿಸಿ ಮನವಿ ಸಲ್ಲಿಸಿತು. ಇದರಿಂದಾಗಿ ತಾತ್ಕಾಲಿಕ ತಡೆಯಾಜ್ಞೆಯನ್ನು ನ್ಯಾಯಾಲಯ ನೀಡಿತು. ಈಗ ಮತ್ತೆ ಕೇಂದ್ರ ಸರಕಾರದ ಗೈರು ಹಾಜರಿ ಬುಡಕಟ್ಟು ಮತ್ತು ಅರಣ್ಯವಾಸಿ ಜನಗಳ ಭೀತಿಯ, ಅಸುರಕ್ಷಿತತೆಯ ಭಾವನೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಗೈರು ಹಾಜರಿ ಕೇವಲ ಆಕಸ್ಮಿಕವಲ್ಲ, ಪರೋಕ್ಷ ಸಮ್ಮತಿಯಿಂದ

ನಡೆದಿರುವಂತದ್ದು ಎಂಬ ಭಾವನೆ ಬಲಗೊಂಡಿದೆ:

ವಾಸ್ತವವಾಗಿ, ಅರಣ್ಯ ಹಕ್ಕುಗಳ ಕಾಯ್ದೆಯ ಅನುಷ್ಠಾನ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವ್ಯಾಪ್ತಿಗೆ ಬರುತ್ತದೆ. ಆದರೆ ಈ ಕಾಯ್ದೆಯ ಸಿಂಧುತ್ವಕ್ಕೆ ಸವಾಲು ಹಾಕಿರುವ ಈ ಮೊಕದ್ದಮೆಯಲ್ಲಿ ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆ ಮಂತ್ರಾಲಯವನ್ನು ಪ್ರಮುಖ ಪ್ರತಿವಾದಿಯಾಗಿ ಮಾಡಲಾಗಿದೆ. ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಸಾಲಿಸಿಟರ್ ಜನರಲ್ ರವರ ಹಾಜರಿಯನ್ನು ಖಚಿತಪಡಿಸಬೇಕು ಎಂದು ಸಂಬಂಧಪಟ್ಟವರಿಗೆ ತಿಳಿಸಿದ್ದಾಗಿಯೂ ವರದಿಯಾಗಿದೆ. ಆದರೂ ಕೇಂದ್ರ ಸರಕಾರದ ಹಿರಿಯ ಕಾನೂನು ಅಧಿಕಾರಿಗಳ ಗೈರು ಹಾಜರಿ ಕೇವಲ ಆಕಸ್ಮಿಕವಲ್ಲ, ಪರೋಕ್ಷ ಸಮ್ಮತಿಯಿಂದ ನಡೆದಿರುವಂತದ್ದು ಎಂಬ ಭಾವನೆ ಇದರಿಂದಾಗಿ ಸಪ್ಟಂಬರ್12 ರ ವಿಚಾರಣೆಯ ನಂತರ ಬಲಗೊಂಡಿದೆ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಮಂತ್ರಿಗಳಿಗೆ ತಿಳಿಸಿದ್ದಾರೆ.

ಸುಪ್ರಿಂ ಕೋರ್ಟ್ ಫೆಬ್ರುವರಿಯಲ್ಲಿ ನೀಡಿದ ಒಕ್ಕಲೆಬ್ಬಿಸುವ ಆದೇಶ ಆತುರದ ಆದೇಶವಾಗಿತ್ತು ಎಂದು ಈಗಂತೂ ಸ್ಪಷ್ಟವಾಗಿದೆ. ಏಕೆಂದರೆ ಕಾಯ್ದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಬಹಳಷ್ಟು ಲೋಪದೋಷಗಳಿವೆ ಎಂದು ಹಲವು ರಾಜ್ಯ ಸರಕಾರಗಳೇ ಒಪ್ಪಿಕೊಂಡಿವೆ. ಉದಾಹರಣೆಗೆ ಇತ್ತೀಚೆಗೆ ಮಹಾರಾಷ್ಟ್ರ ಸರಕಾರ ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿರುವ ಎರಡು ಅಫಿಡವಿಟ್‌ಗಳಲ್ಲಿ ಅರಣ್ಯ ಹಕ್ಕುಗಳ ಅರ್ಜಿಗಳನ್ನು ಕಾನೂನುಬಾಹಿರವಾಗಿ ತಿರಸ್ಕರಿಸಿರುವುದಕ್ಕೆ ತನ್ನದೇ ಅಧಿಕಾರಶಾಹಿಯನ್ನೇ ದೂರಿರುವುದಾಗಿ ತಿಳಿದು ಬಂದಿದೆ. ಅರಣ್ಯವಾಸಿಗಳ ಹಕ್ಕು ದಾವೆಯ ಅರ್ಜಿಗಳನ್ನು ತಿರಸ್ಕರಿಸುವಲ್ಲಿ ಸರಿಯಾದ ವಿಧಾನಗಳನ್ನು ಪಾಲಿಸಿಲ್ಲ ಎಂಬುದಾಗಿ ಒಂಭತ್ತು ರಾಜ್ಯ ಸರಕಾರಗಳು ಬುಡಕಟ್ಟು ವ್ಯವಹಾರಗಳ ಮಂತ್ರಾಲಯಕ್ಕೆ ತಿಳಿಸಿರುವುದಾಗಿಯೂ ತಿಳಿದುಬಂದಿದೆ.

ಆದರೂ, ಸಪ್ಟಂಬರ್ 12ರಂದು ವಿಚಾರಣೆಗೆ ಸ್ವೀಕರಿಸಿದ ಅರ್ಜಿಗಳಲ್ಲಿ ಮೊದಲನಯದ್ದು, ರಾಜ್ಯ ಸರಕಾರಗಳು ಇಂತಹ ತಪ್ಪು ಕಾರಣಗಳಿಂದಾಗಿ ತಿರಸ್ಕೃತವಾದ ಹಕ್ಕುದಾವೆಗಳ ಮರುಪರಿಶೀಲನೆ ನಡೆಸದಂತೆ ಮತ್ತು ಗ್ರಾಮ ಸಭೆಗಳು ಹೊಸ ಅರ್ಜಿಗಳನ್ನು ಆಹ್ವಾನಿಸದಂತೆ ತಡೆಯಬೇಕು ಎಂದು ಕೋರಿದೆ.

ಎರಡನೆಯದ್ದು, "ಭಾರತ ಅರಣ್ಯ ಸರ್ವೆ" (ಎಫ್.ಎಸ್.ಐ.) ಸಂಸ್ಥೆ ತನ್ನ ಬಳಿಯಿರುವ ನಕಾಶೆಗಳ ಆಧಾರದಲ್ಲಿ ಅರಣ್ಯ "ಒತ್ತುವರಿ"ಗಳ ವಿವರಗಳನ್ನು ಸಲ್ಲಿಸಬೇಕು ಎನ್ನುವುದು. ಇವು ಅರಣ್ಯ ಹಕ್ಕುಗಳನ್ನು ನಿರ್ಧರಿಸುವಲ್ಲಿ ನಿರುಪಯೋಗಿ ಎಂದು ಸ್ವತಃ ಸರಕಾರದ ಇಲಾಖೆಯೇ ಹಲವು ಆದೇಶಗಳನ್ನು ಹೊರಡಿಸಿದ್ದರೂ, ಈ ಅರ್ಜಿಯನ್ನು ಹಾಕಿರುವುದರ ಉದ್ದೇಶ 2005ರ ನಂತರದ ಅರಣ್ಯ ನಾಶಗಳಿಗೆ ಅರಣ್ಯವಾಸಿಗಳನ್ನು ಹೊಣೆಮಾಡುವುದಾಗಿದೆ.

ಮೂರನೆಯ ಅರ್ಜಿ ಎಫ್.ಎಸ್.ಐ.ನ್ನು ಈ ಮೊಕದ್ದಮೆಯಲ್ಲಿ ಒಳಗೊಳಿಸಬೇಕು ಎಂಬುದು, ಈ ಮೂಲಕ ಅರಣ್ಯವಾಸಿಗಳು "ಒತ್ತುವರಿ" ಮಾಡಿದ್ದಾರೆ ಎಂದು ಸಾಬೀತುಮಾಡುವ ಪ್ರಯತ್ನ ಆ ಅರ್ಜಿದಾರರದ್ದು.

ಇವು ಮೂರನ್ನೂ ಸರಕಾರ ಬಲವಾಗಿ ವಿರೋಧಿಸಬೇಕಾಗಿತ್ತು. ಆದರೆ ಅದಕ್ಕೆ ಸರಕಾರದ ಹಿರಿಯ ಕಾನೂನು ಅಧಿಕಾರಿಗಳೇ ಕಾಣೆಯಾಗಿದ್ದರು.

"ಕಳೆದ ಒಂದೂವರೆ ವರ್ಷದಿಂದ, ಹಂತ–ಹಂತವಾಗಿ ಅರಣ್ಯ ಹಕ್ಕು ಕಾಯ್ದೆಯ ವಿರುದ್ಧ ಆಕ್ರೋಶಕಾರಿ ಕಾನೂನಾತ್ಮಕ ಸವಾಲು ಕೇಂದ್ರ ಸರಕಾರದ ಕಡೆಯಿಂದ ಯಾವುದೇ ರಕ್ಷಣಾತ್ಮಕ ಕ್ರಮಗಳಿಲ್ಲದೆ ಮುಂದಕ್ಕೆ ಹೋಗುತ್ತಿದೆ.

ಇತ್ತೀಚೆಗೆ, ಅರಣ್ಯ ಕಾಯ್ದೆ, 1927ಕ್ಕೆ ಕರಡು ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ ನಾನು ವ್ಯಕ್ತಪಡಿಸಿದ ಆತಂಕಗಳಿಗೆ ಸ್ಪಂದಿಸುತ್ತ, ತಮ್ಮ ಮಂತ್ರಾಲಯ ಬುಡಕಟ್ಟು ಸಮುದಾಯಗಳ ಹಕ್ಕುಗಳ ರಕ್ಷಣೆಗೆ ಬದ್ಧವಾಗಿದೆ ಎಂದು ನೀವು ಹೇಳಿದ್ದಿರಿ. ಆದರೆ ಇದು ಸುಪ್ರಿಂ ಕೋರ್ಟಿನಲ್ಲಿರುವ ಮೊಕದ್ದಮೆಯಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಗೆ ಸವಾಲಿನ ಅತ್ಯಂತ ನಿರ್ಣಾಯಕ ಪ್ರಶ್ನೆಯಲ್ಲಿ ತಮ್ಮ ಮಂತ್ರಾಲಯದ ಪಾತ್ರದಲ್ಲಿ ಕಾಣಿಸುತ್ತಿಲ್ಲ ಎಂದು ಹೇಳಲು ನನಗೆ ಖೇದವಾಗುತ್ತಿದೆ.

ಮುಂದಿನ ವಿಚಾರಣೆ ನವಂಬರ್ 26ಕ್ಕೆ ನಿಗದಿಯಾಗಿದೆ. ತಾವು ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಲು ವೈಯಕ್ತಿಕವಾಗಿ ಸ್ವಲ್ಪ ಗಮನ ನೀಡುವಿರಾಗಿ ನಾನು ಆಶಿಸುತ್ತೇನೆ"

ಎಂದು ಬೃಂದಾ ಕಾರಟ್ ತಮ್ಮ ಪತ್ರದ ಕೊನೆಯಲ್ಲಿ ಹೇಳಿದ್ದಾರೆ.

"ಕಟ್ಟಡ ಕಾರ್ಮಿಕ ಮಂಡಳಿಯನ್ನು ಹಾಗೂ ಕಾರ್ಮಿಕರ ಬದುಕನ್ನು ರಕ್ಷಿಸಲು" ಒತ್ತಾಯಿಸಿ
ಕೇಂದ್ರ ಸರಕಾರದ ಉದ್ದೇಶಿತ ಸಾಮಾಜಿಕ ಸುರಕ್ಷಾ ಸಂಹಿತೆ –2018 ಕೈಬಿಡಲು ಆಗ್ರಹಿಸಿ

ಸಾವಿರಾರು ಕಟ್ಟಡ ಕಾರ್ಮಿಕರ ವಿಧಾನ ಸೌಧ ಚಲೋ

ಕೆ. ಮಹಾಂತೇಶ್



ಕೇಂದ್ರ ಸರಕಾರದ ಉದ್ದೇಶಿತ ಸಾರ್ವತ್ರಿಕ **ಸಾಮಾಜಿಕ ಸುರಕ್ಷತಾ ಮಸೂದೆ –2018 ಹಾಗೂ** ಈಗಾಗಲೇ ಸಂಸತ್ತಿನಲ್ಲಿ ಜಾರಿ ಮಾಡಿರುವ **ವೃತ್ತಿ ಆಧಾರಿತ ಸುರಕ್ಷಾ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಕುರಿತಾದ ಕಾನೂನನ್ನು** ವಿರೋಧಿಸಿ ಇಂದು ಸಹಸ್ರಾರು ಕಟ್ಟಡ ಕಾರ್ಮಿಕರು ಬೆಂಗಳೂರಿನಲ್ಲಿ ಬೃಹತ್ ವಿಧಾನ ಸೌಧ ಚಲೋ ನಡೆಸಿದರು.

ಕರ್ನಾಟಕ ಕನ್ಸ್ಟ್ರಕ್ಷನ್ ಮತ್ತು ಇತರೆಕಾರ್ಮಿಕ ಸಂಘ **(INTUC)**ಕರ್ನಾಟಕ ರಾಜ್ಯಕಟ್ಟಡ ಕಟ್ಟುವ ಮತ್ತು ಕಲ್ಲು ಹೊಡೆಯುವ ಕ್ವಾರಿ ಕಾರ್ಮಿಕರ ಸಂಘ (AITUC) ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (CITU) ಕರ್ನಾಟಕ ಸ್ಟೇಟ್ ಕನ್ಸ್ಟ್ರಕ್ಷನ್ ವರ್ಕರ್ಸ್ ಸೆಂಟ್ರಲ್‌ಯೂನಿಯನ್ (NCL) ಕರ್ನಾಟಕ ರಾಜ್ಯ ವಿವಿಧ ನಿರ್ಮಾಣಗಳ ಮಹಿಳಾ ಕಾರ್ಮಿಕರ ಜಾಗೃತಿ&ಹಕ್ಕುಗಳ ಸಂಘಟನೆ(HMS) ಸಂಘಟನೆಗಳನ್ನೊಳಗೊಂಡ ಸಮನ್ವಯ ಸಮಿತಿ ನೇತೃತ್ವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಕಟ್ಟಡ ಕಾರ್ಮಿಕರು ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕವರೆಗೂ ಮರೆವಣಿಗೆ ನಡೆಸಿದರು.

ಕಟ್ಟಡ ಕಾರ್ಮಿಕ ಮಂಡಳಿಯಲ್ಲಿ ನೋಂದಣಿಯಾಗಿರುವ ಲಕ್ಷಾಂತರ ಕಾರ್ಮಿಕರಿಗೆ ಇರುವ ಅನ್‌ಲೈನ್ ನೋಂದಣಿ ಸಮಸ್ಯೆ, ವಸತಿ ಸಮಸ್ಯೆ, ವಿದ್ಯಾರ್ಥಿವೇತನ, ಪಿಂಚಣಿ, ವೈದ್ಯಕೀಯ ನೆರವು, ಮೊದಲಾದ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಮಂಡಳಿ ಕಾರ್ಯದರ್ಶಿಗೆ ಸಲ್ಲಿಸಲಾಯಿತು. ಅಲ್ಲದೆ ಈಗಿರುವ 1996 ರ ಕಟ್ಟಡ ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುತ್ತಿರುವ ಕೇಂದ್ರ ಸರ್ಕಾರದ ನೀತಿಗಳಿಂದ ಕಟ್ಟಡ ಕಾರ್ಮಿಕರ ಬದುಕಿನ ಮೇಲೆ ಉಂಟಾಗುತಿರುವ ಪರಿಣಾಮಗಳ ಕುರಿತಾದ ಮನವಿಯನ್ನು ರಾಜ್ಯದ ಮುಖ್ಯಮಂತ್ರಿಗಳಿಗೆ ಹಾಗೂ ಪ್ರಧಾನ ಮಂತ್ರಿಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲಾಯಿತು. ಈ ಬಗ್ಗೆ ಉನ್ನತ ಮಟ್ಟದ ಸಭೆಯನ್ನು ನಡೆಸುವುದಾಗಿ ಕಾರ್ಮಿಕ ಇಲಾಖಾ ಕಾರ್ಯದರ್ಶೀಗಳು ಸಭೆಗೆ ಭರವಸೆ ನೀಡಿದರು ಮತ್ತು ಸೆಪ್ಟೆಂಬರ್ 20 ರಂದು ಕಲ್ಯಾಣ ಕಾರ್ಯದರ್ಶಿಗಳು ಐದು ಸಂಘಟನೆಯ ನಾಯಕರೊಂದಿಗೆ ಸಭೆಯನ್ನು ನಡೆಸಿದರು.

ಸರಕಾರದ ಪರವಾಗಿ ಆಗಮಿಸಿದ ಕಾರ್ಮಿಕ ಇಲಾಖೆ ಕಾರ್ಯದರ್ಶಿ ಕ್ಯಾಪ್ಟನ್ ಮಣಿವಣ್ಣನ್ ಮುಖ್ಯಮಂತ್ರಿಗಳ ಪರವಾಗಿ ಮನವಿ ಸ್ವೀಕರಿಸಿದರು ಮತ್ತು ಕಾರ್ಮಿಕರ ಬೇಡಿಕೆಗಳ ಬೇಡಿಕೆಗಳನ್ನು ಒಂದು ನಿಗದಿತ ಕಾಲಮಿತಿಯಲ್ಲಿ ಈಡೇರಿಸುವ ಭರವಸೆ ನೀಡಿದರು. ಕಟ್ಟಡ ಕಾರ್ಮಿಕ ಮಂಡಳಿ ಪರವಾಗಿ ಕೂಡ ಅಧಿಕಾರಿಗಳು ಹಾಜರಾಗಿ ಮನವಿ ಸ್ವೀಕರಿಸಿದರು.

ಐಎನ್‌ಟಿಯುಸಿ ಅಧ್ಯಕ್ಷರಾದ ಹೆಚ್.ಸಿ. ಶಾಮಣ್ಣ ರೆಡ್ಡಿ ಸಿಐಟಿಯು ಮುಖಂಡರಾದ ಎನ್.ವೀರಸ್ವಾಮಿ, ಎನ್‌ಸಿಎಲ್ ನ ಎನ್.ಪಿ.ಸ್ವಾಮಿ, ಹೆಚ್ ಎಂ.ಎಸ್‌ನ ನಾಗನಾಥ್ ಎಐಟಿಯುಸಿಯ ಎಚ್. ಕೆ. ರಾಮಚಂದ್ರಪ್ಪ ನೇತೃತ್ವದ ಅಧ್ಯಕ್ಷೀಯ ಮಂಡಳಿ ಸಭೆಯನ್ನು ನಿರ್ವಹಿಸಿತು

ಪ್ರತಿಭಟನೆಯನ್ನುದ್ದೇಶಿಸಿ ಐಎನ್‌ಟಿಯುಸಿ ಮುಖಂಡರಾದ ಶಾಂತಕುಮಾರ್ ಎಐಟಿಯುಸಿಯ ಶಿವಣ್ಣ, ಹೆಚ್. ಕೆ. ಸಿಐಟಿಯುನ ಕೆ,ಮಹಾಂತೇಶ್, ಬಿ. ಉಮೇಶ್ ಎನ್‌ಸಿಎಲ್‌ನ ಧನಶೇಖರ್ ಹಾಗೂ ಹೆಚ್‌ಎಂಎಸ್ ಪರವಾಗಿ ಕುಮಾರ್ ಮಾತನಾಡಿದರು ಇವರಲ್ಲದೆ ವಿವಿಧ ಸಂಘಟನೆಯ ಮುಖಂಡರಾದ ಪುಟ್ಟಸ್ವಾಮಿ, ಎನ್.ಪಿ. ಸ್ವಾಮಿ, ಮಮತಾ, ವನಜಾ ಹಾಗೂ ಲೀಲಾವತಿ, ಶಂಕರ್‌ಗಟ್ಟಿ ಸೇರಿ ಹಲವರು ಉಪಸ್ಥಿತರಿದ್ದರು.

ಕಟ್ಟಡ ಮಂಡಳಿ ಮತ್ತು ಕಾರ್ಮಿಕರ ಮೇಲಾಗುವ ಪರಿಣಾಮಗಳು

ಈಗಾಗಲೇ ನೋಟು ಅಮಾನ್ಯೀಕರಣ ಹಾಗೂ ಜಿಎಸ್‌ಟಿ ನೀತಿಗಳನ್ನು ಜಾರಿ ಮಾಡಿ ಕೋಟ್ಯಾಂತರ ಕಟ್ಟಡ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಿದ



ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಇದೀಗ **ಸಾಮಾಜಿಕ ಸುರಕ್ಷತಾ ಮಸೂದೆ –2018 ರನ್ನು** ಜಾರಿಗೊಳಿಸಲು ಹೊರಟಿದೆ ಮತ್ತು ಈಗಾಗಲೇ **ವೃತ್ತಿ ಆಧಾರಿತ ಸುರಕ್ಷಾ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಕುರಿತಾದ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಪಾಸು ಮಾಡಿಕೊಂಡಿದೆ.** ಇದರಿಂದ ನಾಲ್ಕು ಕೋಟಿ ಕಟ್ಟಡ ನಿರ್ಮಾಣ ಕಾರ್ಮಿಕರು ಈಗ ಪಡೆಯುತ್ತಿರುವ ಹಲವು ಸೌಲಭ್ಯಗಳಿಂದ ವಂಚಿತರಾಗಲಿದ್ದಾರೆ.

ಹೀಗೆ ತಿದ್ದುಪಡಿ ಮಾಡಲು ಹೊರಟಿರುವ ಕಾನೂನು ತಿದ್ದುಪಡಿಗಳಲ್ಲಿ ದೇಶದ ಕೋಟ್ಯಾಂತರ ಕಟ್ಟಡ ನಿರ್ಮಾಣ ಕಾರ್ಮಿಕರು ನೊಂದಣಿಯಾಗಿರುವ ಹಾಗೂ ಸೌಲಭ್ಯ ಪಡೆಯುತ್ತಿರುವ **ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಕಾನೂನು 1996 ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸೆಸ್ ಕಾನೂನು 1996 ಗಳು ಸೇರಿವೆ ಎಂಬುದು ಅತ್ಯಂತ ಆತಂಕದ ಸಂಗತಿಯಾಗಿದೆ. ಸಾಮಾಜಿಕ ಭದ್ರತಾ ಹಾಗೂ ಕಲ್ಯಾಣ ಮಸೂದೆ ಹಾಗೂ ವೃತ್ತಿ ಆಧಾರಿತ ಸುರಕ್ಷಾ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಕುರಿತಾದ ಎರಡು ಕೋಡ್‌ಗಳು ಜಾರಿಯಾದರೆ** ಈಗಿರುವ ನಮ್ಮ ಎರಡು ಕಟ್ಟಡ ಕಾರ್ಮಿಕ ಕಾನೂನುಗಳು ಸೇರಿ ರದ್ದಾಗಲಿವೆ.

ಕೇಂದ್ರ ಸರಕಾರ ಸಂಸತ್ತಿನಲ್ಲಿ ಪಾಸು ಮಾಡಿರುವ ಕಾನೂನು ಜಾರಿಯಾದರೆ

- 1996 ರಲ್ಲಿ ಜಾರಿಯಾದ ಕಟ್ಟಡ ಕಾರ್ಮಿಕ ಕಾನೂನು ಹಾಗೂ ಸೆಸ್ ಕಾನೂನುಗಳೆರಡು ರದ್ದಾಗುತ್ತವೆ. ಈಗಾಗಲೇ ನೊಂದಣೆಯಾಗಿರುವ ದೇಶದ 4 ಕೋಟಿ ಕರ್ನಾಟಕದ ಸುಮಾರು 20 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರ ಗುರುತಿನ ಚೀಟಿಗಳು ರದ್ದಾಗುತ್ತದೆ.
- ಅಂದರೆ ಈಗ ಕರ್ನಾಟಕದಲ್ಲಿ ಕಲ್ಯಾಣ ಮಂಡಳಿಯಲ್ಲಿ ತಮ್ಮ ಹೆಸರು ನೋಂದಾಯಿಸಿ ಸುಮಾರು 6 ಲಕ್ಷ ಜನರು ವಿವಿಧ ಕಲ್ಯಾಣ ಸೌಲಭ್ಯಗಳಿಗೆ ಅರ್ಜಿ ಹಾಕಿದ್ದಾರೆ. ಅವರೆಲ್ಲರೂ 14 ಸೌಲಭ್ಯಗಳನ್ನು ಪಡೆಯಲು ಅರ್ಹತೆ ಹೊಂದಿದ್ದಾರೆ ಆದರೆ **ಈ ಹೊಸ ಕಾನೂನು ಜಾರಿಯಾದರೆ ಮದುವೆ, ಪಿಂಚಣಿ, ಹೆರಿಗೆ ಭತ್ಯೆ, ವಿದ್ಯಾರ್ಥಿವೇತನಗಳು ಸೇರಿದಂತೆ ಹಲವು ಸೌಲಭ್ಯಗಳು ಇಲ್ಲದಂತೆ ಆಗುತ್ತವೆ.**
- ಹೊಸದಾಗಿ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ 'ಸಲಹಾ ಮಂಡಳಿ'ಗಳು ರಚನೆಯಾಗುತ್ತವೆ ಮತ್ತು ಅವುಗಳು ಹಿಂದಿನಂತೆ ತೀರ್ಮಾನ ಕೈಗೊಳ್ಳುವ ಮಂಡಳಿಗಳಾಗಿರುವುದಿಲ್ಲ. ಅದರಲ್ಲಿ ಕಟ್ಟಡ ಕಾರ್ಮಿಕ ಸಂಘಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಇರುವುದಿಲ್ಲ ಬದಲಾಗಿ ಕೇವಲ ಅಧಿಕಾರಿಗಳು ಮತ್ತು ಮಾಲೀಕರು ತುಂಬಿರುತ್ತಾರೆ.
- ಹೊಸ ರಾಜ್ಯ ಕಲ್ಯಾಣ ಮಂಡಳಿಯಲ್ಲಿ ಈಗಿನಂತೆ ನೊಂದಣಿ ಕಡ್ಡಾಯವಿಲ್ಲ. ಕಾರ್ಮಿಕರು 14ನೇ ವಯಸ್ಸಿನಿಂದ ನೊಂದಣಿ ಮಾಡಬಹುದು. ಇದರಿಂದ ಬಾಲ ಕಾರ್ಮಿಕ ಪದ್ದತಿಗೆ ಉತ್ತೇಜನ ನೀಡುತ್ತದೆ.
- ರಾಜ್ಯದ ಕಲ್ಯಾಣ ಮಂಡಳಿಗಳಲ್ಲಿ ಶೇಖರಿಸಲ್ಪಟ್ಟ ಸೆಸ್ ಹಣ ಕೇಂದ್ರ ಸರಕಾರದ ಕೈ ವಶವಾಗುತ್ತದೆ. ಇದರಿಂದ ಈಗಿನಂತೆ ಕಲ್ಯಾಣ ಮಂಡಳಿಗಳು ಸೌಲಭ್ಯಗಳ ಕುರಿತಾಗಿ ತೀರ್ಮಾನ ಕೈಗೊಳ್ಳುವಂತಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಈಗ ಶೇಖರಣೆ ಆಗಿರುವ ಸುಮಾರು 8 ಸಾವಿರ ಕೋಟಿ ಹಾಗೂ ಇಡೀ ದೇಶದ ವಿವಿಧ ಕಲ್ಯಾಣ ಮಂಡಳಿಯಲ್ಲಿ ಶೇಖರಣೆಯಾಗಿರುವ ಸುಮಾರು 70 ಸಾವಿರ ಕೋಟಿ ರೂ. ಹಣ ಕೇಂದ್ರ ಸರಕಾರದ ಕೈ ವಶವಾಗಲಿದೆ.
- ಇದೆಲ್ಲದಕ್ಕಿಂತ ಮುಖ್ಯವಾಗಿ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ಸೌಲಭ್ಯಗಳ ವಿತರಣೆಯನ್ನು ಖಾಸಗೀಯವರ ಕೈಗೆ ವಹಿಸಿ ಅವರಿಗೆ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಸಾವಿರಾರು ಕೋಟಿ ಹಣವನ್ನು ಧಾರೆ ಎರೆಯಲು ಕೇಂದ್ರ ಸರಕಾರ ನಡೆಸುತ್ತಿರುವ ಹುನ್ನಾರವಾಗಿದೆ.

"ಕಟ್ಟಡ ಕಾರ್ಮಿಕ ಕಾನೂನು–1996 ಉಳಿಸಿ–ಕಟ್ಟಡ ಕಾರ್ಮಿಕ ಮಂಡಳಿ ಹಾಗೂ ಕಾರ್ಮಿಕರ ಬದುಕನ್ನು ರಕ್ಷಿಸಬೇಕು.

ಕಾರ್ಮಿಕರು ಹಲವು ವರ್ಷಗಳ ಕಾಲ ಹೋರಾಟ ನಡೆಸಿ ಗಳಿಸಿದ ಕಾನೂನುಗಳನ್ನು ಮತ್ತು ಅದರಡಿ ದೊರಕುತ್ತಿದ್ದ ಸೌಲಭ್ಯಗಳನ್ನು ಇಲ್ಲದಂತೆ ಮಾಡುವ ಹುನ್ನಾರದ ವಿರುದ್ದ **"ಕಟ್ಟಡ ಕಾರ್ಮಿಕ ಕಾನೂನು–1996 ಉಳಿಸಿ–ಕಟ್ಟಡ ಕಾರ್ಮಿಕ ಮಂಡಳಿ ಹಾಗೂ ಕಾರ್ಮಿಕರ ಬದುಕನ್ನು ರಕ್ಷಿಸಿ"** ಎನ್ನುವ ವಿಶಾಲ ಆಂದೋಲನವನ್ನು ಚುನಾವಣೆ ಪೂರ್ವದಲ್ಲೇ ರಾಜ್ಯದ ಲೋಕಸಭಾ ಸದಸ್ಯರ ಮನೆಗಳ ಎದುರು ನಾವೆಲ್ಲ ನಡೆಸಿದ್ದರು. ಅಲ್ಲದೆ ಕೇಂದ್ರ ಸರಕಾರ ಅಂಗೀಕರಿಸಿರುವ ಕಾರ್ಮಿಕ ಸಂಹಿತೆ ಮಸೂದೆಗಳನ್ನು ಕೂಡಲೇ ಕೈ ಬಿಡಬೇಕೆಂದು ಆಗ್ರಹಿಸಿ ಜಂಟಿ **'ದುಂಡು ಮೇಜಿ ಸಭೆ'** ಈ ಸಭೆಯನ್ನು ಮತ್ತು ಆಗಸ್ಟ್ 9 ರಂದು ಜಿಲ್ಲಾ ಕೇಂದ್ರಗಳಲ್ಲಿ ಜಂಟಿ ಧರಣಿ ಸತ್ಯಾಗ್ರಹ ನಡೆಸಲಾಗಿದೆ ಅಲ್ಲದೆ ಪ್ರಧಾನ ಮಂತ್ರಿಗಳಿಗೆ, ರಾಜ್ಯದ ಮುಖ್ಯಮಂತ್ರಿಗಳಿಗೆ ಸಾವಿರಾರು ಕಾರ್ಮಿಕರು 'ಪೋಸ್ಟ್ ಕಾರ್ಡ ಚಳವಳಿ' ನಡೆಸಿದ್ದರು.

ಹಾಗಿದ್ದೂ ಕೇಂದ್ರ ಸರಕಾರ ಈಗಾಗಲೇ **ವೃತ್ತಿ ಆಧಾರಿತ ಸುರಕ್ಷಾ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಕುರಿತಾದ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಪಾಸು ಮಾಡಿಕೊಂಡಿದೆ. ಅದು ಜಾರಿಯಾದರೆ ಕೋಟ್ಯಾಂತರ ಕಟ್ಟಡ ವಲಯದ ಕಾರ್ಮಿಕರಿಗೆ ಈಗ ಸಿಗುತ್ತಿರುವ 14 ಸೌಲಭ್ಯಗಳು ಇಲ್ಲದಂತಾಗುತ್ತವೆ ಈ ಹಿನ್ನಲೆಯಲ್ಲಿ** ನಮ್ಮ ದೇಶದ ಕೋಟ್ಯಾಂತರ ಹಾಗೂ ರಾಜ್ಯದ ಲಕ್ಷಾಂತರ ಕಟ್ಟಡ ಕಾರ್ಮಿಕರು ಹಾಗೂ ಕುಟುಂಬಗಳ ಅಳಿವು ಉಳಿವಿನ ಪ್ರಶ್ನೆಯನ್ನು ಮುಂದು ಮಾಡಿ ಸೆಪ್ಟೆಂಬರ್ 19 ರಂದು ಬೆಂಗಳೂರಿನಲ್ಲಿ INTUC-CITU-AITUC-NCL-HMS ನೇತೃತ್ವದಲ್ಲಿ ಕರ್ನಾಟಕ ರಾಜ್ಯಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ರಚಿಸಿಕೊಂಡು ಈ ಜಂಟಿ ಬೃಹತ್ ಹೋರಾಟ ಸಂಘಟಿಸಿದ್ದವು.



ದಿಲ್ಲಿಯಲ್ಲಿ ಕಾಶ್ಮೀರಿ ಜನಸಾಮಾನ್ಯರ ದನಿ

ಮೋದಿ ಸರಕಾರ ಕಲಮು 370ನ್ನು ನಿಷ್ಕ್ರಿಯಗೊಳಿಸಿದ ಮೇಲೆ, ಸೀತಾರಾಮ್ ಯೆಚುರಿಯವರು ಶ್ರೀನಗರವನ್ನು ಪ್ರವೇಶಿಸಿರುವ ದೇಶದ ಮೊದಲ ರಾಜಕೀಯ ನಾಯಕರಾದರೆ, ಮಹಮ್ಮದ್ ಯುಸುಫ್ ತಾರಿಗಾಮಿಯವರು ಮಾಧ್ಯಮಗಳವರೊಂದಿಗೆ ಮುಕ್ತವಾಗಿ ಮಾತಾಡಿರುವ ಮೊದಲ ಪ್ರಮುಖ ಕಾಶ್ಮೀರಿ ರಾಜಕೀಯ ಮುಖಂಡರಾಗಿದ್ದಾರೆ. ಅವರು ಆಗಸ್ಟ್ 5ರ ನಂತರ ಪರಿಸ್ಥಿತಿಗಳನ್ನು ಕುರಿತಂತೆ ಸರಕಾರದ ನಿರೂಪಣೆಗಳನ್ನೇ ಕೇಳುತ್ತ ಬಂದಿರುವ ಪತ್ರಕರ್ತರಿಗೆ, ಅವರ ಮೂಲಕ ದೇಶದ ಜನಸಾಮಾನ್ಯರಿಗೆ ಈ ಪರಿಸ್ಥಿತಿಗಳನ್ನು ಕುರಿತಂತೆ ಕಾಶ್ಮೀರಿಗಳ ನಿರೂಪಣೆಗಳನ್ನೂ ಕೇಳಿಸಿಕೊಳ್ಳಿ ಎಂದಿದ್ದಾರೆ. ಅವರ ಪತ್ರಿಕಾಗೋಷ್ಠಿಯ ಒಂದು ವರದಿ:



"ಕಾಶ್ಮೀರಿಗಳು ನಿಧಾನವಾಗಿ ಸಾಯುತ್ತಿದ್ದಾರೆ, ನಮ್ಮ ಉಸಿರು ಕಟ್ಟಿದೆ, ನಾವೂ ಬದುಕಬಯಸುತ್ತೇವೆ, ನಿಮ್ಮೊಡನೆ ಹೆಜ್ಜೆ ಹಾಕಬಯಸುತ್ತೇವೆ"

"ಕಾಶ್ಮೀರದಲ್ಲಿ ಬಿಗಿ ನಿರ್ಬಂಧ ಹೇರಿ 40 ದಿನಗಳಾಗಿವೆ.ಇಂಟರ್ನೆಟ್ ಇಲ್ಲ, ಟೆಲಿಫೋನ್ ಇಲ್ಲ, ಅಂಗಡಿಗಳು ತೆರೆದಿವೆಯೇ–ಇಲ್ಲ; ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿದೆ–ಮಕ್ಕಳು ಶಾಲೆ–ಕಾಲೇಜುಗಳಿಗೆ ಹೋಗಲು ಆಗುತ್ತಿದೆಯೇ –ಇಲ್ಲ. ಆದರೂ ಸಂಜೆ ಹೇಳುತ್ತಾರೆ–ಸ್ಥಿತಿ ಸಾಮಾನ್ಯವಾಗಿದೆ. ಇದೇನಿದು ಹೊಸ ಮಂತ್ರ? ನಂತರ ಕೇಳುತ್ತಾರೆ – ಯಾರೂ ಸತ್ತಿಲ್ಲವಲ್ಲ! ಅಯ್ಯೋ ಸ್ವಾಮಿ, ಕಾಶ್ಮೀರಿಗಳು ನಿಧಾನವಾಗಿ ಸಾಯುತ್ತಿದ್ದಾರೆ, ನಮ್ಮ ಉಸಿರು ಕಟ್ಟಿದೆ. ನಾವೂ ಬದುಕ ಬಯಸುತ್ತೇವೆ–ಒಬ್ಬ ಕಾಶ್ಮೀರಿ, ಒಬ್ಬ ಹಿಂದುಸ್ಥಾನಿಯಾಗಿ ಇಲ್ಲಿ ಕೇಳುತ್ತಿದ್ದೇನೆ–ವಿನಂತಿಸಿಕೊಳ್ಳುತ್ತಿದ್ದೇನೆ–ಬಹುಶಃ ಆಡಳಿತ ನಡೆಸುವವರ ವರೆಗೆ ನನ್ನ ದನಿ ತಲುಪುತ್ತದೋ ಇಲ್ಲವೋ–ಆದರೆ ದೇಶದ ಜನಸಾಮಾನ್ಯರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ–ನಮಗೂ ಬದುಕುವ ಅವಕಾಶ ಸಿಗಬೇಕು"

ಇದು ಸಪ್ಟಂಬರ್ 17 ರಂದು ನವದೆಹಲಿಯಲ್ಲಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ, ಕಾಶ್ಮೀರ ಕಣಿವೆಯ ಒಂದು ಅತ್ಯಂತ ಭಯೋತ್ಪಾದನಾಗ್ರಸ್ತ ಪ್ರದೇಶವಾದ ಕುಲ್ಗಾಮ್‌ನಿಂದ ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಆರಿಸಲ್ಪಟ್ಟಿರುವ ಮಹಮ್ಮದ್ ಯುಸುಫ್ ತಾರಿಗಾಮಿ ಪತ್ರಿಕಾಗೋಷ್ಠಿಯಲ್ಲಿ ಮಾಡಿದ ಕಳಕಳಿಯ ಮನವಿ. "ಒಬ್ಬ ನಾಗರಿಕನಾಗಿ ವಿನಂತಿಸಿಕೊಳ್ಳುತ್ತಿದ್ದೇನೆ, ಸರಕಾರದ ನಿರೂಪಣೆಯನ್ನು ಕೇಳುತ್ತಿದ್ದೀರಿ, ಕಾಶ್ಮೀರಿ ಜನತೆಯ ನಿರೂಪಣೆಯನ್ನೂ ಕೇಳಿ. ನಾವು ಕೊಲೆಯಾಗ ಬಯಸುವುದಿಲ್ಲ, ಸಾಯಬಯಸುವುದಿಲ್ಲ, ನಾಶವಾಗಬಯಸುವುದಿಲ್ಲ"

"ಈ ಸಂದೇಶವನ್ನು ದಯವಿಟ್ಟು ದೇಶದ ಜನಸಾಮಾನ್ಯರಿಗೆ ತಲುಪಿಸಿ–ನಿಮಗೆ ಸಾಧ್ಯವಿದ್ದರೆ" ಎಂದು ಅವರು ದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದ ಪತ್ರಕರ್ತರನ್ನು ಕೇಳಿಕೊಂಡರು. ಕೇವಲ ಒಂದು ವಾರ ದಿಲ್ಲಿಯಲ್ಲೋ, ಬೇರಾವ ನಗರದಲ್ಲೋ ಈ ರೀತಿ ಎಲ್ಲವನ್ನೂ ಮುಚ್ಚಿಬಿಟ್ಟಿದ್ದರೆ ಏನಾಗಬಹುದು ಯೋಚಿಸಿ ಎಂದೂ ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜತೆಗಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಆರಂಭದಲ್ಲಿ ಹೇಳಿದಂತೆ, ಇದು ಬಿಗಿ ನಿರ್ಬಂಧಕ್ಕೆ ಒಳಗಾಗಿರುವ ಕಾಶ್ಮೀರ ಕಣಿವೆಯಿಂದ ಹೊಮ್ಮಿ ಬಂದ ಮೊದಲ ಸಾಚಾ ದನಿ. ಗೃಹಬಂಧನದಲ್ಲಿದ್ದ ಮತ್ತು ಅನಾರೋಗ್ಯದಿಂದಿದ್ದ ಅವರನ್ನು ಭೇಟಿಯಾಗಲು ಯೆಚುರಿ ಎರಡು ಬಾರಿ ಶ್ರೀನಗರಕ್ಕೆ ಹೋದರೂ ಅಲ್ಲಿನ ಆಡಳಿತ ಅವರನ್ನು ವಿಮಾನ ನಿಲ್ದಾಣದಿಂದಲೇ ಹಿಂದಕ್ಕೆ ಕಳಿಸಿತು. ನಂತರ ಯೆಚುರಿಯವರು ಸುಪ್ರಿಂ ಕೋರ್ಟಿನಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿ ಹಾಕಿದ ಮೇಲೆಯೇ ಸುಪ್ರಿಂ ಕೋರ್ಟ್ ಅನುಮತಿಯೊಂದಿಗೆ ಅವರನ್ನು ಭೇಟಿಯಾಗಲು ಸಾಧ್ಯವಾಯಿತು.

ಅಲ್ಲಿಂದ ಹಿಂದಿರುಗಿ ಯೆಚುರಿಯವರು ಸುಪ್ರಿಂ ಕೋರ್ಟಿನಲ್ಲಿ ಅಫಿಡವಿಟ್ ಸಲ್ಲಿಸಿದ ಮೇಲೆ ನ್ಯಾಯಾಲಯ ಅವರನ್ನು ಚಿಕಿತ್ಸೆಗೆ ದಿಲ್ಲಿಗೆ ಕರೆ ತರಲು ಅನುಮತಿ ನೀಡಿತು, ಹಾಗೂ ಅವರ ಸ್ಥಾನಬದ್ಧತೆಯ ಬಗ್ಗೆ ವಿವರಣೆ ನೀಡುವಂತೆ ಭಾರತ ಸರಕಾರಕ್ಕೆ ನೋಟೀಸು ಜಾರಿ ಮಾಡಲಾಯಿತು. ಸರಕಾರ ಇದುವರೆಗೆ ಇದಕ್ಕೆ ಉತ್ತರಿಸಿಲ್ಲ. ಸುಪ್ರಿಂ ಕೋರ್ಟ್ ಅವರು ತಮಗೆ ಬೇಕೆನಿಸಿದಾಗ ಶ್ರೀನಗರಕ್ಕೆ ಮರಳಲು ಸ್ವತಂತ್ರರು, ಆದರೆ ಶ್ರೀನಗರದಲ್ಲಿ ಸಂಚರಿಸಲು ಅಲ್ಲಿನ ಆಡಳಿತದಿಂದ ಸೂಕ್ತ ಅನುಮತಿ ಪಡೆಯಬೇಕು ಎಂದಿತು. ಈ ಹಿನ್ನೆಲೆಯಲ್ಲಿ ಈ ಪತ್ರಿಕಾಗೋಷ್ಠಿ ನಡೆದಿದೆ.

ಮೋದಿ ಸರಕಾರ ಕಲಮು 370ನ್ನು ನಿಷ್ಕ್ರಿಯಗೊಳಿಸಿದ ಮೇಲೆ, ಸೀತಾರಾಮ್ ಯೆಚುರಿಯವರು ಶ್ರೀನಗರವನ್ನು ಪ್ರವೇಶಿಸಿರುವ ದೇಶದ ಮೊದಲ ರಾಜಕೀಯ ನಾಯಕರಾದರೆ, ಮಹಮ್ಮದ್ ಯುಸುಫ್ ತಾರಿಗಾಮಿಯವರು ಮಾಧ್ಯಮಗಳವರೊಂದಿಗೆ ಮುಕ್ತವಾಗಿ ಮಾತಾಡಿರುವ ಮೊದಲ ಪ್ರಮುಖ ಕಾಶ್ಮೀರಿ ರಾಜಕೀಯ ಮುಖಂಡರಾಗಿದ್ದಾರೆ.

"ನಾನು ಬಹಳಷ್ಟು ಕೆಟ್ಟದಿನಗಳನ್ನು ಕಂಡಿದ್ದೇನೆ. ನನ್ನ ಗೆಳೆಯರು ದಾಳಿಗಳಿಗೆ ಬಲಿಯಾಗಿದ್ದಾರೆ, ನನ್ನ ಕುಟುಂಬದ ಸದಸ್ಯರೂ ಬಲಿಯಾಗಿದ್ದಾರೆ, ನನ್ನ ಮೇಲೂ ಬಹಳಷ್ಟು ಹಲ್ಲೆಗಳು ನಡೆದಿವೆ. ಆದರೆ ಎಂದೂ ನನ್ನ ಮನಸ್ಸು ಇಂದಿನಷ್ಟು ಕದಡಿರಲಿಲ್ಲ, ಹೀಗೇಕಾಯಿತು ಎಂದು ನನಗೆ ನಾನೇ ಪ್ರಶ್ನೆ ಕೇಳಿಕೊಳ್ಳುತ್ತಿದ್ದೇನೆ" ಎಂದು ಭಾವುಕರಾಗಿ ತಾರಿಗಾಮಿ ಹೇಳಿದರು. ಈಗಿನ ಆಡಳಿತಗಾರರಿಂದ ನನಗೆ ಬಹಳವೇನೂ ನಿರೀಕ್ಷೆ ಇರಲಿಲ್ಲ. ಆದರೆ ಅವರ ಹತಾಶೆ ಇಂತಹ ಮಟ್ಟಕ್ಕೆ ಇಳಿಯುತ್ತದೆ ಎಂದು ತಾನು ಭಾವಿಸಿರಲಿಲ್ಲ, ಇದರಿಂದ ಆಶ್ಚರ್ಯವೂ ಆಗಿದೆ, ಆಘಾತವೂ ಆಗಿದೆ ಎಂದು ಅವರು ಮುಂದುವರೆದು ಹೇಳಿದರು.

"ಭಾರತ ಒಕ್ಕೂಟ ಮತ್ತು ಜಮ್ಮು ಮತ್ತು ಕಾಶ್ಮೀರದ ಐಕ್ಯತೆಯ ಬುನಾದಿಯ ಮೇಲೆಯೇ, ಭಾರತೀಯ ಸಂವಿಧಾನವನ್ನು ರಕ್ಷಿಸುವ ಜನಾದೇಶ ಇರುವವರೇ ಪ್ರಹಾರ ನಡೆಸಿದ್ದಾರೆ" ಎಂದು ಕಲಮು 370ನ್ನು ನಿಷ್ಕ್ರಿಯಗೊಳಿಸಿರುವ ಮತ್ತು ಆ ರಾಜ್ಯವನ್ನು ಇಬ್ಭಾಗ ಮಾಡಿ ಕೆಳಗಿನ ಸ್ಥಾನಕ್ಕೆ ಇಳಿಸಿರುವ ಬಗ್ಗೆ ಟಿಪ್ಪಣಿ ಮಾಡುತ್ತ ತಾರಿಗಾಮಿ ಹೇಳಿದರು. ಯಾವುದೇ ಚರ್ಚೆ, ಮಾತುಕತೆಯಿಲ್ಲದೆಯೇ ಕೇಂದ್ರ ಸರಕಾರ ಕೈಗೊಂಡಿರುವ ನಿರ್ಣಯ ಕಾಶ್ಮೀರಿಗಳ ವಿಶ್ವಾಸಕ್ಕೆ ಆಘಾತ ಬಗೆದಿದೆ. 1947ರಲ್ಲಿ ಮಹಾರಾಜ ಹರಿಸಿಂಗ್ ಭಾರತದೊಂದಿಗೆ ಸೇರ್ಪಡೆಯಾಗಬೇಕೇ ಬೇಡವೇ ಎಂದೂ ಇನ್ನೂ ಅಸಮಂಜಸದಲ್ಲಿದ್ದಾಗ, ಕಾಶ್ಮೀರದ ಜನರು ಗಡಿಯಾಚೆಯಿಂದ(ಹೊಸದಾಗಿ ರಚನೆಯಾದ ಪಾಕಿಸ್ತಾನದಿಂದ)ಬರುತ್ತಿದ್ಧ ಘರ್ವಾನುಗಳಿಗೆ

ಪುಟ 10 ಕ್ಕೆ

ಕಾಶ್ಮೀರಿ ಕಮ್ಯುನಿಸ್ಟ್

ಮಹಮ್ಮದ್ ಯುಸುಫ್ ತಾರಿಗಾಮಿಯವರಿಗೆ ಸ್ವತಂತ್ರ ಭಾರತದ್ದೇ ವಯಸ್ಸು, ಏಕೆಂದರೆ ಅವರು ಹುಟ್ಟಿದ್ದು 1947ರಲ್ಲಿ, ಅವರ ತಾಯ್ನಾಡು ಭಾರತದೊಂದಿಗೆ ಸೇರ್ಪಡೆಯಾದ ವರ್ಷವೇ. ಕಾಶ್ಮೀರಿ ರೈತರ ಕುಟುಂಬದಲ್ಲಿ ಹುಟ್ಟಿದ ಅವರು ಆಗಿನ ಸಂಪ್ರದಾಯದಂತೆ ತನ್ನ ಊರಿನ ಹೆಸರನ್ನೂ ತಮ್ಮ ಹೆಸರಿನಲ್ಲಿ ಹೊಂದಿದ್ದಾರೆ. ತಾರಿಗಾಮ್ ದಕ್ಷಿಣ ಕಾಶ್ಮೀರ ಕಣಿವೆಯ ಕುಲ್ಗಾಮ್ ಜಿಲ್ಲೆಗೆ ಸೇರಿದ್ದು.

ಯುಸುಫ್ ತಾರಿಗಾಮಿ ರಾಜಕೀಯಕ್ಕೆ , ಅಲ್ಲಿಂದ ಕಮ್ಯುನಿಸ್ಟ್ ಜಗತ್ತಿನತ್ತ ಆಕರ್ಷಿತರಾದದ್ದು ಆಗಿನ ಒಬ್ಬ ಪ್ರಮುಖ ಕಮ್ಯುನಿಸ್ಟ್ ಮುಖಂಡರಾದ ಅಬ್ದುಲ್ ಕರೀಂ ವಾನಿಯವರ ಭಾಷಣಗಳನ್ನು ಕೇಳಿ.

1940ರ ದಶಕದಲ್ಲಿ ಕಾಶ್ಮೀರದಲ್ಲಿ ಕಮುನಿಸ್ಟರು ಬಹಳಷ್ಟು ಬೌದ್ಧಿಕ ಪ್ರಭಾವ ಹೊಂದಿದ್ದರು, ಅಲ್ಲದೆ ರೈತ ಅಂದೋಲನದಲ್ಲಿಯೂ ಪ್ರಬಾವ ಹೊಂದಿದ್ದರು. ಇದರಿಂದಾಗಿ ಶೇಖ್ ಅಬ್ದುಲ್ಲಾರವರ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಮೇಲೂ ಕಮ್ಯುನಿಸ್ಟರ ಪ್ರಬಾವ ಗಮನಾರ್ಹವಾಗಿತ್ತು. ಶೇಖ್ ಅಬ್ದುಲ್ಲ ಮೊದಲು 1932ರಲ್ಲಿ ಸ್ಥಾಪಿಸಿದ್ದು "ಆಲ್ ಜಮ್ಮು ಅಂಡ್ ಕಾಶ್ಮೀರ್ ಮುಸ್ಲಿಮ್ ಕಾನ್ಫರೆನ್ಸ್" ಮುಂದೆ ಇದರ ಹೆಸರನ್ನು "ಆಲ್ ಜಮ್ಮು ಅಂಡ್ ಕಾಶ್ಮೀರ್ ನ್ಯಾಶನಲ್ ಕಾನ್ಫರೆನ್ಸ್" ಎಂದು ಬದಲಿಸಿದರು. ಬಿಪಿಎಲ್ ಬೇಡಿ ಮತ್ತು ಅವರ ಪತ್ನಿ ಫ್ರೆಡಾ ಬೇಡಿ, ನಮ್ಮ ಉಪಖಂಡದ ಒಬ್ಬ ಪ್ರಮುಖ ಕವಿ ಮತ್ತು ಪತ್ರಕರ್ತ ಫೈಜ್ ಅಹ್ಮದ್ ಫೈಜ್ ಮುಂತಾದ ಆಗಿನ ಅವಿಭಜಿತ ಭಾರತದ ವಾಯವ್ಯ ಪ್ರದೇಶದ ಪ್ರಮುಖ ಕಮ್ಯುನಿಸ್ಟರ ನಿಕಟ ಒಡನಾಟವೇ ಇದಕ್ಕೆ ಕಾರಣ. 1944ರಲ್ಲಿ ನ್ಯಾಶನಲ್ ಕಾನ್ಫರೆನ್ಸ್ 'ನಯಾ ಕಾಶ್ಮೀರ್' ಎಂಬ ತನ್ನ ಕಾರ್ಯಕ್ರಮವನ್ನು ಅಂಗೀಕರಿಸಿತು. ಇದರ ಮುಖಪುಟವೂ ಸೇರಿದಂತೆ ಇದರಲ್ಲಿ ಬಿಪಿಎಲ್ ಬೇಡಿ ಮುಂತಾದ ಕಮ್ಯುನಿಸ್ಟರ ಪ್ರಭಾವ ದಟ್ಟವಾಗಿ ಕಾಣುತ್ತದೆ. ಭೂಮಾಲಕತ್ವದ ನಿರ್ಮೂಲನೆ, ವ್ಯಾಪಕ ಭೂಸುಧಾರಣೆ, ಪ್ರಜಾಪ್ರಭುತ್ವದ ಒಡೆತನದಲ್ಲಿ ಪ್ರಮುಖ ಉದ್ದಿಮೆಗಳು ಮುಂತಾದವು ಇದರ

ಪುಟ 10 ಕ್ಕೆ





"..ನಾವೂ ಬದುಕ ಬಯಸುತ್ತೇವೆ, ನಿಮ್ಮೊಡನೆ ಹೆಜ್ಜೆ ಹಾಕಬಯಸುತ್ತೇವೆ"

ಪುಟ 9 ರಿಂದ

ಕಿವಿಗೊಡಲು ನಿರಾಕರಿಸಿದರು ಜಾತ್ಯತೀತ ಭಾರತದಲ್ಲಿ ಸೇರ್ಪಡೆಯಾಗಲು ನಿರ್ಧರಿಸಿದರು ಎಂಬುದನ್ನು ಈ ಸರಕಾರ ಮರೆತಂತಿದೆ ಎಂದು ತಾರಿಗಾಮಿ ಖೇದ ವ್ಯಕ್ತಪಡಿಸಿದರು. ಅಗ ಕಾಶ್ಮೀರಿ ಜನತೆಯ ಮೇಲೆ ಯಾವುದೇ ಒತ್ತಡವಿರಲಿಲ್ಲ, ಬಲವಂತವಿರಲಿಲ್ಲ, ಜನಾಂದೋಲನದ ಸಮಾನ ಅನುಭವದ ಬಂಧ ವಿತ್ತು. ಕಾಶ್ಮೀರದ ಜನತೆ ನಿರಂಕುಶಪ್ರಭುತ್ವದ ವಿರುದ್ಧ ಹೋರಾಡುತ್ತಿದ್ದರೆ, ಭಾರತದ ಇತರ ಭಾಗಗಳಲ್ಲಿ ಜನಗಳು ಬ್ರಿಟಿಶ್ ವಸಾಹತುಶಾಹಿಯ ವಿರುದ್ಧ ಹೋರಾಡುತ್ತಿದ್ದರು ಎಂದು ತಾರಿಗಾಮಿ ಇತಿಹಾಸವನ್ನು ನೆನಪಿಸುತ್ತ, ಆ ಬಂಧವನ್ನು, ಅಲ್ಲಿಯೂ ಇಲ್ಲಿಯೂ ಬಹಳ ಶ್ರಮಪಟ್ಟು ಬೆಸೆದ ಐಕ್ಯತೆಯನ್ನು ಈಗ ಕಡಿದು ಹಾಕಲಾಗಿದೆ ಎಂದು ವ್ಯಥೆಯಿಂದ ಹೇಳಿದರು.

ಕಾಶ್ಮೀರದ ಜನತೆ ಮತ್ತು ಭಾರತ ಸರಕಾರದ ನಡುವೆ ವಿಶ್ವಾಸದ ಕೊರತೆ ಇದೆ. "ಭಾರತ ನನ್ನ ದೇಶ ಕೂಡ. ನಾನೇನೂ ಹೊರಗಿನವನಲ್ಲ. ಒಬ್ಬ ಸರಾಸರಿ ಕಾಶ್ಮೀರಿ ಸ್ವರ್ಗವನ್ನೇನೂ ಕೇಳುತ್ತಿಲ್ಲ, ನಾವೂ ನಿಮ್ಮ ಜತೆಗೂಡಿ ನಡೆಯಲು ಬಿಡಿ ಎಂದಷ್ಟೇ ಕೇಳುತ್ತಿದ್ದಾರೆ. ನಾವೂ ನಿಮ್ಮ ಜತೆಗೆ ಹೆಜ್ಜೆ ಹಾಕುತ್ತೇವೆ ಎನ್ನುತ್ತಿದ್ದಾರೆ. ಅವರ ಕೇಳಿಕೆಗೆ ಕಿವಿಗೊಡಿ" ಎಂದು ತಾರಿಗಾಮಿ ಕೇಂದ್ರ ಸರಕಾರಕ್ಕೆ ಮನವಿ ಮಾಡಿದರು. ಈ ಪ್ರಶ್ನೆಯನ್ನು ಪರಿಹರಿಸುವ ಹೊಣೆಯನ್ನು ಸೈನಿಕರ ಮೇಲೆ ಹಾಕಬೇಡಿ. ಏಕೆಂದರೆ ಈ ಸಮಸ್ಯೆಯನ್ನು ಅವರು ಸೃಷ್ಟಿಸಿಲ್ಲ, ಅದನ್ನು ಸೃಷ್ಟಿಸಿದವರು ರಾಜಕಾರಣಿಗಳೇ. ಅವರೇ ಇದನ್ನು ಕೂತು ಬಗೆಹರಿಸಬೇಕು ಎಂದರು ತಾರಿಗಾಮಿ.

ಅಲ್ಲಿ ಈ 40 ದಿನಗಳಲ್ಲಿ ಒಂದು ಬುಲೆಟ್ ಕೂಡ ಚಲಾಯಿಸಿಲ್ಲ ಎಂಬ ಸರಕಾರದ ಅಫಿಡವಿಟ್ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ "ಜೈಲಿನಲ್ಲೂ ಬುಲೆಟ್ ಚಲಾಯಿಸುವುದಿಲ್ಲ. ಆದರೆ ಜೈಲು ಜೈಲೇ ತಾನೇ?" ಎಂದು ಮಾರ್ಮಿಕವಾಗಿ ಹೇಳುತ್ತ ಕಾಶ್ಮೀರಿಗಳು ತಮ್ಮನ್ನೂ ಈ ದೇಶದ ನಾಗರಿಕರು ಎಂದು ಕಾಣಿರಿ ಎಂದಷ್ಟೇ ಕೇಳುತ್ತಿದ್ದಾರೆ, ನಾಗರಿಕರ ಒಂದು ಸಮುದಾಯದೊಂದಿಗೆ ಪ್ರತ್ಯೇಕ ರೀತಿಯಲ್ಲಿ ವರ್ತಿಸುವುದು ಸರಿಯಲ್ಲ ಎಂಬುದೇ ನಮ್ಮ ಕೇಳಿಕೆ ಎಂದು ಮುಂದುವರೆದು ಹೇಳಿದರು.

ಕಳೆದ 40ದಿನಗಳಲ್ಲಿ ತಾನು ಸ್ವಾತಂತ್ರ್ಯದ ಕ್ಷಣಗಳನ್ನು ಅನುಭವಿಸಿದ್ದು ನವದೆಹಲಿಯಲ್ಲೇ, ತನ್ನದೇ ಆದ ಶ್ರೀನಗರದಲ್ಲಿ ಅದು ಇಲ್ಲ ಎಂದು ಅವರು ದುಃಖದಿಂದ ಹೇಳಿದರು.

ಆಗಸ್ಟ್ 5 ರ ಮೊದಲು ಕಣಿವೆಯಲ್ಲಿ ಹೆಚ್ಚುವರಿ ಸಶಸ್ತ್ರ ಪಡೆಗಳನ್ನು ತರುತ್ತಿದ್ದಾಗ, ನಂತರ ಅಮರನಾಥ ಯಾತ್ರೆಯನ್ನು ನಡುವೆಯೇ ನಿಲ್ಲಿಸಿದ ಅಭೂತಪೂರ್ವ ಕ್ರಮದ ಹಿನ್ನೆಲೆಯಲ್ಲಿ ಆಗಸ್ಟ್ 4ರಂದು ಡಾ. ಫಾರುಕ್ ಅಬ್ದುಲ್ಲರವರ ನಿವಾಸದಲ್ಲಿ ಸರ್ವ ಪಕ್ಷ ಸಭೆಯ ನಂತರ ಒಂದು ಪತ್ರಿಕಾ ಹೇಳಿಕೆ ನೀಡಿ ವದಂತಿಗಳನ್ನು ಹರಡಿ ಭೀತಿ ಸೃಷ್ಟಿ ಮಾಡಬೇಡಿ ಎಂದು ಸರಕಾರಕ್ಕೆ ಮನವಿ ಮಾಡಿಕೊಳ್ಳಲಾಗಿತ್ತು. "ಅದಾದ ನಡುರಾತ್ರಿಯಿಂದಲೇ ನಾವೆಲ್ಲ ಮನೆಯಿಂದಾಚೆಗೆ ಹೋಗುವಂತಿಲ್ಲ ಎಂದು ತಾಕೀತು ಮಾಡಲಾಯಿತು. ಈಗ ಫಾರುಕ್ ಅಬ್ದುಲ್ಲರನ್ನು ಕರಾಳ ಪಿಎಸ್‌ಎ ಕಾಯ್ದೆಯ ಅಡಿಯಲ್ಲಿ ಅವರ ನಿವಾಸದಲ್ಲಿ ಒಂದು ಕೋಣೆಯಲ್ಲಿ ಬಂಧಿಸಿಡಲಾಗಿದೆ. ನಾವು, ಫಾರುಕ್ ಅಬ್ದುಲ್ಲ ಮತ್ತು ಇತರರು ಭಯೋತ್ಪಾದಕರೇನಲ್ಲ. ಆದರೆ ಭಾರತದ ಬೆಂಬಲಕ್ಕೆ ನಿಂತಿದ್ದ ಎಲ್ಲ ರಾಜಕೀಯ ಮುಖಂಡರನ್ನು ಕೇಂದ್ರ ಸರಕಾರ ಬಂಧನದಲ್ಲಿಟ್ಟಿರುವುದನ್ನು ನೋಡಿ ಗಡಿಯಾಚೆ ಇರುವವರು ಚಪ್ಪಾಳೆ ತಟ್ಟುತ್ತಿದ್ದಾರೆ, ಭೇಷ್, ನಾವು ಮಾಡಲಾಗದ್ದನ್ನು ನೀವು ಮಾಡಿದ್ಧೀರಿ ಎನ್ನುತ್ತಿದ್ದಾರೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ" ಎಂದು ತಾರಿಗಾಮಿ ಬೇಸರದಿಂದ ನುಡಿದರು.

ತಮ್ಮನ್ನು ಗೃಹ ಬಂಧನದಿಂದ ಬಿಡಿಸಲು ಸತತ ಪ್ರಯತ್ನ ನಡೆಸಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಅವರ ಭೇಟಿಗೆ ಮತ್ತು ತನಗೆ ಶುಶ್ರೂಷೆ ಪಡೆಯಲು ದಿಲ್ಲಿಗೆ ಬರಲು ಅನುಮತಿ ನೀಡಿದ ಸರ್ವೋಚ್ಚ ನ್ಯಾಯಾಲಯಕ್ಕೆ ಮತ್ತು ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಸಲ್ಲಿಸುವಲ್ಲಿ ನೆರವಾದ ವಕೀಲರುಗಳಿಗೆ ತಾರಿಗಾಮಿ ಕೃತಜ್ಞತೆಗಳನ್ನು ಸಲ್ಲಿಸಿದರು.

ತಾರಿಗಾಮಿ ತಮ್ಮ ಜೀವಮಾನವಿಡೀ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದನೆಯ ವಿರುದ್ಧ ಹೋರಾಡಿದವರು, ತಮ್ಮ ಕುಟುಂಬದ ಸದಸ್ಯರನ್ನೂ ಈ ಹೋರಾಟದಲ್ಲಿ ಕಳಕೊಂಡವರು. ಆದರೂ ಅವರಂತಹ ಮುಖಂಡರನ್ನು ಬಂಧನದಲ್ಲಿಡಲಾಗಿದೆ ಎಂದು ಸೀತಾರಾಮ್ ಯೆಚುರಿ ಮಾತಾಡುತ್ತ ಹೇಳಿದರು. ಡಾ.ಫಾರುಕ್ ಅಬ್ದುಲ್ಲರವರ ಮೇಲೂ



ಆಗಸ್ಟ್ 5ರಿಂದ ಅವರ ಕಾನೂನುಬಾಹಿರ ಸ್ಥಾನಬದ್ಧತೆಯ ವಿರುದ್ಧ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆಗೆ ಬರುವ ವರೆಗೆ ಯಾವುದೇ ಆರೋಪಗಳಿರಲಿಲ್ಲ. ಆದರೆ ಈಗ ಇದ್ದಕ್ಕಿದ್ದಂತೆ ಪಿಎಸ್‌ಎ ಅಡಿಯಲ್ಲಿ ಬಂಧಿಸಿರುವುದು ಸರಕಾರಕ್ಕೆ ನಂತರ ಹೊಳೆದಿರುವ ವಿಚಾರವಷ್ಟೇ ಎಂದು ಯೆಚುರಿ ಟಿಪ್ಪಣಿ ಮಾಡಿದರು.


ತಾರಿಗಾಮಿಯವರು ಶೀಘ್ರದಲ್ಲೇ ಕಲಮು 370ನ್ನು ದುರ್ಬಲಗೊಳಿಸುವ ಮತ್ತು ಜಮ್ಮು-ಕಾಶ್ಮೀರ ರಾಜ್ಯದ ಮರುಸಂಘಟನೆಯ ಕೇಂದ್ರ ಸರಕಾರದ ನಿರ್ಧಾರದ ವಿರುದ್ಧ ಒಂದು ಪ್ರತ್ಯೇಕ ರಿಟ್ ಅರ್ಜಿಯನ್ನು ಸಲ್ಲಿಸುತ್ತಾರೆ ಎಂದು ಯೆಚುರಿಯವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಇಲ್ಲೀಗ ಜನಗಳ ಜೀವನಾಧಾರ ಪ್ರಮುಖ ಪ್ರಶ್ನೆಯಾಗಿದೆ. ಜನಗಳ ಬದುಕು ಅಸ್ತವ್ಯಸ್ತಗೊಂಡು 40 ದಿನಗಳು ಕಳೆದಿವೆ, ಇನ್ನೂ ಎಷ್ಟು ದಿನ ಇದು ಮುಂದುವರೆಯುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿನ ಬುಡಮಟ್ಟದ ವಾಸ್ತವತೆ ಸರಕಾರ ಹೇಳುವುದಕ್ಕೆ ತದ್ವಿರುದ್ಧವಾಗಿದೆ ಎಂಬುದು ಸ್ಪಷ್ಟ. ಸನ್ನಿವೇಶ 'ಸಾಮಾನ್ಯ"ವಾಗಿದೆ ಎನ್ನಬೇಕಾದರೆ ಅದು ಜನಗಳ ಬದುಕು ಸಾಮಾನ್ಯವಾಗಿದ್ದಾಗ ಮಾತ್ರ ಸಾಧ್ಯ ಎಂದು ಯೆಚುರಿಯವರು ಹೇಳಿದರು.



"ಭಾರತ ನನ್ನ ದೇಶ ಕೂಡ. ನಾನೇನೂ ಹೊರಗಿನವನಲ್ಲ. ಒಬ್ಬ ಸರಾಸರಿ ಕಾಶ್ಮೀರಿ ಸ್ವರ್ಗವನ್ನೇನೂ ಕೇಳುತ್ತಿಲ್ಲ, ನಾವೂ ನಿಮ್ಮ ಜತೆಗೂಡಿ ನಡೆಯಲು ಬಿಡಿ ಎಂದಷ್ಟೇ ಕೇಳುತ್ತಿದ್ದಾರೆ. ನಾವೂ ನಿಮ್ಮ ಜತೆಗೆ ಹೆಜ್ಜೆ ಹಾಕುತ್ತೇವೆ ಎನ್ನುತ್ತಿದ್ದಾರೆ. ಅವರ ಕೇಳಿಕೆಗೆ ಕಿವಿಗೊಡಿ"

ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

"....ಭಾರತದ ಬೆಂಬಲಕ್ಕೆ ನಿಂತಿದ್ದ ಎಲ್ಲ ರಾಜಕೀಯ ಮುಖಂಡರನ್ನು ಕೇಂದ್ರ ಸರಕಾರ ಬಂಧನದಲ್ಲಿಟ್ಟಿರುವುದನ್ನು ನೋಡಿ ಗಡಿಯಾಚೆ ಇರುವವರು ಚಪ್ಪಾಳೆ ತಟ್ಟುತ್ತಿದ್ದಾರೆ, ಭೇಷ್, ನಾವು ಮಾಡಲಾಗದ್ದನ್ನು ನೀವು ಮಾಡಿದ್ಧೀರಿ ಎನ್ನುತ್ತಿದ್ದಾರೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ"



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

"ಕಾಶ್ಮೀರದಲ್ಲಿ ನಿರ್ಬಂಧಗಳ ಸಡಿಲಿಕೆ ಪಾಕಿಸ್ತಾನದ ವರ್ತನೆಯನ್ನು ಅವಲಂಬಿಸಿದೆ-ರಾಷ್ಟ್ರೀಯ ಭದ್ರತಾ ಸಲಗಹೆಗಾರರು

ಕಾಶ್ಮೀರಿ ಕಮ್ಯುನಿಸ್ಟ್

ಪುಟ 9 ರಿಂದ

ಪ್ರಮುಖ ಅಂಶಗಳಾಗಿದ್ದವು. ಇದೇ ಕಾರ್ಯಕ್ರಮದ ಆಧಾರದಲ್ಲಿ ಜಮ್ಮು ಮತ್ತು ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾದ ನಂತರ ಶೇಖ್ ಅಬ್ದುಲ್ಲಾ ನೇತೃತ್ವದಲ್ಲಿ ವ್ಯಾಪಕ ಭೂಸುಧಾರಣೆ ಜಾರಿಯಾಯಿತು, ಇದರಲ್ಲಿ ಕಲಮು 370ರ ಪಾತ್ರ ಗಣನೀಯ ಎಂಬುದು ನಮ್ಮ ಓದುಗರಿಗೆ ಈಗಾಗಲೇ ತಿಳಿದಿದೆ (370ನೇ ವಿಧಿ ಮತ್ತು ಕಾಶ್ಮೀರದ ಆಮೂಲಾಗ್ರ ಭೂಸುಧಾರಣೆ- ಪ್ರೊ. ಪ್ರಭಾತ್ ಪಟ್ನಾಯಕ್, ಜನಶಕ್ತಿ, ಆಗಸ್ಟ್ 26- ಸಪ್ಟಂಬರ್ 1, 2019).

ರಾಜಪ್ರಭುತ್ವದ, ಪಾಳೆಯಗಾರಿಕೆಯ ವಿರುದ್ಧ ಹೋರಾಟದಲ್ಲಿ ಒಂದು ನಾಗರಿಕ ರಕ್ಷಣಾ ಪಡೆಯ ರಚನೆಯಲ್ಲಿಯೂ ಈ ಪ್ರಭಾವ ಕಾಣುತ್ತದೆ. 1947ರಲ್ಲಿ ಪಾಕಿಸ್ತಾನ ಪ್ರಾಯೋಜಿತ ಅತಿಕ್ರಮಣಕಾರರಿಂದ ಶ್ರೀನಗರವನ್ನು ರಕ್ಷಿಸಿಕೊಳ್ಳುವಲ್ಲಿಯೂ ಈ ನಾಗರಿಕ ಪಡೆ ಪ್ರಮುಖ ಪಾತ್ರ ವಹಿಸಿತು.

ಈ ಪಾಳೆಯಗಾರೀ-ವಿರೋಧಿ, ಜಾತ್ಯತೀತ ಮತ್ತು ಸಮಾಜವಾದಿ ಕಣ್ನೋಟದಿಂದ ಆಕರ್ಷಿತರಾದ ಯುಸುಫ್ ತಾರಿಗಾಮಿ 1967ರಲ್ಲಿ ರೈತರಿಂದ ಬಲವಂತದಿಂದ ಭತ್ತದ ಸಂಗ್ರಹದ ವಿರುದ್ಧ ಹೋರಾಟದ ಮೂಲಕ ರಾಜಕೀಯವನ್ನು ಪ್ರವೇಶಿಸಿದರು. ಅಲ್ಲಿಂದ ಆರಂಭಿಸಿ ಅವರು ರೈತರು, ಕೃಷಿ ಕೂಲಿಕಾರರು, ಗಣಿ ಕಾರ್ಮಿಕರು, ಮತ್ತಿತರ ದುಡಿಯುವ ಜನವಿಭಾಗಗಳ ಹೋರಾಟಗಳಲ್ಲಿ ಸಕ್ರಿಯರಾಗಿದ್ದರಲ್ಲದೆ ಕುಲ್ಗಾಮ್ ಜಿಲ್ಲೆಯಲ್ಲಿ ವ್ಯಾಪಕ ಪ್ರಭಾವ ಹೊಂದಿರುವ ಜಮಾತೇ ಇಸ್ಲಾಮಿ ಮತ್ತು ಇತರ ಸಂಘಟನೆಗಳ ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯ ವಿರುದ್ಧವೂ ಹೋರಾಟ ಅವರ ಬದುಕಿನ ಅವಿಭಾಜ್ಯ ಅಂಗವಾಗಿ ಬಿಟ್ಟಿತು. 1967ರಿಂದ ಆರಂಭಿಸಿ ಹಲವು ಬಾರಿ ಅವರು ಜೈಲುವಾಸ ಕಂಡಿದ್ದಾರೆ. ವೈಯಕ್ತಿಕ ದಾಳಿಗಳನ್ನು ಎದುರಿಸಿದ್ದಾರೆ. 1979ರಲ್ಲಿ ಜಮ್ಮು ಮತ್ತು ಕಾಶ್ಮೀರ ಸಾರ್ವಜನಿಕ ಸುರಕ್ಷತಾ ಕಾಯ್ದೆಯ ಅಡಿಯಲ್ಲಿ ಮೊದಲು ಬಂಧಿತರಾದವರು ತಾರಿಗಾಮಿಯವರೇ-ದುಡಿಯುವ ಜನಗಳ ಪರವಾಗಿ ದನಿಯೆತ್ತಿ ಆಳುವ ಮಂದಿಯ 'ಸುರಕ್ಷಿತತೆ'ಗೆ ಭಂಗ ತಂದುದಕ್ಕಾಗಿ!

ಇದರಿಂದಾಗಿಯೇ ಅವರು 1996ರಿಂದ 2014ರ ನಡುವೆ ಸತತವಾಗಿ ನಾಲ್ಕು ಬಾರಿ(1996, 2002, 2008 ಮತ್ತು 2014-ಕಲಮು 370ರ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಹೊಂದಿದ್ದ ಪ್ರತ್ಯೇಕ ಸಂವಿಧಾನದ ಅಡಿಯಲ್ಲಿ ವಿಧಾನಸಭೆಯ ಕಾರ್ಯಾವಧಿ 6 ವರ್ಷ) ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಆರಿಸಿ ಬಂದರು.

ಆಗಸ್ಟ್ 4-5ರ ಮಧ್ಯರಾತ್ರಿ ಯಾವುದೇ ಕಾರಣಗಳನ್ನು ಕೊಡದೆ ಅವರನ್ನು ಗೃಹಬಂಧನದಲ್ಲಿ ಇಡಲಾಗಿತ್ತು. ಸರಕಾರ ಇದುವರೆಗೂ ಈ ಕುರಿತಂತೆ ಸುಪ್ರಿಂ ಕೋರ್ಟಿನ ನೋಟೀಸಿಗೆ ಉತ್ತರ ಕೊಟ್ಟಿಲ್ಲ.

(ಕೃಪೆ: ನ್ಯೂಸ್‌ಕ್ಲಿಕ್)



ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಯಲ್ಲಿ ಪೊಲಿಟ್‌ಬ್ಯುರೊ ಸದಸ್ಯರೊಡನೆ ಯುಸುಫ್ ತಾರಿಗಾಮಿ

'ಉದಾರವಾದ' ಏಕೆ ಸಾಯುತ್ತಿದೆ?

'ಉದಾರವಾದ'ದ ಅವನತಿಯ ಬಗೆಗೆ ನಾವು ಆತಂಕಿತರಾಗಬೇಕೇ? ಕಣ್ಣೀರು ಹಾಕಬೇಕೇ? ಉದಾರವಾದದ ರಕ್ಷಣೆಗೆ ಧಾವಿಸಬೇಕೇ? ಅಥವಾ 'ಉದಾರವಾದ' ಈಗ ಬಂಡವಾಳಶಾಹಿ ವ್ಯವಸ್ಥೆಗೆ ಯಾಕೆ ಬೇಕಾಗಿಲ್ಲ? ಅದಕ್ಕೆ 'ಕಮ್ಯುನಿಸಂ' ಭೀತಿ ದೂರವಾಗಿದ್ದು ಮಾತ್ರ ಕಾರಣವೇ? ಅಥವಾ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆದ ಕೆಲವು ಬದಲಾವಣೆಗಳಿಂದಾಗಿ ಇದು ಆಗಿದೆಯೇ, ಎಂದು ವಿಶ್ಲೇಷಿಸುವುದು ಸೂಕ್ತವಲ್ಲವೇ?

ವಸಂತರಾಜ ಎನ್.ಕೆ.

ಜನ ಯಾಕೆ ಇಷ್ಟು ಕೋಮುವಾದಿಗಳು, ವೈಚಾರಿಕತೆಯ ವಿರೋಧಿಗಳು, ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ದಾಳಿಗಳಿಗೆ ಕುರುಡಾದವರೂ, ಮೂಢನಂಬಿಕೆಗೆ ಸುಲಭವಾಗಿ ಬಲಿಯಾಗುವವರು ಆಗುತ್ತಿದ್ದಾರೆ? 'ಉದಾರವಾದಿ' ರಾಜಕೀಯ ಪಕ್ಷಗಳು, ಸಾಮಾಜಿಕ-ಸಾಂಸ್ಕೃತಿಕ ಸಂಸ್ಥೆಗಳು, ಬುದ್ಧಿಜೀವಿಗಳು, ಮಾಧ್ಯಮಗಳು ಸಹ ಯಾಕೆ ಕೋಮುವಾದ, ಮೌಢ್ಯ, ವೈಯಕ್ತಿಕ ಸ್ವಾತಂತ್ರ್ಯದ ವಿರೋಧಿಗಳು, ಸರಕಾರದ ಸರ್ವಾಧಿಕಾರದ ಬೆಂಬಲಿಗರು ಆಗುತ್ತಿದ್ದಾರೆ? ಸರಕಾರಗಳು ಆಳುವ ನಾಯಕರು ಎಲ್ಲ ಜನವಿಭಾಗಗಳ ಹಿತಾಸಕ್ತಿಗೆ ವಿರುದ್ಧವಾದ ಕಟು ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ? ಇದು ನಮ್ಮ ದೇಶದಲ್ಲಿ ಮಾತ್ರವಲ್ಲ, ಅಭಿವೃದ್ಧ ದೇಶಗಳಲ್ಲಿ, ಮೂರನೇ ಜಗತ್ತಿನ ಬಡದೇಶಗಳಲ್ಲಿ, ಮಾಜಿ ಸಮಾಜವಾದಿ ದೇಶಗಳಲ್ಲಿ ಎಲ್ಲೆಲ್ಲೂ ಒಂದೇ ರೀತಿಯಲ್ಲಿ ಹೀಗ್ಯಾಕೆ ಆಗುತ್ತಿದೆ. ಅಭಿವೃದ್ಧ ದೇಶಗಳಲ್ಲಿ ಜನಾಂಗವಾದ, ಬಡ ದೇಶಗಳಿಂದ ವಲಸೆಗೆ ಉಗ್ರ ವಿರೋಧ, ಫ್ಯಾಸಿವಾದಿ ಉಗ್ರ ಬಲಪಂಥೀಯ ಪಕ್ಷಗಳಿಗೆ ಸಿದ್ಧಾಂತಗಳಿಗೆ ಯಾಕೆ ಇಷ್ಟು ಬೆಂಬಲ ದೊರಕುತ್ತಿದೆ? ಇತ್ತೀಚಿನವರೆಗೂ 'ಉದಾರವಾದ' ಎಲ್ಲೆಲ್ಲೂ ಸಾರ್ವತ್ರಿಕ ಮೌಲ್ಯವಾಗಿದ್ದದ್ದು, ಈಗ ಎಲ್ಲೆಲ್ಲೂ ಸಾಂಪ್ರದಾಯಿಕ ಬಲಪಂಥೀಯತೆಗೆ ಜಾಗ ಬಿಟ್ಟುಕೊಟ್ಟದ್ದು ಹೇಗೆ? ನಮ್ಮ ದೇಶದಲ್ಲೂ ಸಾರ್ವತ್ರಿಕವಾಗಿ ಒಪ್ಪಿತವಾಗಿದ್ದ 'ನೆಹರೂ ಉದಾರವಾದ', ಕಳೆದ 70 ವರ್ಷಗಳಲ್ಲಿ ಆದ ಎಲ್ಲಾ ಪ್ರಮಾದಗಳಿಗೂ ಉಳಿದ ನ್ಯೂನತೆಗಳಿಗೂ ಅಪರಾಧಿ ಸ್ಥಾನದಲ್ಲಿ ನಿಲ್ಲುವಂತಾದ್ದು ಹೇಗೆ?

ಇತ್ತೀಚಿನ ಜಿ-20 ಶೃಂಗಸಭೆಯಲ್ಲಿ ಭಾಗವಹಿಸಿದ ನಾಯಕರೆಲ್ಲರೂ ಸಾಂಪ್ರದಾಯಿಕ ಬಲಪಂಥೀಯರಾಗಿದ್ದು 'ಉದಾರವಾದ'ದ ಕಟು ವಿರೋಧಿಗಳಾಗಿದ್ದಾರೆ. ಇತ್ತೀಚೆಗೆ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ರಶ್ಯದ ಅಧ್ಯಕ್ಷ ಪುಟಿನ್ "ಉದಾರವಾದಿ ಧೋರಣೆ ಪ್ರಚಲಿತವಾಗಿದ್ದ ಕಾಲ ಎಂದೋ ಸಂದು ಹೋಗಿದೆ. ಕಳೆದ ಕೆಲವು ದಶಕಗಳಲ್ಲಿ ಇದ್ದ ಹಾಗೆ ಉದಾರವಾದಿಗಳು, ಎಲ್ಲರಿಗೂ ಎಲ್ಲದರ ಬಗೆ ಇನ್ನು ಮುಂದೆ ನಿರ್ದೇಶನ ಕೊಡುವ ಹಾಗಿಲ್ಲ" ಎಂದಿದ್ದಾರೆ. ಪುಟಿನ್ ರಶ್ಯದ ಮತ್ತು ವೈಯಕ್ತಿಕವಾಗಿ ತಮ್ಮ ಸ್ಥಾನವನ್ನು ಇಂದಿನ ಜಗತ್ತಿನಲ್ಲಿ ಭದ್ರಪಡಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಸ್ಪಷ್ಟ. ರಾಷ್ಟ್ರದ ಭದ್ರತೆಯ ಹೆಸರಲ್ಲಿ ವೈಯಕ್ತಿಕ ಸ್ವಾತಂತ್ರ್ಯಗಳ ಮೇಲೆ ದಾಳಿ, ಎಲ್ಲರ ಮೇಲೆ ಕಣ್ಗಾವಲಿಡುವ 'ದೊಡ್ಡಣ್ಣ' ಪ್ರಭುತ್ವ, ಮಾಧ್ಯಮಗಳ ಮೇಲೆ ಪ್ರಭುತ್ವದ ನಿಯಂತ್ರಣ ಇತ್ಯಾದಿ, ಹಲವು ದಶಕಗಳ ಕಾಲ ಮಾಜಿ ಸೋವಿಯೆಟ್ ಒಕ್ಕೂಟ ಮತ್ತು ರಶ್ಯಾದ ಮೇಲೆ 'ಉದಾರವಾದಿ'ಗಳ ಆಪಾದನೆಗಳಾಗಿದ್ದವು. ಆ ಆಪಾದನೆಗಳೇ ಇಂದು ಸಾಂಪ್ರದಾಯಿಕ ಉಗ್ರ ಬಲಪಂಥೀಯತೆಯ ಪರಮ ಮೌಲ್ಯಗಳಾಗಿರುವ ಸಂದರ್ಭವನ್ನು ಬಳಸಿ ಆ 'ಉದಾರವಾದಿ'ಗಳನ್ನು ಬಯಲಿಗೆಳೆಯಲು ಪುಟಿನ್ ಪ್ರಯತ್ನಿಸುತ್ತಿದ್ದರು ಎಂಬುದೂ ಸ್ಪಷ್ಟ.

'ಉದಾರವಾದ' ಎಂದರೇನು? ವೈಯಕ್ತಿಕ ಸ್ವಾತಂತ್ರ್ಯ ಮತ್ತು (ನಾಗರಿಕ ಮತ್ತು ಮಾನವ) ಹಕ್ಕುಗಳು, ಸರಕಾರಗಳ ಸೀಮಿತ ನಿಯಂತ್ರಣ, ಮುಕ್ತ ಮಾರುಕಟ್ಟೆ ಆಧಾರಿತ ಬಂಡವಾಳಶಾಹಿ, ಪ್ರಜಾಪ್ರಭುತ್ವ, ಸೆಕ್ಯುಲರ್ ವಾದ, ಧಾರ್ಮಿಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಲಿಂಗ-ಜನಾಂಗೀಯ ಇತ್ಯಾದಿಗಳ ಸಮಾನತೆ – ಇವೆಲ್ಲ ಉದಾರವಾದಿ ಮೌಲ್ಯಗಳು. ಇವು ಫ್ರೆಂಚ್ ಕ್ರಾಂತಿಯಿಂದ ಹೊಮ್ಮಿದ ಮೌಲ್ಯಗಳು ಎನ್ನಲಾಗುತ್ತದೆ. ಮೊದಲು ವ್ಯಾಪಕವಾಗಿ ಬೇರೂರಿದ್ದ ಪಾಳೆಯಗಾರಿ ಪದ್ಧತಿಯಲ್ಲಿ ಬೇರುಗಳಿದ್ದ ಸಾಂಪ್ರದಾಯಿಕತೆಯ ವಿರುದ್ಧ ಎದ್ದು ಬಂದು ಅದು 19-20ನೇ ಶತಮಾನದಲ್ಲಿ ವ್ಯಾಪಕವಾಗಿ ಅಂಗೀಕಾರಾರ್ಹವಾಗಿತ್ತು. 'ಉದಾರವಾದ' ಬಂಡವಾಳಶಾಹಿ ವ್ಯವಸ್ಥೆಯ ಮೊದಲ ಆಯ್ಕೆಯಾಗೇನೂ ಇರಲಿಲ್ಲ. ಸಾಂಪ್ರದಾಯಿಕ ಬಲಪಂಥೀಯತೆಯೇ ಅದರ ಮೊದಲ ಆಯ್ಕೆಯಾಗಿತ್ತು. "ಕಮ್ಯುನಿಸಂ"ನ ಸವಾಲುಗಳನ್ನು ಎದುರಿಸಲು, 20ನೇ ಶತಮಾನದಲ್ಲಿ "ಫ್ಯಾಸಿಸಂ"ನ್ನೂ ಅದು ಅಂಗೀಕರಿಸಿತ್ತು. ಆದರೆ ಎರಡನೇ ಮಹಾಯುದ್ಧದಲ್ಲಿ "ಫ್ಯಾಸಿಸಂ"ನ ಸೋಲಿನ ನಂತರ "ಕಮ್ಯುನಿಸಂ" ಅದರ ಬದ್ಧ ವೈರಿಯಾಗಿತ್ತು. "ಕಮ್ಯುನಿಸಂ"ನ ಸವಾಲನ್ನು ಎದುರಿಸುತ್ತಾ, ಸಾರ್ವತ್ರಿಕ ಶಿಕ್ಷಣ, ಸಾರ್ವತ್ರಿಕ ಆರೋಗ್ಯ, ಪೂರ್ಣ ಉದ್ಯೋಗ ಮುಂತಾದ ಅದರ ಹಲವು ಮೌಲ್ಯಗಳನ್ನು ಭಾಗಶಃವಾಗಿಯಾದರೂ ಅಂಗೀಕರಿಸಬೇಕಾದ ಅನಿವಾರ್ಯತೆಯಿಂದಾಗಿ, ಅದು 'ಉದಾರವಾದ'ದ ಈ ಅವತಾರವನ್ನು ಅಂಗೀಕರಿಸಬೇಕಾಯಿತು. ಅದು ಹಲವು ಜನವಿಭಾಗಗಳಿಗೆ ಆಕರ್ಷಕವಾಗಿ ಕಂಡಿತ್ತು. ಅದರಲ್ಲೂ ಎಲ್ಲೆಡೆ ಅದರ ಪ್ರಯೋಜನ ಪಡೆದ ಮಧ್ಯಮ ವರ್ಗಗಳಿಗೆ ಆಪ್ಯಾಯಮಾನವಾಗಿತ್ತು. ಆಳುವ ವರ್ಗಗಳಿಗೆ ಸಹ "ಕಮ್ಯುನಿಸಂ"ನ್ನು ದೂರವಿಡುವ ಅಸ್ತ್ರವಾಗಿ ಕಂಡಿತ್ತು. ಕ್ರಮೇಣ 'ಉದಾರವಾದ'ದ ಮೌಲ್ಯಗಳು ಬಂಡವಾಳಶಾಹಿ ವ್ಯವಸ್ಥೆಯ ಸ್ವಾಭಾವಿಕ ಆಯ್ಕೆಯಂತೆ ಕಾಣಲಾರಂಭಿಸಿತ್ತು, ಉದಾರವಾದ ಬಂಡವಾಳಶಾಹಿ ವ್ಯವಸ್ಥೆಯ ಸಿದ್ಧಾಂತವಾಗಿ ಕಾಣಲಾರಂಭಿಸಿತ್ತು.

1990ರ ದಶಕದ ಆದಿಯಲ್ಲಿ "ಕಮ್ಯುನಿಸಂ"ನ ಭೀತಿ ದೂರವಾಗಿ, ಹಣಕಾಸು ಬಂಡವಾಳ ಆಧಾರಿತ ಕಟು ಬಂಡವಾಳಶಾಹಿ ವ್ಯವಸ್ಥೆ (ಅಥವಾ ನವ-ಉದಾರವಾದಿ) ರೂಪುಗೊಳ್ಳುವುದರೊಂದಿಗೆ ಅದಕ್ಕೆ ಈ 'ಉದಾರವಾದ'ದ ಮುಖವಾಡ ಅಗತ್ಯವಿರಲಿಲ್ಲ. ಅದನ್ನು ಕ್ರಮೇಣ ಕಿತ್ತು ಹಾಕುತ್ತಿದೆ. ಹಲವು ಉದಾರವಾದಿ ಮೌಲ್ಯಗಳಿಗೆ ತಿಲಾಂಜಲಿ ಕೊಡುತ್ತಿದೆ. ಹಿಂದಿನ ಉದಾರವಾದಿಗಳೂ ನವ-ಉದಾರವಾದಿ ಆರ್ಥಿಕತೆಯನ್ನು ಮತ್ತು ಅದರ ಮೌಲ್ಯಗಳನ್ನು ಪೂರ್ಣವಾಗಿ ಅಂಗೀಕರಿಸಿದರು. ನವ-ಉದಾರವಾದಿ ಆರ್ಥಿಕತೆ ಶ್ರೀಮಂತ-ಬಡವ ಅಸಮಾನತೆಯನ್ನೂ, ಬಹುಸಂಖ್ಯಾತ ಜನರ ಸಂಕಟಗಳನ್ನೂ ಅಗಾಧವಾಗಿ ಹೆಚ್ಚಿಸಿತು. ಅದರ ಜತೆ ತೀವ್ರ ಅತೃಪ್ತಿ ಆಕ್ರೋಶಗಳೂ ಹೆಚ್ಚಿವೆ. ನವ-ಉದಾರವಾದಿ ಆರ್ಥಿಕತೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ ಸಾಂಪ್ರದಾಯಿಕರು, ಈ ಅತೃಪ್ತಿ-ಆಕ್ರೋಶಗಳನ್ನು ಉದಾರವಾದಿ ಪಕ್ಷಗಳು ವ್ಯಕ್ತಿಗಳು ಮತ್ತು ಮೌಲ್ಯಗಳ ವಿರುದ್ಧ ದ್ವೇಷವಾಗಿ ತಿರುಗಿಸುವಲ್ಲಿ ಯಶಸ್ವಿಯಾದರು. ಅದಕ್ಕಾಗಿ ಉದಾರವಾದದ (ಅಥವಾ ಬಂಡವಾಳಶಾಹಿಯ ಅದರ ಆವೃತ್ತಿಯ) ಹಲವು ನ್ಯೂನತೆಗಳನ್ನು ಸಮರ್ಥವಾಗಿ ಬಳಸಿಕೊಂಡರು. ಟ್ರಂಪ್, ಮೋದಿ ಇತ್ಯಾದಿ ನಾಯಕರ ಏರುಗತಿ ಇದನ್ನೇ ಪ್ರತಿನಿಧಿಸುತ್ತದೆ.

ತಂತ್ರಜ್ಞಾನ ಮತ್ತು ಉದಾರವಾದದ ಅವನತಿ

'ಉದಾರವಾದ'ದ ಅವನತಿಯ ಬಗೆಗೆ ನಾವು ಆತಂಕಿತರಾಗಬೇಕೆ? ಕಣ್ಣೀರು ಹಾಕಬೇಕೆ? ಉದಾರವಾದದ ರಕ್ಷಣೆಗೆ ಧಾವಿಸಬೇಕೆ? ಅಥವಾ ಉದಾರವಾದ ಬಂಡವಾಳಶಾಹಿ ವ್ಯವಸ್ಥೆಗೆ ಈಗ ಯಾಕೆ ಬೇಕಾಗಿಲ್ಲ? ಬರಿಯ 'ಕಮ್ಯುನಿಸಂ' ಭೀತಿ ದೂರವಾಗಿದ್ದು ಮಾತ್ರ ಕಾರಣವೇ? ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆದ ಕೆಲವು ಬದಲಾವಣೆಗಳಿಂದಾಗಿ ಇದು ಆಗಿದೆಯೇ, ಎಂದು ವಿಶ್ಲೇಷಿಸುವುದು ಸೂಕ್ತವಲ್ಲವೇ?

ಇದಕ್ಕೆ 1980ರ ದಶಕದಿಂದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆದ ಅದರಲ್ಲಿಯೂ ಬಂಡವಾಳ ಮತ್ತು ಶ್ರಮಿಕರ ನಡುವೆ ಆದ ಬದಲಾವಣೆಗಳ ಅವಲೋಕನ ಮಾಡಬೇಕಾಗುತ್ತದೆ. 1980ರ ದಶಕದಲ್ಲಿ ಅಗ್ಗದ ಶ್ರಮಿಕರ ಹುಡುಕಾಡುತ್ತಾ ದೊಡ್ಡ ಪ್ರಮಾಣದಲ್ಲಿ ಯುರೋಪು-ಅಮೆರಿಕದ ಅಭಿವೃದ್ಧ ದೇಶಗಳಿಂದ ಚೀನಾ ಮತ್ತು ಆಗ್ನೇಯ ದೇಶಗಳಿಗೆ ಫ್ಯಾಕ್ಟರಿ ಉತ್ಪಾದನೆಯನ್ನು ವರ್ಗಾಯಿಸಲು ಆರಂಭಿಸಿತು. ಅದರ ಜತೆಗೆ ಪರಿಸರ ಮಾಲಿನ್ಯ ಮತ್ತು ಅದರ ಜತೆಗೆ ತಳುಕು ಹಾಕಿಕೊಂಡ ಸಮಸ್ಯೆಗಳನ್ನೂ ರಫ್ತು ಮಾಡಿತು. ಅಭಿವೃದ್ಧ ದೇಶಗಳಲ್ಲಿ 'ಶಾಂತಿಯುತ ಸ್ವಚ್ಛ ಪರಿಸರ' ಮತ್ತು ಉದಾರವಾದಿ ಮೌಲ್ಯಗಳನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿತು. ಈ ನಡುವೆ ಹಣಕಾಸು ಬಂಡವಾಳದ ಭಾರೀ ಶೇಖರಣೆ ಮತ್ತು 1980-90ರ ದಶಕಗಳಲ್ಲಿ ಮಾಹಿತಿ ತಂತ್ರಜ್ಞಾನ(ಐಟಿ)ಯ ಅಗಾಧ ಬೆಳವಣಿಗೆಯೊಂದಿಗೆ, ಅದನ್ನು ಜಗತ್ತಿನ ಎಲ್ಲಾದರೂ ಹೂಡುವ ಲಾಭ ತೆಗೆಯುವ ವ್ಯವಸ್ಥೆಯನ್ನು ಜಾರಿಗೆ ತಂದಿತು.

ತಂತ್ರಜ್ಞಾನ, ಅದರಲ್ಲೂ ಮಾಹಿತಿ ತಂತ್ರಜ್ಞಾನದ ಅಗಾಧ ಬೆಳವಣಿಗೆ ಬಂಡವಾಳ ಮತ್ತು ಶ್ರಮಿಕರ ನಡುವಿನ ಸಂಬಂಧಗಳನ್ನು ಅಗಾಧವಾಗಿ ಬದಲಾಯಿಸಿದೆ. ಹೆಚ್ಚಿನ ಫ್ಯಾಕ್ಟರಿಗಳು ಆಟೋಮೇಶನ್ (ಸ್ವಯಂ-ನಿಯಂತ್ರಿತ ಯಂತ್ರಗಳ, ರೊಬೊಟುಗಳ ಬಳಕೆಯಿಂದ)ನಿಂದ ಕಾರ್ಮಿಕರ ಸಂಖ್ಯೆ ಮತ್ತು ಚೌಕಾಶಿ ಶಕ್ತಿಯ ಮೇಲೆ ತೀವ್ರ ದಾಳಿ ಮಾಡಿದೆ. ಇದು ಮೊದಲ ಬಾರಿಗೆ ವಾಹನಗಳ ತಯಾರಿಕೆಯಲ್ಲಿ ಅನ್ವಯವಾಗಿ ಈಗ ಹೆಚ್ಚಿನ ಸರಕುಗಳ ತಯಾರಿಕೆಗೆ ವಿಸ್ತರಿಸಿದೆ. ರೊಬೊಟ್, 3-ಡಿ ಪ್ರಿಂಟಿಂಗ್ ಮತ್ತು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನಗಳ ಬಳಕೆಯಿಂದ ಶೂಗಳಿಂದ ವಿಮಾನದ ವರೆಗೆ, ಆಲೂಗಡ್ಡೆ ಚಿಪ್ ಗಳಿಂದ ಕಂಪ್ಯೂಟರ್ ವರೆಗೆ ಎಲ್ಲವನ್ನೂ ಬೆರಳೆಣಿಕೆಯ ಕಾರ್ಮಿಕರು, ಮತ್ತು ಮ್ಯಾನೇಜರುಗಳಿಂದ ನಿರ್ವಹಿಸಬಹುದು. ಉತ್ಪಾದನೆಯಲ್ಲಿ ಕಾರ್ಮಿಕ ಮತ್ತು ಒಡೆಯನ ನಡುವೆ ಉಚ್ಚ ತಂತ್ರಜ್ಞಾನ ಮತ್ತು ನಿರ್ವಹಣೆಯಲ್ಲಿ ನಿಪುಣರಾದ ಇಂಜಿನೀಯರು, ಮ್ಯಾನೇಜರುಗಳ ಅಗತ್ಯವೇ ಇಲ್ಲದಾಗಿದೆ. ಹಣಕಾಸು ಮತ್ತಿತರ ಸೇವಾ ಉದ್ಯಮಗಳಲ್ಲಿ ಸಹ ಕಂಪ್ಯೂಟರೀಕರಣ ಮತ್ತು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನಗಳ ಬಳಕೆಯಿಂದ ಕೌಶಲ್ಯವಿರುವ ಸುಶಿಕ್ಷಿತ ಉದ್ಯೋಗಿಗಳು, ಇಂಜಿನೀಯರು, ಮ್ಯಾನೇಜರುಗಳ ಅಗತ್ಯ ದೊಡ್ಡ ಪ್ರಮಾಣದಲ್ಲಿ ಕಡಿತಗೊಂಡಿದೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಜನರನ್ನು ನೇರವಾಗಿ ತಲುಪಬಹುದಾದ್ದರಿಂದ, ಮುಖ್ಯಧಾರೆಯ ಮಾಧ್ಯಮಗಳ ಭಾರೀ ಅಗತ್ಯವೂ ಬಂಡವಾಳಶಾಹಿ ವರ್ಗಕ್ಕಿಲ್ಲ. ಆದ್ದರಿಂದಲೇ ಟ್ರಂಪ್, ಮೋದಿ ಗಳಂಥಹ ನಾಯಕರು ಮುಖ್ಯಧಾರೆಯ ಮಾಧ್ಯಮಗಳ ಬಗ್ಗೆ ಭಾರೀ ತಿರಸ್ಕಾರ, ನಿರ್ಲಕ್ಷ್ಯ ಬೆಳೆಸಿಕೊಂಡಿದ್ದಾರೆ. ಜನತೆಯ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳಿಂದ ಹಿಂತೆಗೆಯುತ್ತಿರುವುದರಿಂದ ಸರಕಾರದ ಕೆಲಸ-ಸೇವೆಗಳಲ್ಲೂ ಒಂದು ಕಡೆ ಕಡಿತವಾಗುತ್ತಿದೆ. ಇನ್ನೊಂದು ಕಡೆ ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕ ಸರಕಾರಿ ನೌಕರರು ಮತ್ತು ಅಧಿಕಾರಿಗಳ ಅಗತ್ಯವನ್ನು ಸಹ ಭಾರಿ ಪ್ರಮಾಣದಲ್ಲಿ ಕಡಿತ ಮಾಡಲಾಗುತ್ತಿದೆ. ಹೀಗೆ ಹಿಂದೆ ಅಗತ್ಯವಿದ್ದ ವಿವಿಧ ಸೇವೆಗಳ ಮಧ್ಯಮ ವರ್ಗದ ಅಗತ್ಯ ಬಂಡವಾಳಶಾಹಿಗೆ ಇಲ್ಲ. ಅದರ ಜತೆಗೆ ಅವರನ್ನು ಓಲೈಸಲು ಉದಾರವಾದಿ ಮೌಲ್ಯಗಳ ಮುಖವಾಡದ ಅಗತ್ಯ ಸಹ ಇಲ್ಲ.

ಪುಟ 14 ಕ್ಕೆ



ಕೃಪೆ: ಸತೀಶ್ ಆಚಾರ್ಯ

ಭಾರತದ ಸಂವಿಧಾನಿಕ ವ್ಯವಸ್ಥೆಯ ಮೇಲೆ ಬಹುವಿಧ ದಾಳಿಗಳು

–ಸಿಪಿಐ(ಎಂ) ಪೊಲಿಟ್‌ಬ್ಯುರೋ ಟೀಕೆ

ಈ ಮೋದಿ–2 ಸರಕಾರ ಭಾರತೀಯ ಗಣತಂತ್ರದ ಸಂವಿಧಾನಿಕ ವ್ಯವಸ್ಥೆಯ ಮೇಲೆ ಬಹುವಿಧ ದಾಳಿಗಳನ್ನು ನಡೆಸುತ್ತಿದೆ. ಇದರ ಪರಿಣಾಮಗಳು, ಜಮ್ಮು ಮತ್ತು ಕಾಶ್ಮೀರಕ್ಕೆ ಅದರ ರಾಜ್ಯದ ದರ್ಜೆಯನ್ನು ವಂಚಿಸಿದ ರೀತಿಯಲ್ಲಿ ಮಾತ್ರವೇ ಅಲ್ಲ, ಭಾರತದ ಸಂವಿಧಾನ ನೀಡಿರುವ ಖಾತ್ರಿಗಳ ಮೇಲೆ ಒಂದು ಗಂಭೀರ ದಾಳಿಯಾಗಿದೆ. ಈ ರಾಜ್ಯವನ್ನು ಏಕಾಂಗಿಯಾಗಿಸಿದ್ದು, ಸಂಪರ್ಕದ ಹಾದಿಗಳ ನಿಷೇಧ, ಸಾರ್ವಜನಿಕ ಸಾರಿಗೆ ಕಾರ್ಯನಿರ್ವಹಿಸದಿರುವುದು, ಅಂಗಡಿಗಳು, ಶಾಲೆಗಳು ಮುಚ್ಚಿರುವುದು, ಸಾಮಾನ್ಯ ಜೀವನವನ್ನು, ವಿಶೇಷವಾಗಿ ಕಾಶ್ಮೀರ ಕಣಿವೆಯಲ್ಲಿ, ಅಸ್ತವ್ಯಸ್ತಗೊಳಿಸಿವೆ. ಪರಿಸ್ಥಿತಿ ಸಾಮಾನ್ಯವಾಗಿದೆ ಎಂದು ಸಾರಿದ್ದರೂ, ನೆಲಮಟ್ಟದಲ್ಲಿನ ವಾಸ್ತವತೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ, ಅಂತರ್ರಾಷ್ಟ್ರೀಯ ಮಾಧ್ಯಮಗಳು ಮತ್ತು ದೇಶೀ ಮಾಧ್ಯಮಗಳ ವಿಭಾಗಗಳೂ ಈ ಬಗ್ಗೆ ವರದಿ ಮಾಡುತ್ತಿವೆ.

ಕೇಂದ್ರ ಗೃಹಮಂತ್ರಿಗಳು ನಮ್ಮ ಸಂವಿಧಾನದ ಮೂಲಭೂತ ಲಕ್ಷಣಗಳನ್ನು ಉಲ್ಲಂಘಿಸುವ ಹೇಳಿಕೆಗಳನ್ನು ನೀಡುತ್ತಲೇ ಇದ್ದಾರೆ. ಒಂದು ರಾಷ್ಟ್ರ, ಒಂದು ಭಾಷೆಯ ಮೇಲಿನ ಅವರ ಟಿಪ್ಪಣಿಗಳಿಗೆ ವ್ಯಾಪಕ ವಿರೋಧ ಸೃಷ್ಟಿಯಾಗಿರುವುದರಿಂದ, ಅವರು ಅದನ್ನು ಹಿಂತೆಗೆದುಕೊಳ್ಳಲೇ ಬೇಕಾಗಿ ಬಂದಿದೆ. ಈಗ ಅವರು ಭಾರತದಲ್ಲಿ ಬಹುಪಕ್ಷ ವ್ಯವಸ್ಥೆಯ ಅಗತ್ಯವನ್ನು ಪ್ರಶ್ನಿಸುತ್ತಿದ್ದಾರೆ. ಹೀಗೆ ಪ್ರಜಾಪ್ರಭುತ್ವ, ಜಾತ್ಯತೀತತೆ, ಒಕ್ಕೂಟ ತತ್ವ, ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ದಾಳಿಗಳು ಮುಂದುವರೆಯುತ್ತಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಮೋದಿ–2 ಸರಕಾರದ ಬಗ್ಗೆ ಕಟು ಟೀಕೆ ಮಾಡಿದೆ.

ಸಪ್ಟಂಬರ್ 18 ಮತ್ತು 19ರಂದು ಸಭೆ ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೋ ಪ್ರಸಕ್ತ ಬೆಳವಣಿಗೆಗಳನ್ನು ಚರ್ಚಿಸಿದ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿ ಈ ಟೀಕೆ ವ್ಯಕ್ತಗೊಂಡಿದೆ.

ಎನ್‌ಆರ್‌ಸಿ, ಎನ್‌ಪಿಆರ್, ಇವಿಪಿ ಮುಂತಾದ ಅನಗತ್ಯ ದುಬಾರಿ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು, ಸಬ್ಸಿಡಿ ದರಗಳಲ್ಲಿ ಆಹಾರಧಾನ್ಯ ನೀಡಿಕೆಗಳನ್ನು ಹೆಚ್ಚಿಸಬೇಕು, ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿಯಾಗಬೇಕು ಮತ್ತು ಕಾನೂನು ಉಲ್ಲಂಘಿಸುವವರಿಗೆ ರಕ್ಷಣೆ ನಿಲ್ಲಬೇಕು ಎಂದೂ ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪೊಲಿಟ್‌ಬ್ಯುರೋ ಚರ್ಚಿಸಿದ ಇತರ ವಿಷಯಗಳ ಕುರಿತಾಗಿ ಮಾಡಿರುವ ಟಿಪ್ಪಣಿಗಳನ್ನು ಈ ಮುಂದೆ ಕೊಡಲಾಗಿದೆ.

ಎನ್‌ಆರ್‌ಸಿ, ಎನ್‌ಪಿಆರ್, ಇವಿಪಿ ಮುಂತಾದ ಅನಗತ್ಯ ದುಬಾರಿ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು

ಬಿಜೆಪಿ ಆಳ್ವಿಕೆಯ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ತಂತಮ್ಮ ರಾಜ್ಯಗಳಲ್ಲೂ ರಾಷ್ಟ್ರೀಯ ಪೌರ ದಾಖಲೆ(ಎನ್.ಆರ್.ಸಿ.)ಗೆ ಆಗ್ರಹಿಸಿದ್ದಾರೆ. ಎನ್.ಆರ್.ಸಿ. ಅಸ್ಸಾಂ ಒಪ್ಪಂದದ ಭಾಗವಾಗಿತ್ತು, ಆದ್ದರಿಂದ ಅಸ್ಸಾಂ ರಾಜ್ಯಕ್ಕಷ್ಟೇ ನಿರ್ದಿಷ್ಟವಾಗಿತ್ತು. ಈ ಪ್ರಕ್ರಿಯೆಯನ್ನು ಸುಪ್ರಿಂ ಕೋರ್ಟಿನ ನಿರ್ದೇಶನದ ಅಡಿಯಲ್ಲಿ ನಡೆಸಲಾಯಿತು. ಸುಮಾರು 20 ಲಕ್ಷ ಜನಗಳನ್ನು ಅಸ್ಸಾಂನ ಎನ್.ಆರ್.ಸಿ.ಯಲ್ಲಿ ಕೈಬಿಡಲಾಗಿದೆ. ಯಾವುದೇ ನೈಜ ಭಾರತೀಯ ನಾಗರಿಕರನ್ನು ಹೊರಗಿಡಲು ಸಾಧ್ಯವಿಲ್ಲ. ಹೊರಗಿಡಲಾದ ಎಲ್ಲರ ಮನವಿಗಳನ್ನು ಪರಿಶೀಲಿಸಲೇ ಬೇಕು ಮತ್ತು ಅದರ ನ್ಯಾಯನಿರ್ಣಯವನ್ನು ಒಂದು ನ್ಯಾಯಾಂಗ ಪ್ರಾಧಿಕಾರ ಯಾವುದೇ ತಾರತಮ್ಯವಿಲ್ಲದೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಸರಕಾರ ರಾಷ್ಟ್ರೀಯ ಜನಸಂಖ್ಯಾ ದಾಖಲೆ(ಎನ್.ಪಿ.ಆರ್.)ಯ ತಯಾರಿಯನ್ನು ಪುನರುಜ್ಜೀವನಗೊಳಿಸಿದೆ. ಎಪ್ರಿಲ್ 2020ರಿಂದ ಸಪ್ಟಂಬರ್ 30, 2020ರ ವರೆಗೆ ಒಂದು ಮನೆ–ಮನೆ ಗಣನೆ ನಡೆಸಲಾಗುವುದು ಎಂದು ಒಂದು ಗಝೆಟ್ ಅಧಿಸೂಚನೆ ಪ್ರಕಟಿಸಿದೆ. ಎನ್.ಪಿ.ಆರ್.ನ್ನು 2003ರಲ್ಲಿ ವಾಜಪೇಯಿ ಸರಕಾರದ ಅವಧಿಯಲ್ಲಿ ಪೌರತ್ವ ಕಾಯ್ದೆ ಮತ್ತು ನಿಯಮಗಳನ್ನು ತಿದ್ದುಪಡಿ ಮಾಡಿ ಆರಂಭಿಸಲಾಗಿತ್ತು. ಇದು ಸರಕಾರ ಬದಲಾದ ನಂತರವೂ ಮುಂದುವರೆದಿತ್ತು. ಆದರೆ ಆಧಾರ್ ಪ್ರಶ್ನೆ ಬಂದಾಗ ಮತ್ತು ಅದರ ಜಾರಿ ಆರಂಭವಾದಾಗ, ಎನ್.ಪಿ.ಆರ್ ಅನಗತ್ಯ ಪುನರಾವರ್ತನೆ ಎಂದು ಅದನ್ನು ಕೈಬಿಡಲಾಯಿತು. ಅದಕ್ಕೆ ಈಗ ಮತ್ತೆ ಜೀವ ತುಂಬುತ್ತಿರುವುದು ವಿಚಿತ್ರವಾಗಿದೆ. ಇದನ್ನು ಈ ಎನ್.ಆರ್.ಪಿ. ಯ ಆಧಾರದಲ್ಲಿ ಒಂದು ಅಖಿಲ ಭಾರತ ಎನ್.ಆರ್.ಸಿ.ಯನ್ನು ತಯಾರಿಸಲಿಕ್ಕಾಗಿ ಮಾಡಲಾಗುತ್ತಿದೆ.

ಇದೇ ಸಮಯದಲ್ಲಿ ಚುನಾವಣಾ ಆಯೋಗವು 'ಚುನಾಯಿಸುವವರ ದೃಢೀಕರಣ ಪ್ರಕ್ರಿಯೆ'(ಇ.ವಿ.ಪಿ.) ಎಂಬುದನ್ನು ಪ್ರಕಟಿಸಿದೆ, ಮತ್ತು ಮತದಾರರು ಆನ್‌ಲೈನ್ ದಾಖಲಾತಿ ನಡೆಸಬೇಕು ಎಂದು ಹೇಳಿದೆ. ಇದು ಬಹುಪಾಲು ಗ್ರಾಮೀಣ ಮತ್ತು ಒಳನಾಡು ಪ್ರದೇಶಗಳ ಭಾಗಗಳಲ್ಲಿ ಸಾಧ್ಯವಿಲ್ಲದ ಪ್ರಕ್ರಿಯೆ ಮತ್ತು ಇದು ಮತದಾರರನ್ನು ಹೊರಗಿಡುವ ಒಂದು ಪ್ರಕ್ರಿಯೆಗೆ ದಾರಿ ಮಾಡಿಕೊಡುತ್ತದೆ. ಈಗಾಗಲೇ ಎಲ್ಲ ಮತದಾರರಿಗೂ ಇಪಿಐಸಿ ಕಾರ್ಡುಗಳನ್ನು ನೀಡಲಾಗಿದ್ದು, ಅದರೊಂದಿಗೆ ಫೋಟೋ ಇರುವ ಚುನಾವಣಾ ಪಟ್ಟಿಗಳೂ ಇವೆ. ಆದ್ದರಿಂದ ಈ ಇ.ವಿ.ಪಿ. ಕಸರತ್ತೂ ಕೂಡ ನಿರ್ದಿಷ್ಟವಾಗಿ ಗುರಿಮಾಡುವ ಉದ್ದೇಶದಿಂದಲೇ ಬರುತ್ತಿರುವಂತೆ ಕಾಣುತ್ತಿದೆ.

ಇದರೊಂದಿಗೇ, ಗೃಹಮಂತ್ರಿಗಳು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಪೌರತ್ವ ತಿದ್ದುಪಡಿ ಮಸೂದೆ (ಸಿ.ಎ.ಬಿ.)ಯನ್ನು ಪಾಸು ಮಾಡಲಾಗುವುದು ಎಂದೂ ಪ್ರಕಟಿಸಿದ್ದಾರೆ. ಈ ಮೂಲಕ ಅವರು ಎನ್.ಆರ್.ಸಿ. ಪಟ್ಟಿಯಲ್ಲಿ ಹೆಸರು ಇರದ ಮುಸ್ಲಿಮೇತರರಿಗೆ ಪೌರತ್ವವನ್ನು ಕೊಡಲಾಗುವುದು ಎಂದು ಆಶ್ವಾಸನೆ ನೀಡಿದ್ದಾರೆ, ಅತ್ತ ಮುಸ್ಲಿಮರಿಗೆ, ಅವರು ನಮ್ಮ ದೇಶದಲ್ಲಿಯೇ ಹುಟ್ಟಿರುವ ಮತ್ತು ತಲೆಮಾರುಗಳಿಂದ ವಾಸಿಸುತ್ತಿರುವ ನೈಜ ಪೌರರಾಗಿದ್ದರೂ, ಅದನ್ನು ನಿರಾಕರಿಸಲಾಗುವುದು.

ಈ ನಾಲ್ಕೂ ಪ್ರಕ್ರಿಯೆಗಳನ್ನು ಒಟ್ಟಾಗಿ ನೋಡಿದಾಗ, ಅವು ಕೆಲವು ಜನವಿಭಾಗಗಳ ಮೇಲೆ ಗುರಿಯಿಟ್ಟು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದಕ್ಕಾಗಿಯೇ ಎಂಬುದರ ಸ್ಪಷ್ಟ ಸೂಚನೆಯಾಗಿದೆ. ಧರ್ಮದ ಆಧಾರದಲ್ಲಿ ಪೌರತ್ವವನ್ನು ನೀಡುವುದು ಭಾರತೀಯ ಸಂವಿಧಾನದ ಮೂಲ ಬುನಾದಿಗಳ ಉಲ್ಲಂಘನೆಯಾಗುತ್ತದೆ. ಏಕೆಂದರೆ ನಮ್ಮ ಸಂವಿಧಾನ ಪೌರತ್ವವನ್ನು ಮಾತ್ರವಲ್ಲ, ಮೂಲಭೂತ ಹಕ್ಕುಗಳನ್ನು ಕೂಡ "ಜಾತಿ, ಪಂಥ ಅಥವ ಲಿಂಗದ ತಾರತಮ್ಯವಿಲ್ಲದೆ" ನೀಡುತ್ತದೆ.

ಇವೆಲ್ಲವೂ ಅನಗತ್ಯ ಕಸರತ್ತುಗಳು. ಏಕೆಂದರೆ ದೇಶದಲ್ಲಿ ಆಧಾರ್ ಕಾರ್ಡ್‌ಗಳನ್ನು ಸಾರ್ವತ್ರಿಕಗೊಳಿಸಲಾಗಿದೆ. ಇ.ಪಿ.ಐ.ಸಿ.ಗಳು ಮತ್ತು ಫೋಟೋಗಳು ಇರುವ ಮತದಾರ ಪಟ್ಟಿಗಳು ದೇಶದ ಎಲ್ಲ ಮತದಾರರ ಪಟ್ಟಿಯನ್ನು ಹೊಂದಿವೆ, ಇವನ್ನು ಪ್ರತಿವರ್ಷ ಪರಿಷ್ಕರಿಸಲಾಗುತ್ತಿದೆ. ಇವೆಲ್ಲವೂ ಇರುವಾಗ, ಎನ್.ಆರ್.ಸಿ.ಯನ್ನು ಅಸ್ಸಾಂನ ಆಚೆಗೂ ವಿಸ್ತರಿಸುವ, ಎನ್.ಪಿ.ಆರ್. ಗಣತಿ ನಡೆಸುವ, ಇ.ವಿ.ಪಿ.ಯಿಂದ ಚುನಾವಣಾ ಪಟ್ಟಿಗಳನ್ನು ಪುನರಾವರ್ತಿಸುವ ಮಾತುಗಳನ್ನು ಒಂದೇ ಕಾಲದಲ್ಲಿ ಆಡುತ್ತಿರುವುದು ಹಾಗೂ ಸಿ.ಎ.ಬಿ.ಯನ್ನು ಪಾಸು ಮಾಡುವ ಆಶ್ವಾಸನೆ ಇವೆಲ್ಲವೂ ಆರೆಸ್ಸೆಸ್‌ನ ಕೋಮುವಾದಿ ವೋಟ್ ಬ್ಯಾಂಕನ್ನು ಕ್ರೋಡೀಕರಿಸಲು ದೇಶದಲ್ಲಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಯತ್ನಗಳನ್ನು ಸೂಚಿಸುತ್ತವೆ.

ಆಧಾರ್, ಇ.ಪಿ.ಐ.ಸಿ. ಇತ್ಯಾದಿ ವ್ಯವಸ್ಥೆಗಳು ಈಗಾಗಲೇ ಅಸ್ತಿತ್ವದಲ್ಲಿ ಇರುವಾಗ ಈ ಸರಕಾರ ಆರಂಭಿಸಿರುವ ಈ ಹೊಸ ಪ್ರಕ್ರಿಯೆಗಳು ಸಾವಿರಾರು ಕೋಟಿ ರೂ.ಗಳನ್ನು ವ್ಯಯಿಸುವ ಅನಗತ್ಯ ಪುನರಾವರ್ತನೆ. ಆರ್ಥಿಕ ಹಿಂಜರಿತದ ಸಮಯದಲ್ಲಿ ದೇಶ ಇಂತಹ ಅನಗತ್ಯ ಪುನರಾವರ್ತನೆಗೆ ಅಗಾಧ ವೆಚ್ಚಗಳನ್ನು ಭರಿಸಲಾರದು, ಇವನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸಬ್ಸಿಡಿ ದರಗಳಲ್ಲಿ ಆಹಾರಧಾನ್ಯ ನೀಡಿಕೆಗಳನ್ನು ಹೆಚ್ಚಿಸಬೇಕು

ಸರಕಾರೀ ಗೋದಾಮುಗಳಲ್ಲಿ ಆಹಾರಧಾನ್ಯಗಳ ದಾಸ್ತಾನು, ವರದಿಗಳ ಪ್ರಕಾರ, ಆಗಸ್ಟ್ 19, 2019ರಂದು 713 ಲಕ್ಷ ಟನ್‌ಗಳಷ್ಟು ಅತ್ಯುನ್ನತ ದಾಖಲೆ ಮಟ್ಟದಲ್ಲಿ ಇದೆ. ಎಲ್ಲ ವರದಿಗಳೂ ನಿಜ ಆದಾಯಗಳು ಇಳಿದಿವೆ, ಅಪೌಷ್ಟಿಕತೆ ಹೆಚ್ಚುತ್ತಿದೆ ಎಂದು ಸೂಚಿಸುತ್ತಿವೆ, ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನ 119 ದೇಶಗಳಲ್ಲಿ 103ನೇ ಸ್ಥಾನದಲ್ಲಿದೆ. ಹಸಿವು ಒಂದು ದೊಡ್ಡ ಸಂಖ್ಯೆಯಲ್ಲಿ ಜನಗಳನ್ನು ಬಾಧಿಸುತ್ತಿದೆ ಎಂಬುದು ಸ್ಪಷ್ಟ.

ಆದ್ದರಿಂದ ಸರಕಾರ ಪ್ರತಿಕುಟುಂಬಕ್ಕೆ ಕನಿಷ್ಟ 35 ಕೆಜಿ ಆಹಾರಧಾನ್ಯಗಳನ್ನು ಸಬ್ಸಿಡಿ ದರಗಳಲ್ಲಿ ನೀಡುವುದಾಗಿ ಪ್ರಕಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿಯಾಗಬೇಕು

ಈಗ ನಡೆಯುತ್ತಿರುವ ಸುಪ್ರಿಂ ಕೋರ್ಟ್ ವಿಚಾರಣೆಗಳಲ್ಲಿ 23 ಲಕ್ಷ ಆದಿವಾಸಿ ಕುಟುಂಬಗಳ ಮೇಲೆ ಒಕ್ಕಲೆಬ್ಬಿಸುವ ಬೆದರಿಕೆಯ ಕತ್ತಿ ತೂಗುತ್ತಿದೆ. ಆದರೆ ಈ ಸರಕಾರ ನ್ಯಾಯಾಲಯಗಳಲ್ಲಿ ತಮ್ಮ ಹಕ್ಕುಗಳನ್ನು ಘೋಷಿಸಿರುವ ಈ ಆದಿವಾಸಿಗಳ ರಕ್ಷಣೆಯ ವಿಚಾರವನ್ನು ಕೈಗೆತ್ತಿಕೊಂಡಿಲ್ಲ, ಅವರ ರಕ್ಷಣೆಯ ವಾದವನ್ನು ಮುಂದಿಡಲು ಒಬ್ಬ ಹಿರಿಯ ಕಾನೂನು ಪ್ರತಿನಿಧಿಯನ್ನು ಕಳಿಸಿಲ್ಲ.

ಅರಣ್ಯ ಹಕ್ಕುಗಳ ಕಾಯ್ದೆಯನ್ನು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸದೆ ಜಾರಿಗೊಳಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಕಾನೂನು ಉಲ್ಲಂಘಿಸುವವರಿಗೆ ರಕ್ಷಣೆ ನಿಲ್ಲಬೇಕು

ಅಮಾಯಕ ಜನಗಳನ್ನು ಗುಂಪುಗಳು ಬಡಿದು ಹಾಕುವ, ಸಾಯಿಸುವ ಪ್ರಕರಣಗಳಲ್ಲಿ, ಈ ಸರಕಾರ ಮತ್ತು ಅದರ ಏಜೆನ್ಸಿಗಳು ಅಪರಾಧಿಗಳು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುವ ಸಾಧನಗಳಾಗುತ್ತಿವೆ. ಮಹಿಳೆಯರ ಮೇಲೆ ಬಲಾತ್ಕಾರವೂ ಸೇರಿದಂತೆ ಹಿಂಸಾಚಾರಗಳ ಆರೋಪಿಗಳಿಗೆ ರಕ್ಷಣೆ ನೀಡಲಾಗುತ್ತಿದೆ. ಮಹಿಳೆಯರ ಮೇಲೆ ಅತ್ಯಾಚಾರಗಳೊಂದಿಗೇ, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೂ ದಾಳಿಗಳು ಅಭೂತಪೂರ್ವ ರೀತಿಯಲ್ಲಿ ಹೆಚ್ಚುತ್ತಿವೆ. 2016ರಿಂದ ಈ ಸರಕಾರ ಮಹಿಳೆಯರ ವಿರುದ್ಧ ಅಪರಾಧಗಳ ಯಾವುದೇ ಮಾಹಿತಿಯನ್ನು ಬಿಡುಗಡೆ ಮಾಡಿಲ್ಲ. ತಪ್ಪಿತಸ್ಥರನ್ನು ಕಾನೂನಿನ ಪ್ರಕಾರ ಶಿಕ್ಷಿಸಬೇಕು, ಈ ಮೋದಿ ಸರಕಾರ ಇಂತಹ ಕ್ರಿಮಿನಲ್‌ಗಳಿಗೆ ಪೋಷಣೆ ಒದಗಿಸುವುದನ್ನು ನಿಲ್ಲಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.


ಜನಗಳ ಮೇಲೆ ಹೆಚ್ಚೆಚ್ಚು ಆರ್ಥಿಕ ಹೊರೆಗಳು

ದೇಶದಲ್ಲಿ ಅಭೂತಪೂರ್ವ ಆರ್ಥಿಕ ಮಂದಗತಿ ಆರ್ಥಿಕ ಹಿಂಜರಿತದ ಅಂಚಿಗೆ ಬರುತ್ತಿದೆ, ದೊಡ್ಡ ಪ್ರಮಾಣದಲ್ಲಿ ಉದ್ಯೋಗನಷ್ಟಗಳಾಗುತ್ತಿವೆ, ಲಕ್ಷಾಂತರ ಮಂದಿಯನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿದೆ, ಮುಂದುವರೆಯುತ್ತಿರುವ ಕೃಷಿ ಸಂಕಟ ಇವೆಲ್ಲವೂ ಜನಗಳ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೇರುತ್ತಿವೆ.

ಇವುಗಳ ವಿರುದ್ಧ ಅಖಿಲ ಭಾರತ ಪ್ರತಿಭಟನೆಗಳನ್ನು ಸಂಘಟಿಸಲು ಮತ್ತು ಪರಿಹಾರಗಳನ್ನು ಆಗ್ರಹಿಸಲು ಎಡಪಕ್ಷಗಳು ಸಪ್ಟಂಬರ್ 20ರಂದು ಒಂದು ಅಖಿಲ ಭಾರತ ಸಮಾವೇಶಕ್ಕೆ ಕರೆ ನೀಡಿವೆ. ಈ ಸಮಾವೇಶದಲ್ಲಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಲಿಬರೇಶನ್, ಆರ್‌ಎಸ್‌ಪಿ ಮತ್ತು ಎಐಎಫ್‌ಬಿ ಒಂದು ಅಖಿಲ ಭಾರತ ಜಂಟಿ ಕಾರ್ಯಕ್ರಮಕ್ಕೆ ಕರೆ ನೀಡಲಿವೆ.

ಕೊಲ್ಕತ ಪ್ಲೀನಂನ ನಿರ್ಣಯಗಳ ಜಾರಿಯ ಪರಾಮರ್ಶೆ

ಕೇಂದ್ರ ಸಮಿತಿಯ ನಿರ್ಣಯದಂತೆ, ಪೊಲಿಟ್‌ಬ್ಯುರೊ ಡಿಸೆಂಬರ್ 2015ರಲ್ಲಿ ಕೊಲ್ಕತಾದಲ್ಲಿ ನಡೆದ ಸಂಘಟನಾ ಪ್ಲೀನಂನ ನಿರ್ಣಯಗಳ ಜಾರಿಯ ಬಗ್ಗೆ ಎಲ್ಲ ರಾಜ್ಯಗಳು ಕಳಿಸಿರುವ ವರದಿಗಳ ಆಧಾರದಲ್ಲಿ ಒಂದು ವರದಿಯನ್ನು ಚರ್ಚಿಸಿತು. ಈ ಚರ್ಚೆಗಳ ಆಧಾರದಲ್ಲಿ ಪೊಲಿಟ್‌ಬ್ಯುರೊ ಒಂದು ವರದಿಯನ್ನು ತಯಾರಿಸುತ್ತದೆ. ಇದನ್ನು ಅಕ್ಟೋಬರ್ 2 ರಿಂದ 4ರ ವರೆಗೆ ನವದೆಹಲಿಯಲ್ಲಿ ನಡೆಯುವ ಪಕ್ಷದ ಕೇಂದ್ರ ಸಮಿತಿಯ ಸಭೆ ಪರಿಶೀಲಿಸಿ ಅಂಗೀಕರಿಸುತ್ತದೆ.




ವ್ಯಂಗ್ಯಚಿತ್ರ: ಪಿ.ಮಹಮ್ಮದ್



ವ್ಯಂಗ್ಯಚಿತ್ರ: ಸಂಸೀಪ್ ಅಧ್ವರ್ಯು

ಅರ್ಥವ್ಯವಸ್ಥೆಯ ಮಂದಗತಿ ಮತ್ತು ನಿವಾರಣೆಗೆ ಪರ್ಯಾಯ ಕಣ್ಣೋಟ



ನಮ್ಮ ಅರ್ಥವ್ಯವಸ್ಥೆಯ ಇಂದಿನ ನಿಧಾನ ಗತಿಯ ಬಗ್ಗೆ ಮೂರು ವಿಭಿನ್ನ ಕಣ್ಣೋಟಗಳನ್ನು ಗ್ರಹಿಸಬಹುದು. ಇದು ನವ ಉದಾರವಾದದ ದಿಕ್ಪಥದಲ್ಲೇ ಇರುವ ಪ್ರವೃತ್ತಿಯಿಂದಲ್ಲ ಎಂಬುದು ಡಾ। ಮನ್‌ಮೋಹನ್ ಸಿಂಗ್ ಅವರ ಅಭಿಪ್ರಾಯ. ಎರಡನೆಯದು, ನಿಧಾನಗತಿ ಎಂಬ ಬಿಕ್ಕಟ್ಟು ಇಲ್ಲ ಎಂಬ ಮೋದಿ ಸರಕಾರದ ಒಂದು ನಿರಾಕರಣೆ-ಯ ನಿಲುವು ಅಥವಾ ಹೆಚ್ಚೆಂದರೆ ಒಂದು ಗೊಂದಲದ ನಿಲುವು. ಈ ಎರಡು ನಿಲುವುಗಳಿಗೆ ವಿರುದ್ಧವಾಗಿರುವ ಮೂರನೆಯದು- ಬಿಕ್ಕಟು ಈಗಾಗಲೇ ನೆಲೆಸಿದೆ, ಅದರ ಬೇರುಗಳು ನೇರವಾಗಿ ನವ-ಉದಾರವಾದದ ದಿಕ್ಪಥದಲ್ಲಿ ನೆಲೆಸಿವೆ ಎನ್ನುವ ಎಡಪಂಥದ ನಿಲುವು. ಈ ಬಿಕ್ಕಟ್ಟಿನಿಂದ ಹೊರ ಬರುವುದು ಹೇಗೆ ಎಂಬುದರ ಬಗ್ಗೆ ಡಾ। ಮನ್‌ಮೋಹನ್ ಸಿಂಗ್‌ರಂತಹ ಉದಾರವಾದದ ಸಮರ್ಥಕರ ಬಳಿ ಯಾವ ಮೂರ್ತ ಸಲಹೆಗಳೂ ಇಲ್ಲ. ಅವರು ಹೇಳುವ "ಚಿಂತಕ ಜೀವಿ"ಗಳ ಬಳಿಯೂ ಇಲ್ಲ, ಏಕೆಂದರೆ ನವ ಉದಾರವಾದವು ದಾರಿ ಕಾಣದ ಪರಿಸ್ಥಿತಿಗೆ ತಲುಪಿದೆ ಎಂದರೆ ಅದರ "ಚಿಂತಕ ಜೀವಿ"ಗಳ ವಿಚಾರಗಳು ಬರಿದಾಗಿವೆ ಎಂದೇ ತಾನೇ?

ಡಾ। ಮನ್‌ಮೋಹನ್ ಸಿಂಗ್ ಮತ್ತೊಮ್ಮೆ ರಾಜಕೀಯ ರಂಗದ ಮೇಲೆ ಕಾಣಿಸಿಕೊಂಡಿದ್ದಾರೆ. ನವ ಉದಾರವಾದದ ಬಗ್ಗೆ ತಮ್ಮ ವಿಶ್ವಾಸವನ್ನು ಮತ್ತೊಮ್ಮೆ ವ್ಯಕ್ತಪಡಿಸಿದ್ದಾರೆ. ಹಾಗಾಗಿ, ಅರ್ಥವ್ಯವಸ್ಥೆಯ ಇಂದಿನ ನಿಧಾನ ಗತಿಯ ಬಗ್ಗೆ ಮೂರು ವಿಭಿನ್ನ ಕಣ್ಣೋಟಗಳನ್ನು ನಾವು ಸ್ಪಷ್ಟವಾಗಿ ಗ್ರಹಿಸಬಹುದು.

ಮೊದಲನೆಯದು, ನವ ಉದಾರವಾದವು ತಳೆಯುವ ಸಾಂಪ್ರದಾಯಿಕ ನಿಲುವನ್ನೇ ಈಗ ಡಾ। ಮನ್‌ಮೋಹನ್ ಸಿಂಗ್ ನಿರೂಪಿಸಿದ್ದಾರೆ. ಅವರ ಪ್ರಕಾರ, ಈಗ ಎದುರಾಗಿರುವ ಆರ್ಥಿಕ ಬಿಕ್ಕಟ್ಟು, 1991ರಿಂದಲೂ ದೇಶವು ಅನುಸರಿಸುತ್ತಿರುವ ನವ ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮವಾಗಿ ಉಂಟಾಗಿಲ್ಲ. ಬದಲಿಗೆ, ನೋಟುರದ್ಧತಿ ಮತ್ತು "ಆತುರವಾಗಿ ಜಾರಿಗೊಳಿದ ಜಿಎಸ್‌ಟಿ" ಇಂತಹ ಸಂಪೂರ್ಣವಾಗಿ ಹೊರಗಿನ ವಿದ್ಯಮಾನಗಳು ಈ ಬಿಕ್ಕಟ್ಟಿಗೆ ಕಾರಣವಾಗಿವೆ ಮತ್ತು ಅದರ ಹೊಣೆಗಾರಿಕೆಯನ್ನು ನೇರವಾಗಿ ಮೋದಿ ಸರ್ಕಾರವೇ ಹೊರಬೇಕು. ಇದೊಂದು "ಮಾನವ ನಿರ್ಮಿತ" ಬಿಕ್ಕಟ್ಟು. ಅಂದರೆ, ನೋಟುರದ್ಧತಿ ಮತ್ತು ಜಿಎಸ್‌ಟಿಯಂತಹ ತಿಳುವಳಿಕೆ ಇಲ್ಲದ, ವಿವೇಚನೆಗಳಿಲ್ಲದ ಹೊರಗಿನ ಆಘಾತಗಳಾಗಿ ವ್ಯವಸ್ಥೆಯ ಮೇಲೆ ಎರಗಿದ ಪರಿಣಾಮವಾಗಿ ಈ ಬಿಕ್ಕಟ್ಟು ನಿರ್ಮಾಣವಾಗಿದೆ. ನವ ಉದಾರದ ದಿಕ್ಪಥದಲ್ಲೇ ಇರುವ ಪ್ರವೃತ್ತಿಯಿಂದಲ್ಲ ಎಂಬುದು ಡಾ। ಮನ್‌ಮೋಹನ್ ಸಿಂಗ್ ಅವರ ಅಭಿಪ್ರಾಯ.

ಡಾ। ಮನ್‌ಮೋಹನ್ ಸಿಂಗ್ ಅವರ ಕಣ್ಣೋಟದ ಸಾರಾಂಶ ಏನೆಂದರೆ, ಅರ್ಥವ್ಯವಸ್ಥೆಯು ಮಂದ ಗತಿಯಿಂದ ಹೊರ ಬರಲು, ಇನ್ನು ಮುಂದೆಯೂ ಸಹ ನವ ಉದಾರವಾದಿ ದಿಕ್ಪಥದಲ್ಲಿಯೇ ಸಾಗಬೇಕು. ಆದರೆ, ಅಪ್ಪಿ ತಪ್ಪಿಯೂ ಇಂತಹ ಆಘಾತಗಳನ್ನು ವ್ಯವಸ್ಥೆಗೆ ತಗುಲಿಸುವ ಗೊಡವೆಗೆ ಹೋಗಬಾರದು ಮತ್ತು ಇಂತಹ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಆರ್ಥಿಕ ವಿಚಾರಗಳ ಬಗ್ಗೆ "ಚಿಂತಕ ಜೀವಿ"ಗಳೊಂದಿಗೆ ಸಮಾಲೋಚಿಸುವ ಅಭ್ಯಾಸ ಬೆಳಸಿಕೊಳ್ಳಬೇಕು ಎಂಬುದು.

ಡಾ। ಮನ್‌ಮೋಹನ್ ಸಿಂಗ್ ಅವರ ಈ ನಿಲುವು, ಒಟ್ಟಾರೆ ಬೇಡಿಕೆಯಲ್ಲಿ ಕೊರತೆ ಆಗಿರುವುದೇ ಈ ಬಿಕ್ಕಟ್ಟಿನ ಮೂಲ ಎಂಬ ಅಂಶವನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸುವುದೇ ಇಲ್ಲ. ಆದ್ದರಿಂದ, ನೆಲಕಚ್ಚಿರುವ ಬೇಡಿಕೆಯನ್ನು ಮೇಲೆತ್ತುವ ನಿರ್ದಿಷ್ಟ ಅಗತ್ಯ ಅವರಿಗೆ ಕಾಣುವುದಿಲ್ಲ. ಇತ್ತೀಚಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಘೋಷಿಸಿದ್ದ ಕನಿಷ್ಠ ವರಮಾನ ಯೋಜನೆಯಂತಹ ಕ್ರಮಗಳ ಮೂಲಕ ಬೇಡಿಕೆಯನ್ನು ಮೇಲೆತ್ತುವ ಯಾವ ಕ್ರಮವನ್ನೂ ಅವರು ಪ್ರಸ್ತಾಪಿಸಲಿಲ್ಲ. "ನ್ಯಾಯ್" ಎಂಬ ಹೆಸರಿನ ಆ ಯೋಜನೆಯು ಸುಮಾರು ಐದು ಕೋಟಿ ಅತಿ ಬಡ ಕುಟುಂಬಗಳಿಗೆ ತಿಂಗಳಿಗೆ 6000 ರೂಗಳನ್ನು ಅವರ ಖಾತೆಗೆ ವರ್ಗಾಯಿಸುವ ಆಶಯ ಹೊಂದಿತ್ತು. ಈ ಯೋಜನೆಗೆ ಹಣ ಹೊಂದಿಸಿಕೊಳ್ಳುವ ಬಗ್ಗೆ, ಫಲಾನುಭವಿಗಳನ್ನು ಗುರುತಿಸುವ ಬಗ್ಗೆ, ಅರ್ಹ ಫಲಾನುಭವಿಗಳ ನಡುವೆ ತಾರತಮ್ಯವಾಗದಂತೆ ನೋಡಿಕೊಳ್ಳುವ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಹಾಗಾಗಿ, ಅದೊಂದು ಆಶಯವಾಗಿತ್ತೇ ವಿನಃ ಕೃತಿಗಿಳಿಯುವ ವಾಸ್ತವಿಕ ಲೆಕ್ಕಾಚಾರಗಳು ಆ ಯೋಜನೆಯಲ್ಲಿರಲಿಲ್ಲ.

ಡಾ। ಮನ್‌ಮೋಹನ್ ಸಿಂಗ್ ಅವರಿಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಗೆ ಬದ್ಧತೆ ಇದ್ದಿದ್ದರೆ, ಸದ್ಯದಲ್ಲಿ ದೇಶವು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿಗೂ (ಇದು ಬೇಡಿಕೆಯ ಕೊರತೆಯಿಂದ ಉಂಟಾಗಿರುವ ಬಿಕ್ಕಟ್ಟು) ಮತ್ತು ಬೇಡಿಕೆಯನ್ನು ಮೇಲೆತ್ತುವ ಸಾಧ್ಯತೆಯುಳ್ಳ ಅವರದೇ ಪಕ್ಷದ ವರಮಾನ ಯೋಜನೆಯೊಂದಿಗೆ ತಳುಕು ಹಾಕುವ ಒಂದು ಪ್ರಯತ್ನವನ್ನಾದರೂ ಅವರು ಮಾಡಬಹುದಿತ್ತು. ಆದರೆ, ಅವರು ಅದನ್ನು ಮಾಡಲಿಲ್ಲ. ಈ ದೃಷ್ಟಿಯಲ್ಲಿ ನೋಡಿದರೆ, ಅವರ ವಿಶ್ಲೇಷಣೆ ಮತ್ತು ಕಣ್ಣೋಟಕ್ಕೂ ಮತ್ತು ನವ ಉದಾರವಾದದ ಸಮರ್ಥಕರ ವಿಶ್ಲೇಷಣೆ ಮತ್ತು ಕಣ್ಣೋಟಕ್ಕೂ ವ್ಯತ್ಯಾಸವೇನಿಲ್ಲ. ಆದರೆ, ಇವರ ಅಭಿಪ್ರಾಯಕ್ಕೂ ಮತ್ತು ಸ್ವತಃ ರಾಹುಲ್ ಗಾಂಧಿ ಈ ವರ್ಷದ ಮಾರ್ಚ್‌ನಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯಕ್ಕೂ ಅಂತರವಿದೆ. (ಕಾಂಗ್ರೆಸ್ ಪಕ್ಷವು 'ನ್ಯಾಯ್' ಯೋಜನೆಯನ್ನು ಘೋಷಿಸಿದ್ದ ಸಮಯದಲ್ಲಿ ಡಾ। ಮನ್‌ಮೋಹನ್ ಸಿಂಗ್ ಏನನ್ನೂ ಹೇಳಿರಲಿಲ್ಲ ಎಂಬುದು ಗಮನಾರ್ಹ. ಇದು ಕಾರ್ಯಸಾಧ್ಯ ಎಂದು ಚಿದಂಬರಂ ಹೇಳಿದ್ದರು. ನವ ಉದಾರವಾದದ ಸಮರ್ಥಕರಿಗಂತೂ ಈ ಯೋಜನೆಯ ಬಗ್ಗೆ ಸ್ವಲ್ಪವೂ ಇಷ್ಟ ಇರಲಿಲ್ಲ ಎಂದರೆ ತಪ್ಪಾಗಲಾರದು)



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಎರಡನೆಯ ಕಣ್ಣೋಟವು ಸರ್ಕಾರದ ನಿಲುವಿಗೆ ಸಂಬಂಧಿಸುತ್ತದೆ. ಸರ್ಕಾರದ ಪ್ರಕಾರ, ನವ ಉದಾರವಾದಿ ನೀತಿಗಳಾಗಲಿ ಅಥವಾ ನೋಟುರದ್ಧತಿ ಮತ್ತು ಜಿಎಸ್‌ಟಿ ಕ್ರಮಗಳಾಗಲಿ ಅರ್ಥವ್ಯವಸ್ಥೆ ಮಂದಗತಿಗಿಳಿಯಲು ಕಾರಣವೇ ಅಲ್ಲ. ಅಸಲಿಗೆ, ಮಂದ ಗತಿ ಇದೆ ಎಂಬುದನ್ನೇ ಸರ್ಕಾರ ಒಪ್ಪಿಕೊಂಡಿಲ್ಲ. ನಿಜ, ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್ ಪ್ರಸ್ತಾಪಗಳಿಂದ ಹಿಂದೆ ಸರಿದು ಬಂಡವಾಳಗಾರರಿಗೆ ಭಾರಿ ರಿಯಾಯ್ತಿ ಕೊಟ್ಟಿದ್ದಾರೆ. ರಿಸರ್ವ್ ಬ್ಯಾಂಕ್ ಬಡ್ಡಿ ದರ ಇಳಿಸಿದೆ. ಜೊತೆಗೆ, ಸರ್ಕಾರದ ಖರ್ಚಿಗೆ ತನ್ನ ಮೀಸಲು ನಿಧಿಯಿಂದ 1.76 ಲಕ್ಷ ಕೋಟಿ ರೂಗಳನ್ನು ಕೊಟ್ಟಿದೆ.ಆದರೆ, ಇಷ್ಟೆಲ್ಲಾ ಆಗಿಯೂ, ಅರ್ಥವ್ಯವಸ್ಥೆಯಲ್ಲಿ ಮಂದಗತಿ ಇದೆ ಎಂಬುದನ್ನೇ ಸರ್ಕಾರ ಒಪ್ಪಿಕೊಳ್ಳುತ್ತಿಲ್ಲ.

ಸರ್ಕಾರದ ಈ ಎಲ್ಲಾ ಕ್ರಮಗಳೂ ಅರ್ಥವ್ಯವಸ್ಥೆಯು ಕೆಳಗಿಳಿಯುತ್ತಿರುವುದನ್ನು ತಡೆಯಲಾರವು. ಬಡ್ಡಿ ದರ ಇಳಿಕೆ ಅಥವಾ ಸಾಲದ ಲಭ್ಯತೆಯನ್ನು ಇನ್ನೂ ಹೆಚ್ಚು ಸುಲಭಗೊಳಿಸುವ ಕ್ರಮಗಳು ಖಾಸಗಿ ಹೂಡಿಕೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ, ಏಕೆಂದರೆ, ಅರ್ಥವ್ಯವಸ್ಥೆಯು ಕೆಳಗಿಳಿಯುತ್ತಿರುವ ಪರಿಸ್ಥಿತಿಯಲ್ಲಿ ಖಾಸಗಿ ಹೂಡಿಕೆಯು ಬಡ್ಡಿ ದರಕ್ಕೆ ಸ್ಪಂದಿಸುವುದಿಲ್ಲ. ಬಜೆಟ್ ಅಂದಾಜಿಗೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಉಂಟಾಗುವ ಖೋತಾ ಪರಿಸ್ಥಿತಿಯನ್ನು ಸರಿಹೊಂದಿಸಿಕೊಳ್ಳಲು ರಿಸರ್ವ್ ಬ್ಯಾಂಕ್ ಕೊಟ್ಟಿರುವ 1.76 ಲಕ್ಷ ಕೋಟಿ ರೂಗಳು ಬಳಕೆಯಾಗುತ್ತವೆ. ಬಜೆಟ್ ಸ್ವಭಾವತಃ ವಿಸ್ತರಣೀಯವಲ್ಲದ ಕಾರಣದಿಂದಾಗಿ ತೆರಿಗೆ ಸಂಗ್ರಹದಲ್ಲಿ ಬೀಳುವ ಕೊರತೆಯನ್ನು ಈ ರೀತಿಯಲ್ಲಿ ಹೊಂದಿಸಿಕೊಳ್ಳಲಾಗಿದೆ. ಆದ್ದರಿಂದ, ಇಂತಹ ಕ್ರಮಗಳ ಮೂಲಕ ಬಿಕ್ಕಟ್ಟಿನಿಂದ ಹೊರ ಬರಲಾಗದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅರ್ಥವ್ಯವಸ್ಥೆಯು ಕೆಳಗಿಳಿಯುತ್ತಿರುವುದನ್ನು ಹಿಡಿದು ನಿಲ್ಲಿಸಲು ಸರ್ಕಾರವು ಯಾವ ಪ್ರಯತ್ನವನ್ನೂ ಮಾಡಿಲ್ಲ. ಅದಕ್ಕಿಂತಲೂ ಮುಖ್ಯವಾಗಿ, ಅರ್ಥವ್ಯವಸ್ಥೆಯಲ್ಲಿ ಮಂದ ಗತಿ ಇದೆ ಎಂಬುದನ್ನೇ ಸರ್ಕಾರ ಒಪ್ಪಿಕೊಂಡಿಲ್ಲ. ಆದ್ದರಿಂದ, ಎರಡನೆಯದು ಒಂದು ನಿರಾಕರಣೆಯ ನಿಲುವು ಅಥವಾ ಹೆಚ್ಚೆಂದರೆ ಒಂದು ಗೊಂದಲದ ನಿಲುವು.

ಈ ಎರಡು ನಿಲುವುಗಳಿಗೆ ವಿರುದ್ಧವಾಗಿದೆ, ಮೂರನೆಯ ನಿಲುವು. ಅದು ಎಡ ಪಂಥದ ನಿಲುವು. ಬಿಕ್ಕಟು ಈಗಾಗಲೇ ನೆಲೆಸಿದೆ ಎಂಬುದನ್ನು ಎಡ ಪಂಥವು ಮನಗಂಡಿದೆ ಮಾತ್ರವಲ್ಲ, ಬಿಕ್ಕಟ್ಟು ಎಷ್ಟು ತೀವ್ರವಾಗಿದೆ ಎಂಬುದನ್ನು ಗುರುತಿಸುತ್ತದೆ ಮಾತ್ರವಲ್ಲ, ಈ ಬಿಕ್ಕಟ್ಟಿನ ಬೇರುಗಳು ನೇರವಾಗಿ ನವ-ಉದಾರವಾದದ ದಿಕ್ಪಥದಲ್ಲಿ ನೆಲೆಸಿವೆ ಎಂಬುದನ್ನೂ ಎಡ ಪಂಥವು ಗುರುತಿಸಿದೆ. ನವ ಉದಾರವಾದದ ಆಳ್ವಿಕೆಯು ಅನಿವಾರ್ಯವಾಗಿ ರೈತ ಕೃಷಿಯನ್ನು ಹಿಂಡುತ್ತದೆ. ಈ ಹಿಂಡುವಿಕೆಯಿಂದಾಗಿ ರೈತರ ವರಮಾನ ತಗ್ಗುತ್ತದೆ ಮತ್ತು ಕೃಷಿ ಉತ್ಪಾದನೆಯೂ ಕುಗ್ಗುತ್ತದೆ. ವರಮಾನ ತಗ್ಗಿದ ಕಾರಣದಿಂದಾಗಿ ರೈತರು ಬಲವಂತವಾಗಿ ನಗರಗಳಿಗೆ ಗುಳೇ ಹೋಗುತ್ತಾರೆ, ಅಲ್ಲಿ ಇರದ ಉದ್ಯೋಗಗಳ ಅರಸಿ. ಇಂತಹ ವಲಸೆಯಿಂದಾಗಿ ನಗರಗಳಲ್ಲಿರುವ ಶ್ರಮಿಕ ಮೀಸಲು ಪಡೆಯ ಗಾತ್ರ ಉಬ್ಬುತ್ತದೆ (ಅಂದರೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತದೆ). ಮೀಸಲು ಪಡೆಯ ಗಾತ್ರ ಉಬ್ಬಿದ ಪರಿಣಾಮವಾಗಿ ಎಲ್ಲ ದುಡಿಯುವವರ ವರಮಾನ ಕುಗ್ಗುತ್ತದೆ. ವರಮಾನ ಕುಗ್ಗುತ್ತಿದ್ದರೂ ಸಹ ಅವರ ಉತ್ಪಾದಕತೆ ಹೆಚ್ಚತ್ತಾ ಹೋಗುವ ಪರಿಣಾಮವಾಗಿ, ಉತ್ಪತ್ತಿಯಲ್ಲಿ ಮಿಗುತಾಯದ ಪಾಲು(ಬಂಡವಾಳಿಗರ ಲಾಭ) ಹೆಚ್ಚುತ್ತದೆ. ಈ ಕಾರಣದಿಂದಾಗಿ ವರಮಾನ ಮತ್ತು ಸಂಪತ್ತಿನ ಅಸಮತೆಗಳು ಉಲ್ಬಣಗೊಳ್ಳುತ್ತವೆ. ವರಮಾನ ಮತ್ತು ಸಂಪತ್ತಿನ ಅಸಮಾನತೆಗಳು ಹೆಚ್ಚುತ್ತಿರುವ ಮತ್ತು ಅದೇ ಸಮಯದಲ್ಲಿ ಕೃಷಿ ಉತ್ಪಾದನೆ ಕುಗ್ಗುವ ಕಾರಣಗಳಿಂದಾಗಿ, ಎಲ್ಲ ಸರಕು ಸಾಮಗ್ರಿಗಳಿಗೂ ಮಾರುಕಟ್ಟೆಯಲ್ಲಿ ಬೇಡಿಕೆ ಸಂಕುಚಿತಗೊಳ್ಳುತ್ತದೆ. ಸದ್ಯಕ್ಕೆ ತಡೆ ಹಿಡಿದು ಮುಂದಕ್ಕೆ ಹಾಕಿದ ಬೇಡಿಕೆ ಮತ್ತು ಆಸ್ತಿ-ಬೆಲೆ ಗುಳ್ಳೆಗಳ ಮೂಲಕ

ಪುಟ 14 ಕ್ಕೆ

ಅರ್ಥವ್ಯವಸ್ಥೆ ನಿಧಾನಗತಿಯಿಂದ ಹೊರಬರಲು ನಿವಾರಣೋಪಾಯ ಸ್ಪಷ್ಟವಾಗಿಯೇ ಇದೆ- ಅದೇಂದರೆ, ಉಚಿತ ಆರೋಗ್ಯ ರಕ್ಷಣೆ, ಉಚಿತ ಶಿಕ್ಷಣ, ಉದ್ಯೋಗ ಖಾತ್ರಿ ಮತ್ತು ವೃದ್ಧಾಪ್ಯ ವೇತನಗಳ ಮೂಲಕ ದುಡಿಯುವ ಜನತೆಯ ಕೈಗೆ ಹೆಚ್ಚು ಕೊಳ್ಳುವ ಶಕ್ತಿಯನ್ನು ತುಂಬುವ ಕಾರ್ಯಕ್ರಮ. ಇದು ಕೈಗಾರಿಕಾ ವಲಯದ ಉತ್ಪಾದನಾ ಸಾಮರ್ಥ್ಯದ ಪೂರ್ಣ ಬಳಕೆಯತ್ತ ಕೊಂಡೊಯ್ಯುತ್ತದೆ. ಮತ್ತು ರೈತ ಕೃಷಿಗೆ ಬೆಂಬಲದತ್ತವೂ ಒಯ್ಯುತ್ತದೆ. ಇಂತಹ ಒಂದು ಪರ್ಯಾಯ ಅಜೆಂಡಾವನ್ನು ಕಾರ್ಯ ರೂಪಕ್ಕೆ ತರಲು ಅಗತ್ಯವಾಗುವ ಸಂಪನ್ಮೂಲಗಳನ್ನು ಹೇಗೆ ಒದಗಿಸಿಕೊಳ್ಳಬಹುದು ಎಂಬುದರ ಬಗ್ಗೆ ಈಗಾಗಲೇ ಅನೇಕ ಅಧ್ಯಯನಗಳು ನಡೆದಿವೆ.

ಸ್ವಾತಂತ್ರ್ಯಪೂರ್ವ ರೈತ ಚಳುವಳಿಗಳಿಂದ ಏನು ಕಲಿಯಬಹುದು....

ಪುಟ 16 ರಿಂದ

ಕೈಗೊಳ್ಳಲು ಪ್ರಚೋದಿಸಬಲ್ಲ ಶಕ್ತಿ ಇದರಲ್ಲಿದೆ. ಅಂತಹ ಅಧ್ಯಯನಕ್ಕೆ ಉತ್ತಮ ಮಾದರಿ ಸಹ ಆಗಬಲ್ಲುದು. ಇಲ್ಲಿ ಬರುವ ಅಪಾರ ಸಂಖ್ಯೆಯ ಆಕರ ಗ್ರಂಥಗಳು ಇಂತಹ ಅಧ್ಯಯನಗಳಲ್ಲಿ ನೇರವಾಗಿ ಸಹಾಯಕವಾಗಲೂ ಬಹುದು. ಇತಿಹಾಸ ಮತ್ತು ಸಮಾಜ ವಿಜ್ಞಾನಗಳಲ್ಲಿ ಮಾರ್ಕ್ಸ್‌ವಾದಿ ಅಧ್ಯಯನ ಮತ್ತು ವಿಶ್ಲೇಷಣೆಯ ವಿಧಾನದ ಬಗ್ಗೆ ತಿಳುವಳಿಕೆ ಮತ್ತು ಬಳಕೆ ವಿರಳವಾಗಿರುವ ಕರ್ನಾಟಕದ ಸನ್ನಿವೇಶದಲ್ಲಿ ಇದು ಅಂತಹ ವಿಧಾನದ ಒಂದು ಉತ್ತಮ ಮಾದರಿ ಸಹ. ಕರ್ನಾಟಕದ ಇತಿಹಾಸ ಮತ್ತು ಸಮಾಜ ವಿಜ್ಞಾನಗಳಲ್ಲಿ ಮಾರ್ಕ್ಸ್‌ವಾದಿ ಅಧ್ಯಯನ ಮತ್ತು ವಿಶ್ಲೇಷಣೆಯ ವಿಧಾನದ ಬಳಕೆಯನ್ನೂ ಪ್ರಚೋದಿಸಬಲ್ಲ ಶಕ್ತಿ ಇದರಲ್ಲಿದೆ.

ಕೊನೆಯದಾಗಿ, ಈ ಪುಸ್ತಕದಿಂದ ರೈತ ಸಂಘಟನೆಯ ಕಾರ್ಯಕರ್ತ/ನಾಯಕನಾಗಿ

ನನ್ನ ದೈನಂದಿನ ಚಟುವಟಿಕೆಗಳಿಗೆ ಮಾರ್ಗದರ್ಶಿಯಾಗಿ ನಾನು ಈ ಪುಸ್ತಕದ ಅಧ್ಯಯನದಿಂದ ಏನು ಕಲಿತೆ ಎಂದು ಹೇಳುವುದು ಸೂಕ್ತವಾದೀತು. ಇದು ನನ್ನ ಪ್ರಕಾರ ಎಲ್ಲಾ ರೈತ ಮತ್ತು ಇತರ ಚಳುವಳಿಗಳ ಕಾರ್ಯಕರ್ತ/ನಾಯಕರು ಸಹ ಕಲಿಬಹುದಾದದ್ದು:

- ರೈತ ಚಳುವಳಿ ವ್ಯಾಪಕ ನೆಲೆ ಹೊಂದಬೇಕಾದರೆ, ಸಮರಶೀಲವಾಗಿ ಇರಬೇಕಾದರೆ ಮತ್ತು ಗ್ರಾಮೀಣ ವರ್ಗಗಳ ಮೂಲರಚನೆಯನ್ನು ಸಮಗ್ರವಾಗಿ ಬದಲಾಯಿಸಲು ಪ್ರಯತ್ನಿಸಬೇಕಾದರೆ ಅದು ಮುಖ್ಯವಾಗಿ ಬಹುಸಂಖ್ಯಾತ ಬಡ ರೈತರು ಮತ್ತು ಕೃಷಿ ಕೂಲಿಕಾರರನ್ನು ಆಧರಿಸಿರಬೇಕು ಮತ್ತು ಅದಕ್ಕಾಗಿ ಅವರನ್ನು ಅಣಿ ನೆರೆಸಬೇಕು
- ಶ್ರೀಮಂತ ಮಧ್ಯಮ ರೈತರು ಸೇರಿದಂತೆ ಗ್ರಾಮೀಣ ಕೃಷಿ ವರ್ಗಗಳ ವ್ಯಾಪಕ ಐಕ್ಯತೆ ಸಾಧಿಸುವುದು ಯಾವಾಗಲೂ ಸಾಧ್ಯವಿಲ್ಲ. ಆದರೆ ಕೃಷಿಗೆ ಕುತ್ತು ತರುವ ಎಲ್ಲಾ ಅಥವಾ ಹೆಚ್ಚಿನ ವರ್ಗಗಳನ್ನು ಬಾಧಿಸುವ ಸಮಸ್ಯೆಗಳ ಸುತ್ತ ಇಂತಹ ವ್ಯಾಪಕ ಐಕ್ಯ ಹೋರಾಟ ಅಗತ್ಯ ಮತ್ತು ಸಾಧ್ಯ. ಇದಕ್ಕೆ ಹೆಚ್ಚಿನ ಸನ್ನಿವೇಶಗಳಲ್ಲಿ ಸಾಕಷ್ಟು ಅವಕಾಶ ಇರುತ್ತದೆ. ಉದಾಹರಣೆಗೆ ಕೃಷಿ ಬೆಳೆಗಳಿಗೆ ನ್ಯಾಯ ಬೆಲೆ, ಕೃಷಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುವುದು, ಕೃಷಿ ಲಾಗುವಾಡುಗಳ ಬೆಲೆ ಏರಿಕೆ, ಕೃಷಿಯನ್ನು ಲಾಭದಾಯಕ ಕಾಯಕವಾಗಿ ನಡೆಸಲು ಅವಕಾಶ – ಪ್ರಸ್ತುತ ಸನ್ನಿವೇಶದಲ್ಲಿ ಇಂತಹುದಕ್ಕೆ ಉದಾಹರಣೆಗಳು. ಆದರೆ ಇಂತಹ ಐಕ್ಯತೆಗಾಗಿ ಬಡ ರೈತರು ಮತ್ತು ಕೃಷಿ ಕೂಲಿಕಾರರ ವರ್ಗ ಹೋರಾಟವನ್ನು ಬಲಿ ಕೊಡಬಾರದು ಎನ್ನುವ ಎಚ್ಚರಬೇಕು.
- ಗ್ರಾಮೀಣ ವರ್ಗಗಳಲ್ಲಿ ತೀವ್ರ ಅತೃಪ್ತಿ ತರುವ ಸಾಧ್ಯತೆಗಳಿರುವ – ತೀವ್ರ ಆರ್ಥಿಕ ಸ್ಥಿತ್ಯಂತರ, ಬೆಲೆಯ ವ್ಯತ್ಯಗಳು, ಕೃಷಿಯಲ್ಲಿ ತೊಡಗಿರಲು ಸಾಧ್ಯವೇ ಇಲ್ಲ ಎನ್ನಿಸುವಂತಹ ತೀವ್ರ ದಾಳಿ – ಇತ್ಯಾದಿಗಳನ್ನು ರೈತ ಚಳುವಳಿ ಎಚ್ಚರಿಕೆಯಿಂದ ಗಮನಿಸುತ್ತಿರಬೇಕು. ಅಧ್ಯಯನ ಮಾಡುತ್ತಿರಬೇಕು. ಸತತವಾಗಿ ತಕ್ಕ ಮಧ್ಯಪ್ರವೇಶ ಮಾಡುತ್ತಿರಬೇಕು. ಇವು ರೈತಾಪಿ ವರ್ಗಗಳನ್ನು ಸಮರಶೀಲ ಹೋರಾಟಕ್ಕೆ ಇಳಿಸುವ ಎಲ್ಲಾ ಸಾಧ್ಯತೆಗಳನ್ನು ಬಳಸಬೇಕು.
- ಗ್ರಾಮೀಣ ಮತ್ತು ನಗರಗಳ ದುಡಿಯುವ ಜನರ ಐಕ್ಯತೆ ಸೌಹಾರ್ದತೆ ಸಾಧಿಸುವುದು ಸತತವಾಗಿ ಅತ್ಯಂತ ತುರ್ತಿನಲ್ಲಿ ಆಗಬೇಕಾದ್ದು
- ರೈತ ಚಳುವಳಿಯ ಸ್ವತಂತ್ರ ಧ್ಯೇಯ–ಉದ್ದೇಶಗಳ ಜತೆ ರಾಜಿ ಮಾಡಿಕೊಳ್ಳದೆ ಸಾಮ್ರಾಜ್ಯಶಾಹಿ–ವಿರೋಧಿ ಪ್ರಜಾಸತ್ತಾತ್ಮಕ ರಾಜಕೀಯ ಚಳುವಳಿಯ ಜತೆ ಬೆಸೆಯುವುದು ಅಗತ್ಯ. ಬಡ ರೈತರು ಮತ್ತು ಕೃಷಿ ಕೂಲಿಕಾರರ ಸತತ ರಾಜಕೀಯಕರಣ ಸಹ ಅಗತ್ಯ. ಗ್ರಾಮೀಣ ವರ್ಗಗಳ ಮೂಲರಚನೆಯಲ್ಲಿ

ತೀವ್ರ ಮತ್ತು ಸಮಗ್ರ ಬದಲಾವಣೆ ತರದೆ ನಿಜವಾದ ಪ್ರಜಾಸತ್ತಾತ್ಮಕ ವ್ಯವಸ್ಥೆ ಸಾಧ್ಯವಿಲ್ಲ ಎಂಬ ರಾಜಕೀಯ ಅರಿವು ಬೇಕು. ■

ಅರ್ಥವ್ಯವಸ್ಥೆಯ ಮಂದಗತಿ ಮತ್ತು ನಿವಾರಣೆಗೆ ಪರ್ಯಾಯ ಕಣ್ಣೋಟ

ಪುಟ 13 ರಿಂದ

ಗಳಿಸಿದ ಸಂಪತ್ತು ಉಂಟುಮಾಡುವ ಬೇಡಿಕೆ, ಇಂತಹ ಕೆಲವು ನಿರ್ದಿಷ್ಟ ಅಂಶಗಳಿಂದಾಗಿ ಕೆಲ ಕಾಲ ಮಾರುಕಟ್ಟೆಯ ಪರಿಸ್ಥಿತಿ ಸುಧಾರಿಸುತ್ತದೆ. ಆದರೆ, ಅಂತಿಮವಾಗಿ, ಪರಿಸ್ಥಿತಿಯು ಒಂದು ಅತಿ–ಉತ್ಪಾದನೆಯ ಬಿಕ್ಕಟ್ಟಿನ ಸ್ವರೂಪ ಪಡೆಯುತ್ತದೆ.

ಭಾರತದಲ್ಲಿ ಈಗ ನಡೆಯುತ್ತಿರುವ ವಿದ್ಯಮಾನವೂ ಸಹ ಇದೇ. ಇಂತಹ ಪ್ರವೃತ್ತಿಗಳು ಇಡೀ ವಿಶ್ವದಲ್ಲೇ ಕಾರ್ಯಪ್ರವೃತ್ತವಾಗಿವೆ. ಅತಿ–ಉತ್ಪಾದನೆಯ(over-production) ಬಿಕ್ಕಟ್ಟಿನ ಪರಿಣಾಮಗಳು ಇಡೀ ವಿಶ್ವವನ್ನೇ ವ್ಯಾಪಿಸಿವೆ. ಹಾಗಾಗಿ, ಈ ಸನ್ನಿವೇಶದಲ್ಲಿ, ರಫ್ತುಗಳನ್ನು ಹೆಚ್ಚಿಸುವ ಮೂಲಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳಿಂದ ತಪ್ಪಿಸಿಕೊಳ್ಳುವ ಭಾರತದ ಪ್ರಯತ್ನಗಳು ವ್ಯರ್ಥವಾಗುತ್ತವೆ. ಅಷ್ಟೇ ಅಲ್ಲ, ನವ ಉದಾರವಾದವು ಇಡೀ ವಿಶ್ವವನ್ನು ದಾರಿ ಕಾಣದ ಪರಿಸ್ಥಿತಿಗೆ ತಂದು ನಿಲ್ಲಿಸಿರುವ ವಿದ್ಯಮಾನವನ್ನು ನಾವೀಗ ನೋಡುತ್ತಿದ್ದೇವೆ.

ಮೋದಿ ಸರ್ಕಾರವು ಕೈಗೊಂಡ ನೋಟುರದ್ಧತಿ ಮತ್ತು ಜಿಎಸ್‌ಟಿ ಜಾರಿ ಕ್ರಮಗಳು ಬಿಕ್ಕಟ್ಟು ವಿಕೋಪಕ್ಕೆ ತಿರುಗುವಂತೆ ಮಾಡಿವೆ. ಆದರೆ, ಕೇವಲ ಈ ಕ್ರಮಗಳಷ್ಟೇ ಬಿಕ್ಕಟ್ಟಿನ ಹಿಂದಿವೆ ಎಂದು ಹೇಳುವುದು ವಾಸ್ತವಾಂಶಗಳಿಗೆ ಮುಖ ತಿರುಗಿಸಿದಂತಾಗುತ್ತದೆ. ಡಾ। ಮನ್‌ಮೋಹನ್ ಸಿಂಗ್ ಮತ್ತು ಇತರ ನವ ಉದಾರವಾದಿಗಳು, ಬೆಳವಣಿಗೆ ದರ ಕೆಳಗಿಳಿಯಲು ನೋಟುರದ್ಧತಿ ಹೇಗೆ ಕಾರಣ ಎಂಬುದನ್ನು ವಿವರಿಸುವುದಿಲ್ಲ, ಅದೂ ಸಹ ಬಲು ಹಿಂದೆಯೇ ರದ್ದಾದ ಬಹುತೇಕ ನೋಟುಗಳು ಬದಲಾವಣೆಗೊಂಡಿರುವಾಗ. ನೋಟುರದ್ಧತಿಯಿಂದಾಗಿ ಕಿರು ಉತ್ಪಾದನಾ ವಲಯುಕ್ಕೆ ತಟ್ಟಿದ ಹಾನಿ ದೀರ್ಘಕಾಲೀನವಾಗಿತ್ತು ಎಂಬುದು ನಿಜ. ಬಿಕ್ಕಟ್ಟು ಆಳವಾಗುವಲ್ಲಿ ಅದರ ಕೊಡುಗೆಯೂ ಇದೆ, ನಿಜ. ಆದರೆ, ಬಿಸ್ಕತ್‌ನಿಂದ ಹಿಡಿದು ವಾಹನಗಳವರೆಗೆ ಎಲ್ಲಾ ವಲಯಗಳಲ್ಲೂ ಇದ್ದಕ್ಕಿದ್ದಂತೆ ಬೇಡಿಕೆಯ ಗಂಭೀರ ಕೊರತೆ ಉಂಟಾಗುವ ಮಟ್ಟದಲ್ಲಿ ಅರ್ಥವ್ಯವಸ್ಥೆ ತತ್ತರಗೊಂಡು ಕೆಳಗಿಳಿಯುತ್ತಿರುವ ತೀವ್ರತೆಗೆ ನೋಟುರದ್ಧತಿ ಒಂದು ವಿವರಣೆಯಾಗಲಾರದು. ಅದೇ ರೀತಿಯಲ್ಲಿ, ಅತಿ–ಉತ್ಪಾದನೆಯ ಬಿಕ್ಕಟ್ಟು ಭಾರತಕ್ಕೆ ಮಾತ್ರ ಸೀಮಿತವಾಗದೆ ಇಡೀ ವಿಶ್ವವನ್ನೇ ವ್ಯಾಪಿಸಿದೆ ಏಕೆ ಎಂಬುದನ್ನೂ ಅವರು ವಿವರಿಸುತ್ತಿಲ್ಲ.

ಈ ಬಿಕ್ಕಟ್ಟನ್ನು ಹಿಂಬಾಲಿಸುವ ನಿವಾರಣೋಪಾಯವೂ ಸ್ಪಷ್ಟವಾಗಿಯೇ ಇರುತ್ತದೆ. ಅದೇನೆಂದರೆ, ಉಚಿತ ಆರೋಗ್ಯ ರಕ್ಷಣೆ, ಉಚಿತ ಶಿಕ್ಷಣ, ಉದ್ಯೋಗ ಖಾತ್ರಿ ಮತ್ತು ವೃದ್ಧಾಪ್ಯ ವೇತನಗಳ ಮೂಲಕ ದುಡಿಯುವ ಜನತೆಯ ಕೈಗೆ ಹೆಚ್ಚು ಕೊಳ್ಳುವ ಶಕ್ತಿಯನ್ನು ತುಂಬುವ ಕಾರ್ಯಕ್ರಮ. ಜನತೆಯ ಕೈಗೆ ಹೆಚ್ಚು ಕೊಳ್ಳುವ ಶಕ್ತಿಯನ್ನು ತುಂಬುವ ಕಾರ್ಯಕ್ರಮವು ಕೈಗಾರಿಕಾ ವಲಯದ ಉತ್ಪಾದನಾ ಸಾಮರ್ಥ್ಯದ ಪೂರ್ಣ ಬಳಕೆಯತ್ತ ಕೊಂಡೊಯ್ಯುತ್ತದೆ. ಈ ಅಂಶವು ಇನ್ನೂ ಹೆಚ್ಚಿನ ಹೂಡಿಕೆಯತ್ತ ಕೊಂಡೊಯ್ಯುತ್ತದೆ. ಹಣದುಬ್ಬರವನ್ನು ಹದ್ದುಬಸ್ತಿನಲ್ಲಿಡಲು ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಸರ್ಕಾರವು ರೈತ ಕೃಷಿಯನ್ನು ಬೆಂಬಲಿಸಬೇಕಾಗುತ್ತದೆ. ಅಂದರೆ, ಬೀಜ, ಗೊಬ್ಬರ ಮುಂತಾದ ಪರಿಕರಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಬೇಕಾಗುತ್ತದೆ, ಧಾನ್ಯಗಳಿಗೆ ಲಾಭದಾಯಕ ಬೆಲೆ ಇರುವಂತೆ ನೋಡಿಕೊಳ್ಳಬೇಕಾಗುತ್ತದೆ ಮತ್ತು ಭೂಮಿಯ ಮೂಲಕ ಬಂಡವಾಳದ ಶೇಖರಣೆ ಮತ್ತು ಭೂ ಮಾಫಿಯಾಗಳಿಗೆ ತೊಂದರೆಯಾದರೂ ಅಡ್ಡಿ ಇಲ್ಲ, ಭೂಸುಧಾರಣಾ ಕ್ರಮಗಳನ್ನು ಜಾರಿಯಾಗುವಂತೆ ನೋಡಿಕೊಳ್ಳ ಬೇಕಾಗುತ್ತದೆ. ಇಂತಹ ಒಂದು ಪರ್ಯಾಯ ಅಜೆಂಡಾವನ್ನು ಕಾರ್ಯ ರೂಪಕ್ಕೆ ತರಲು ಅಗತ್ಯವಾಗುವ ಸಂಪನ್ಮೂಲಗಳನ್ನು ಹೇಗೆ ಒದಗಿಸಿಕೊಳ್ಳಬಹುದು ಎಂಬುದರ ಬಗ್ಗೆ ಈಗಾಗಲೇ ಅನೇಕ ಅಧ್ಯಯನಗಳು ನಡೆದಿವೆ.

ಆದಾಗ್ಯೂ, ಎಲ್ಲಕ್ಕಿಂತ ಮಿಗಿಲಾಗಿ, ಎಡ ಅಜೆಂಡಾದಲ್ಲಿ, ನವ ಉದಾರ ಆಳ್ವಿಕೆಯ ಗುಣ ಲಕ್ಷಣಗಳು ಮತ್ತು ನವ ಉದಾರ ಆಳ್ವಿಕೆಯ ಹಿಂದಿರುವ ವರ್ಗ ಶಕ್ತಿಗಳ ನಡುವಿನ ಪರಸ್ಪರ ಸಂಬಂಧಗಳಿಗೆ ಸಂಬಂಧಿಸಿದಂತೆ ಒಂದು ಭಿನ್ನವಾದ ಬದಲಾವಣೆ ತರಲು ದುಡಿಯುವ ಜನತೆಯನ್ನು ಅಣಿನೆರಸುವುದು ಅಗತ್ಯವಾಗುತ್ತದೆ. ಎಡ ಅಜೆಂಡಾ ಅಂದರೆ ಅದು ಸಮಾಜವಾದಿ ಅಜೆಂಡಾವಲ್ಲ. ಈ ಅಜೆಂಡಾದಲ್ಲಿ ಬಂಡವಾಳಗಾರರ ಸಂಪತ್ತಿನ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗುತ್ತದೆ. ಈ ಕ್ರಮಕ್ಕೆ ಬದಲಾಗಿ, ಸರ್ಕಾರದ ಬೃಹತ್ ಖರ್ಚುಗಳಿಗೆ ಹಣ



ಒದಗಿಸಿಕೊಳ್ಳುವ ಸಲುವಾಗಿ, ಜನ ಸಾಮಾನ್ಯರ ಮೇಲೆ ತೆರಿಗೆ ಹಾಕಿದರೆ, ಆಗ ಒಟ್ಟಾರೆ ಬೇಡಿಕೆಯಲ್ಲಿ ನಿವ್ವಳ ವಿಸ್ತರಣೆ ಆಗುವುದೇ ಇಲ್ಲ ಮತ್ತು ಬಿಕ್ಕಟ್ಟು ನಿವಾರಣೆಯಾಗುವುದೇ ಇಲ್ಲ.

ಈ ಬಿಕ್ಕಟ್ಟಿನಿಂದ ಹೊರ ಬರುವುದು ಹೇಗೆ ಎಂಬುದರ ಬಗ್ಗೆ ಡಾ। ಮನ್‌ಮೋಹನ್ ಸಿಂಗ್‌ರಂತಹ ಉದಾರವಾದದ ಸಮರ್ಥಕರ ಬಳಿ ಯಾವ ಮೂರ್ತ ಸಲಹೆಗಳೂ ಇಲ್ಲ (ನವ ಉದಾರವಾದವನ್ನೇ ಅನುಸರಿಕೊಂಡು ಹೋಗಬೇಕು ಎಂಬುದನ್ನು ಬಿಟ್ಟರೆ). "ಚಿಂತಕ ಜೀವಿ"ಗಳೊಂದಿಗೆ ಸಮಾಲೋಚಿಸಬೇಕು ಎಂದು ಅವರು ಸರ್ಕಾರಕ್ಕೆ ಸಲಹೆ ಕೊಡುತ್ತಾರೆ. ಅಂದರೆ, ಸರ್ಕಾರಕ್ಕೆ ಸ್ವತಃ ಚಿಂತನೆ ಇಲ್ಲ ಎಂಬ ಸೂಚನೆ ಈ ಸಲಹೆಯಲ್ಲಿದೆ. ಸರ್ಕಾರಕ್ಕೆ ಸ್ವತಃ ಚಿಂತನೆ ಇಲ್ಲ ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ, ಈ ನವ ಉದಾರಿ ಶಿಬಿರದಲ್ಲಿರುವ "ಚಿಂತಕ ಜೀವಿ"ಗಳು ನಿಖರವಾಗಿ ಯಾವುದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡುತ್ತಾರೆ ಎಂಬುದರ ಬಗ್ಗೆ ಮೌನವಿದೆ. ಇದರಲ್ಲಿ ಆಶ್ಚರ್ಯವೇನಿಲ್ಲ: ನವ ಉದಾರವಾದವು ದಾರಿ ಕಾಣದ ಪರಿಸ್ಥಿತಿಗೆ ತಲುಪಿದೆ ಎಂದರೆ ಅದರ "ಚಿಂತಕ ಜೀವಿ"ಗಳ ವಿಚಾರಗಳು ಬರಿದಾಗಿವೆ ಎಂದೇ ಅರ್ಥ. ■

'ಉದಾರವಾದ' ಏಕೆ ಸಾಯುತ್ತಿದೆ?......

ಪುಟ 11 ರಿಂದ

ಆದರೆ ಭಾರೀ ಅಸಮಾನತೆ, ಅಗಾಧ ನಿರುದ್ಯೋಗ ತೀವ್ರ ಆಕ್ರೋಶ ಹಾಗೂ ಅಶಾಂತಿಯನ್ನು ಹರಡುತ್ತದೆ ಎಂದು ಬಂಡವಾಳಶಾಹಿ ವ್ಯವಸ್ಥೆಗೆ ಗೊತ್ತಿದೆ. ಆದ್ದರಿಂದ ವಲಸೆಗಾರರು ಅನ್ಯ ಜನಾಂಗ–ಧರ್ಮ–ಭಾಷಿಕರು ಮುಂತಾದ ಹುಸಿ–ವೈರಿಗಳನ್ನು ಸೃಷ್ಟಿಸಿ ಸಂಘರ್ಷಗಳನ್ನು ಹುಟ್ಟಿಸುವ ಜನರನ್ನು ಒಡೆದು ಆಳುವುದು ಹಿಂದೆಂದಿಗಿಂತಲೂ ಅದಕ್ಕೆ ಅನಿವಾರ್ಯವಾಗಿದೆ. ಆದ್ದರಿಂದ – ಸೆಕ್ಯುಲರ್ ವಾದ, ಧಾರ್ಮಿಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಲಿಂಗ–ಜನಾಂಗೀಯ ಇತ್ಯಾದಿಗಳ ಸಮಾನತೆ – ಮುಂತಾದ ಹಳೆಯ 'ಉದಾರವಾದಿ' ಮೌಲ್ಯಗಳನ್ನು ಅದು ಗಾಳಿಗೆ ತೂರಿ ಬಿಟ್ಟಿದೆ. ಪ್ರಜಾಪ್ರಭುತ್ವ, ವೈಯಕ್ತಿಕ ಸ್ವಾತಂತ್ರ್ಯ ಮತ್ತು (ನಾಗರಿಕ ಮತ್ತು ಮಾನವ) ಹಕ್ಕುಗಳ ಜಾಗದಲ್ಲಿ – ಸರ್ವಾಧಿಕಾರ, ರಾಷ್ಟ್ರದ ಭದ್ರತೆಯ ಹೆಸರಲ್ಲಿ ವೈಯಕ್ತಿಕ ಸ್ವಾತಂತ್ರ್ಯಗಳ ಮೇಲೆ ದಾಳಿ, ಎಲ್ಲರ ಮೇಲೆ ಕಣ್ಗಾವಲಿಡುವ 'ದೊಡ್ಡಣ್ಣ' ಪ್ರಭುತ್ವ, ಮಾಧ್ಯಮಗಳ ಮೇಲೆ ಪ್ರಭುತ್ವದ ನಿಯಂತ್ರಣ – ಮುಂತಾದವುಗಳು ನವ–ಉದಾರವಾದಿ ಮೌಲ್ಯಗಳಾಗಿವೆ. ಅದನ್ನು ವ್ಯಾಪಕವಾಗಿ ಹರಡಲಾಗುತ್ತಿದೆ. ಇದು ಎಲ್ಲ ಜನರ ಮೌಲ್ಯಗಳೂ ಆಗುವಂತೆ ಹೇರಲಾಗುತ್ತಿದೆ. ಹಿಂದೆನೂ ಉದಾರವಾದಿ ಮೌಲ್ಯಗಳಲ್ಲಿ ಸಹ 'ಮುಕ್ತ ಮಾರುಕಟ್ಟೆ ಆಧಾರಿತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ'ಯೇ ಪ್ರಧಾನವಾಗಿದ್ದು, ಉಳಿದ ಮೌಲ್ಯಗಳು ಅನುಕೂಲ ಶಾಸ್ತ್ರದಂತೆಯೇ ಇದ್ದವು. ಉದಾರವಾದಿ ಪಕ್ಷಗಳು, ಶಕ್ತಿಗಳು, ವ್ಯಕ್ತಿಗಳು ನವ–ಉದಾರವಾದವನ್ನು ಹೆಚ್ಚಾಗಿ ಕಣ್ಣು ಮುಚ್ಚಿ ಒಪ್ಪಿಕೊಳ್ಳುತ್ತಿವೆ. ಮುಕ್ತ ಮಾರುಕಟ್ಟೆಯ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗೆ ಬದಲಿ ಇಲ್ಲ. ಅದನ್ನು ಬದಲಾಯಿಸುವ ಅಗತ್ಯವೂ ಇಲ್ಲ, ಅದು ಸಾಧ್ಯವೂ ಅಲ್ಲ ಎಂದು ಅವು ಭಾವಿಸುವವರೆಗೆ ಉದಾರವಾದದ ಅವನತಿ ಅನಿವಾರ್ಯ ಪ್ರಕ್ರಿಯೆ. ಆದ್ದರಿಂದ ಉದಾರವಾದದ ಅವನತಿಯ ಬಗೆಗೆ ಕಣ್ಣೀರು ಹಾಕುವ ಬದಲು ಅದಕ್ಕೆ ಕಾರಣವಾದ ಬಂಡವಾಳ–ಶ್ರಮಿಕರ ನಡುವಿನ ಸಂಬಂಧಗಳಲ್ಲಿ ಬದಲಾವಣೆಗಳ ಸವಾಲಿಗೆ ಪ್ರತಿರೋಧ ಪ್ರತಿಸವಾಲು ಒಡ್ಡುವುದು ಹೇಗೆ ಎಂದು ಚಿಂತನೆ ನಡೆಸುವುದು ಮುಖ್ಯವಾಗಬೇಕಾಗಿದೆ. ■

ಸೌದಿ ತೈಲ ಸ್ಥಾವರಗಳ ಮೇಲೆ ಡ್ರೋನ್ ದಾಳಿ – ಗೆದ್ದವರು ಯಾರು ?



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಜಗತ್ತಿನ ಅತಿ ದೊಡ್ಡ ಕಚ್ಚಾ ತೈಲ ಕಂಪನಿಯಾದ ಅರಾಮ್ಕೊದ ಎರಡು ತೈಲ ಸಂಸ್ಕರಣ ಘಟಕಗಳಾದ, ಅಬ್ಕೈಕ್ ಮತ್ತು ಖುರೈಸ್ ಮೇಲೆ ಸೆ. 14 ರಂದು ಡ್ರೋನ್ ಮತ್ತು ಕ್ರೂಸ್ ಕ್ಷಿಪಣಿಗಳ ದಾಳಿ ನಡೆದಿದೆ. ಯೆಮೆನ್ ನ ಹೌತಿ ಬಂಡುಕೋರರು ಈ ದಾಳಿಯನ್ನು ನಾವೇ ನಡೆಸಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಯುಎಸ್ ನ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ, ಇದು ಇರಾನ್ ನಡೆಸಿರುವ ಕೃತ್ಯ, ಇದು ಯುದ್ದಕ್ಕೆ ಸಮನಾದ ಕೃತ್ಯ ಎಂದು ಪ್ರತಿಕ್ರಿಯಿಸಿದ್ದಾರೆ.

ಕಳೆದ ಹಲವು ವರ್ಷಗಳಿಂದ, ಸೌದಿ ಅರೇಬಿಯಾ ಮತ್ತು ಯು.ಎ.ಇ. ದೇಶಗಳು ಜಂಟಿಯಾಗಿ ಯೆಮೆನ್ ಮೇಲೆ ಯುದ್ದ ನಡೆಸುತ್ತಿವೆ. ಇದರ ಪರಿಣಾಮವೇ ಈ ದಾಳಿ ಎಂಬುದು ರಾಜಕೀಯ ವಿಶ್ಲೇಷಣೆಯಾಗಿದೆ. ಇದೀಗ ಯೆಮೆನ್ ನಲ್ಲಿ ಈ ಎರಡು ರಾಷ್ಟ್ರಗಳು ನಡೆಸುತ್ತಿರುವ ಯುದ್ದವನ್ನು ಮುಕ್ತಾಯ ಮಾಡುವತ್ತ ಗಮನ ಹರಿಸಬೇಕಾಗಿದೆ. ಇಲ್ಲದಿದ್ದರೆ, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ. ಈ ನಿಟ್ಟಿನಲ್ಲಿ ಸೌದಿ ಮತ್ತು ಯುಎಇ ದೇಶಗಳು ಇರಾನ್ ನೊಂದಿಗೆ ಮಾತುಕತೆಗೆ ತೊಡಗಿಸಿಕೊಳ್ಳುವುದು ತುಂಬಾ ನಿರ್ಣಾಯಕವಾಗಿದೆ.

ಸೆಪ್ಟೆಂಬರ್ 14, ರಂದು ಡ್ರೋನ್ ಮತ್ತು ಕ್ಷಿಪಣಿಗಳ ಬಾರಿ ದಾಳಿ ನಡೆದ ಪರಿಣಾಮವಾಗಿ ಸೋಮವಾರ ಸೆ.16 ರಂದು, ಏಷ್ಯಾದಲ್ಲಿ ಮಾರುಕಟ್ಟೆ ಪ್ರಾರಂಭ ವಾಗುತ್ತಿದಂತೆ, ತೈಲದ ಬೆಂಚ್ ಮಾರ್ಕ್, ಒಂದು ಬ್ಯಾರೆಲ್ ಗೆ ಯುಎಸ್ ಡಾಲರ್ 11.73ರಷ್ಟು ಹೆಚ್ಚಾಗಿ 71.95 ಯುಎಸ್ ಡಾಲರ್ ಆಯಿತು. ಎರಡೇ ದಿನಗಳಲ್ಲಿ 2.72 ಲಕ್ಷ ಕೋಟಿ ನಷ್ಟ ಸಂಭವಿಸಿದೆ ಎಂದು ಅಂದಾಜು ಮಾಡಲಾಗಿದೆ.

ಸೌದಿ ಅರೇಬಿಯಾದ ಮೇಲೆ ನಡೆದ ಈ ದಾಳಿ ಮೊದಲೇನಲ್ಲ. ಕಳೆದ ಒಂದೆರೆಡು ತಿಂಗಳಿನಿಂದ ಇಂತಹ ಎರಡು–ಮೂರು ದಾಳಿಗಳು ನಡೆದಿವೆ. ಇದಕ್ಕೆ ಹೊಣೆ ನಾವೆಂದು ಯೆಮೆನ್ ಬಂಡುಕೋರರು ಹೇಳಿಕೊಂಡಿದ್ದಾರೆ. ಅವರಿಗೆ ಹಿಂದಿನಿಂದ ಇರಾನ್ ಬೆಂಬಲ ಕೊಡುತ್ತಿದೆ ಎಂದು ಹೇಳಲಾಗಿದೆ. ಆದರೆ, ಸೆಪ್ಟೆಂಬರ್ 14ರ ಈ ದಾಳಿಯಿಂದ ಸೌದಿ ಅರೇಬಿಯಾ ತಲ್ಲಣಗೊಂಡಿದೆ. ಏಕೆಂದರೆ, ಅರಾಮ್ಕೊದ ಕಚ್ಚಾ ತೈಲ ಉತ್ಪದಾನಾ ಕೇಂದ್ರಗಳು ಸೌದಿ ಅರೇಬಿಯಾದ ಆರ್ಥಿಕ ಬೆನ್ನೆಲುಬು. ವಿಶ್ವದ ಅತಿ ದೊಡ್ಡ ತೈಲ ಸಂಸ್ಕರಣಾ ಘಟಕಗಳು ಪ್ರತಿ ನಿತ್ಯ ಸುಮಾರು 100 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಉತ್ಪಾದನೆ ಮಾಡುತ್ತವೆ ಎಂದು ಅಂದಾಜು ಮಾಡಲಾಗಿದೆ. ಆದರೆ, ಈ ದಾಳಿಯಿಂದ ಇದೀಗ ಅರ್ಧದಷ್ಟು ಉತ್ಪಾದನೆ ಕಡಿಮೆಯಾಗಿ, 50 ಲಕ್ಷ ಬ್ಯಾರಲ್ ಗೆ ಕುಸಿದಿದೆ. ಇದರ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ಸುಮಾರು ಶೇ.20 ರಷ್ಟು ಏರಿಕೆ ದಾಖಲಾಗಿದೆ. 1991 ರ ಕೊಲ್ಲಿ ಯುದ್ದದ ನಂತರ ಇದು ಅತಿ ದೊಡ್ಡ ಪ್ರಮಾಣದ ಏರಿಕೆಯಾಗಿದೆ ಎಂದು ಸುದ್ದಿಯಾಗಿದೆ.

ಸೌದಿಯ ಅರಾಮ್ಕೊ ಸ್ಥಾವರಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ, ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತುಂಬಾ ನಾಜೂಕಾಗಿ ಟ್ವೀಟ್ ಮಾಡಿದ್ದಾರೆ. "ಸೌದಿ ಅರೇಬಿಯಾ ತೈಲ ಸರಬರಾಜಿನ ಮೇಲೆ ದಾಳಿ ನಡೆಸಿರುವ ಅಪರಾಧಿ ಯಾರಿರಬಹುದೆಂಬುದು ನಮಗೆ ತಿಳಿದಿದೆ." ಆದರೆ, ಈ ದಾಳಿಗೆ ಕಾರಣ ಯಾರು ಎಂಬುದನ್ನು ನಿಯಮಗಳ ಅಡಿಯಲ್ಲಿ ಸೌದಿ ಅರೇಬಿಯಾವೆ ಪರಿಶೀಲನೆಗೆ ಒಳ ಪಡಿಸಬೇಕು. ಏಕೆಂದರೆ, ನಮಗೆ ಈ ಸಂಬಂಧ ಸೌದಿಯ ನೆರವಿಗೆ ಹೋಗಲು "ಲಾಕ್ ಮತ್ತು ಲೋಡ್ "ಮಾಡಲಾಗಿದೆ. ಆದಾಗ್ಯೂ, ರಿಯಾದ್ ನ ಕರೆಯನ್ನು ನಾವು, ನಮ್ಮ ನಿಯಮಗಳ ಅಡಿಯಲ್ಲಿಯೇ ಪರಿಶೀಲನೆ ಮಾಡಬೇಕಾಗಿದೆ ಎಂದು ಜಾಣತನದಿಂದ ಬಹು ಬಗೆಯ ಪ್ರೇಕ್ಷಕರಿಗೆ ಬಹು ಸಂದೇಶ ರವಾನಿಸಿದ್ದಾರೆ. ಆದರೂ ಸಹಾ, ದಾಳಿಯ ಹಿಂದಿನ ದಿನವಷ್ಟೆ, ಟ್ರಂಪ್ ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ (ಎಂ.ಬಿ.ಎಸ್) ಅವರಿಗೆ, ದೂರವಾಣಿ ಕರೆ ಮಾಡಿ, "ಭಯೋತ್ಪಾದಕ ಆಕ್ರಮಣ ಗಳನ್ನು ತಡೆಯಲು ಮತ್ತು ಅದರ ಪರಿಣಾಮ ಗಳನ್ನು ಎದುರಿಸಲು ಶಕ್ತಿಯಿದೆ" ಎಂದು ಒತ್ತಿ ಹೇಳಿದ್ದಾರೆ.

ಹಾಗೆಯೇ, ಯುಎಇ ಯ ಯುವರಾಜ ಸಹ ಪೋನ್ ಮೂಲಕ ಕರೆ ಮಾಡಿ, "ಯುವರಾಜನಿಗೆ ಈ ಭಯೋತ್ಪಾದಕ ದಾಳಿಯನ್ನು ಎದುರಿಸುವ ಸಾಮರ್ಥ್ಯವಿದೆ. ಧೈರ್ಯದಿಂದ ಆರ್ಥಿಕ ಕುಸಿತವನ್ನು ನಿಭಾಯಿಸ ಬಲ್ಲಿರಿ" ಎಂದು ಬಿನ್ ಸಲ್ಮಾನ್ ಗೆ ತಿಳಿಸಿದ್ದಾರೆ. ಸೌದಿ ಅರೇಬಿಯಾದ ಸುತ್ತಲಿನ, ಪ್ರಾದೇಶಿಕ ರಾಜ್ಯಗಳಾದ, ಈಜಿಪ್ಟ್, ಯುಎಇ, ಕುವೈತ್, ಬಹ್ರೇನ್, ಜೋರ್ಡಾನ್, ಟರ್ಕಿ ಅಥವಾ ಯಾವುದೇ ವಿದೇಶಿ ಶಕ್ತಿಗಳು, ಅರಾಮ್ಕೊದ ಸ್ಥಾವರಗಳ ಮೇಲೆ ನಡೆದ ಡ್ರೋನ್ ದಾಳಿಗೆ ಇರಾನ್ ನನ್ನು ದೂಷಿಸಿಲ್ಲ.

ವಿಶೇಷವೆಂದರೆ, ಮೊ.ಬಿನ್ ಸಲ್ಮಾನ್ ರವರು, ಈ ಮಧ್ಯೆ ರಷ್ಯಾದ ರಾಯಬಾರಿ ಸೆರ್ಗೆಯ್ ಕೊಜ್ಲೊವ್ ರವರನ್ನು ಬೇಟಿ ಮಾಡಿ ಮಾತನಾಡಿದ್ದಾರೆ. ಬೇಟಿಯ ಮಾತುಕತೆಗಳನ್ನು ಬಹಿರಂಗ ಪಡಿಸಿಲ್ಲ. ಸೌದಿಯ ಪತ್ರಿಕೆಗಳ ವರದಿಯಂತೆ, ಎರಡು ಸ್ನೇಹಪರ ದೇಶಗಳು ಪರಸ್ಪರ ಕಾಳಜಿಯಿಂದ ಹಲವಾರು ವಿಷಯಗಳನ್ನು ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ. ಸಹಜವಾಗಿ, ಹೆಚ್ಚು ತ್ತಿರುವ ಪ್ರಾದೇಶಿಕ ಉದ್ವಿಗ್ನತೆ ಕುರಿತಂತೆ, ರಷ್ಯಾದ ಆಸಕ್ತಿಯನ್ನು ಕಡೆಗಣಿಸುವಂತಿಲ್ಲ. ಏಕೆಂದರೆ, ಮಾಸ್ಕೊ ಮತ್ತು ಟೆಹರಾನ್ ನಿಕಟ ಸಂಪರ್ಕ ಹೊಂದಿವೆ. ಟರ್ಕಿಯ ಆಸ್ತಾನಾನದಲ್ಲಿ ನಡೆಯುವ ತ್ರಿಪಕ್ಷೀಯ ಶೃಂಗಸಭೆಯ ಸಂದರ್ಭದಲ್ಲಿ, ವ್ಲಾದಿಮಿರ್ ಪುಟಿನ್ ರಷ್ಯಾದ ಅಧ್ಯಕ್ಷರು, ಇರಾನ್ ಅಧ್ಯಕ್ಷ ಹಸನ್ ರೌಹಾನಿ ಯನ್ನು ಬೇಟಿಯಾಗಲಿದ್ದಾರೆ. ಪುಟಿನ್ ರವರು ಸೌದಿ ಅರೇಬಿಯಾ ದೇಶಕ್ಕೂ ಅಕ್ಟೋಬರ್ ನಲ್ಲಿ ಭೇಟಿ ನೀಡಲಿದ್ದಾರೆ.

ಸೌದಿ ಅರೇಬಿಯಾ ಅಮೆರಿಕದ ಬೆಂಬಲ ಬಯಸುತ್ತದೆ. ಆದರೆ, ಅದು ಕಾರ್ಯಸಾಧ್ಯವೇ ಎಂಬುದರ ಬಗ್ಗೆ ಅದಕ್ಕೆ ಅನುಮಾನವಿದೆ ಎನ್ನಲಾಗಿದೆ. ಏಕೆಂದರೆ, ಟ್ರಂಪ್ ಆಡಳಿತವು, ಸೆಪ್ಟೆಂಬರ್ 11, 2011 (9/11) ರ ಭಯೋತ್ಪಾದಕ ದಾಳಿಗೆ ಸಹಕರಿಸಿದ ಸೌದಿಯ ಅಧಿಕಾರಿಯ ಗುರುತನ್ನು ಬಹಿರಂಗ ಪಡಿಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ, ಕ್ಲಿಷ್ಟ ಪರಿಸ್ಥಿತಿ ಎದುರಾದಾಗ ಸೌದಿ ಅರೇಬಿಯಾದ ರಕ್ಷಣೆಗೆ ಅಮೆರಿಕವು ನಿಲ್ಲುವ ಬಗ್ಗೆ ಅಮೆರಿಕಾದ ವಿಶ್ವಾಸಾರ್ಹತೆ ಅಲುಗಾಡುತ್ತಿದೆ. ವಾಷಿಂಗ್ಟನ್ ವೃತ್ತದಲ್ಲಿ, ರಿಯಾದ್ ಪ್ರಭಾವವು ಗಮನಾರ್ಹವಾಗಿ ಕಡಿಮೆಯಾಗಿದೆ. ವಿಶೇಷವಾಗಿ ಪತ್ರಕರ್ತ ಜಮಾಲ್ ಖಶೋಗಿ ಯವರ ಹತ್ಯೆಯ ನಂತರ ವಂತು, ಯುಎಸ್ ನ ಕಾಂಗ್ರೆಸ್ ಮನಸ್ಥಿತಿ ಸೌದಿಗೆ ಅನುಕೂಲಕರವಾಗಿಲ್ಲ.

ಈ ದಾಳಿಯಲ್ಲಿ ಮತ್ತಷ್ಟು ಸೂಕ್ಷ್ಮ ಅಂಶಗಳು ಅಡಕವಾಗಿವೆ. ಅದನ್ನು ರಿಯಾದ್ ಸ್ವತಃ ನಿರ್ವಹಿಸಬೇಕು. ಈ ದಾಳಿಗೆ ಸೌದಿ ಒಳಗಿನಿಂದಲೇ ಗುಪ್ತಚರ ಸಹಕಾರ ಸಿಕ್ಕಿದೆ ಎಂದು ಹೌತಿಗಳು ಹೇಳಿಕೊಂಡಿರುವುದು ಸೌದಿಗೆ ತಲೆನೋವು ತಂದಿದೆ. ಏಕೆಂದರೆ, ಸೌದಿ ಅರೇಬಿಯಾದ ಪೂರ್ವ ಪ್ರಾಂತ್ಯದೊಳಗೆ ಹೌತಿಗಳಿಗೆ ಸಂಪರ್ಕಗಳಿವೆ. ಅಲ್ಲಿನ ಶಿಯಾ ಬಹುಸಂಖ್ಯಾತರು ಸಬಲೀಕರಣ ಮತ್ತು ಸ್ವಾಯತ್ತತೆಗಾಗಿ ಅಂದೋಲನ ನಡೆಸುತ್ತಿದ್ದಾರೆ. ಇದು ಸೌದಿ ರಾಜ ಮನೆತನಕ್ಕೆ ಹಾಗೂ ದೇಶದ ಆಂತರಿಕ ಭದ್ರತೆಗೆ ಸಂಬಂದಿಸಿದ ವಿಚಾರವಾಗಿದೆ ಕೂಡ. ಸೆ.14ರ ಡ್ರೋನ್ ದಾಳಿಯು ಸೌದಿ ರಕ್ಷಣಾ ಕಾರ್ಯದ ದೌರ್ಬಲ್ಯಗಳನ್ನು ಎತ್ತಿ ತೋರಿಸಿದೆ.

ಇತ್ತೀಚಿನ ವಾರಗಳಲ್ಲಿ ಸೌದಿ ಅರೇಬಿಯಾ ಮತ್ತು ಯುಎಇ ಎರಡೂ ಇರಾನ್ ಬಗ್ಗೆ ಉದ್ವಿಗ್ನತೆ ಯನ್ನು ತಗ್ಗಿಸುವ ಉದ್ದೇಶಗಳನ್ನು ಹೊಂದಿವೆ. ಯುಎಇ ಮತ್ತು ಜಿಸಿಸಿ ಯ ರಾಜ್ಯಗಳು ಹೆಚ್ಚಿನ ಉಲ್ಬಣಕ್ಕೆ ಹಿಂಜರಿತಗೊಂಡಿವೆ. ಮತ್ತೊಂದು ತೊಡಕೆಂದರೆ, ಸೌದಿಗಳು ಮತ್ತು ಯುಎಇ ಗಳ ನಡುವೆ ಯೆಮೆನ್ ಮೇಲಿನ ಯುದ್ದದ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹೆಚ್ಚಾಗ ತೊಡಗಿವೆ.

ಈ ದಾಳಿಯ ಪ್ರಭಾವ ಅರಾಮ್ಕೊದ ಐಪಿಓ ತೀವ್ರವಾಗಿ ಸ್ಥಗಿತಗೊಂಡಿದೆ. ಕಚ್ಚಾ ತೈಲ ಭಾನುವಾರ ರಾತ್ರಿ ಶೇ.20 ರಷ್ಟು ಹೆಚ್ಚಾಗಿದೆ. ಇನ್ನೂ ಒಂದು ತಿಂಗಳು ಪರಿಸ್ಥಿತಿ ಹೀಗೆ ಮುಂದುವರಿದರೆ, ಒಂದು ಬ್ಯಾರೆಲ್ ನ ಬೆಲೆ 80 ಡಾಲರ್ ತಲುಪಲಿದೆ. ಇದರ ಪರಿಣಾಮವಾಗಿ ಭಾರತವನ್ನು ಒಳಗೊಂಡಂತೆ ಜಗತ್ತಿನ ಇತರೆ ರಾಷ್ಟ್ರಗಳು ಆತಂಕ ಹೊಂದಿವೆ. ಒಟ್ಟಾರೆಯಾಗಿ, ಯುಎಸ್ ಇರಾನ್ ಮೇಲೆ ಯುದ್ದ ಸಾರಿದರೆ, ಪೂರ್ಣ ಪ್ರಮಾಣದ ಸಮರಕ್ಕೆ ಇರಾನ್ ತಯಾರಿದೆ ಎಂಬ ಎಚ್ಚರಿಕೆಯನ್ನು ಅದರ, ವಿದೇಶಾಂಗ ಮಂತ್ರಿ ಮುಹಮ್ಮದ್ ಜಾವೆದ್ ಝರಿಫ್ ಪ್ರತ್ಯೇಕ ಹೇಳಿಕೆಯಲ್ಲಿ ನೀಡಿದ್ದಾರೆ.

ಇರಾನ್ ಡ್ರೋನ್ ಅಥವಾ ಕ್ಷಿಪಣಿ ದಾಳಿ ನಡೆಸಿದೆಂಬುದಕ್ಕೆ ಯಾವುದೇ ಪುರಾವೆ ಇಲ್ಲ. ಹೆಚ್ಚೆಂದರೆ ಹೌತಿ ಬಂಡುಕೋರರಿಗೆ ಡ್ರೋನ್ ತಂತ್ರಜ್ಞಾನ ಪೂರೈಸಿದೆ ಎಂದು ಅವರು ಸಾಧಿಸಬಹುದು. ಹಾಗಿದ್ದರೆ ಅಮೆರಿಕ ಮತ್ತು ಯುರೋಪಿನ ತಂತ್ರಜ್ಞಾನ ಮಾತ್ರವಲ್ಲ, ಅದರ ಶಸ್ತ್ರಾಸ್ತ್ರಗಳನ್ನು ಬಳಸಿಯೇ ಸೌದಿ ಯೆಮೆನ್ ನಲ್ಲಿ ಮಾನವ ಹಕ್ಕುಗಳ ದಮನ ಮಾಡುತ್ತಿದೆ. ಇದರ ಜವಾಬ್ದಾರಿಯನ್ನು ಅವರು ವಹಿಸುತ್ತಾರಾ ಎಂಬ ಪ್ರಶ್ನೆ ಎದ್ದಿದೆ. ಆದರೂ ಇರಾನ್ ಮೇಲೆ ಇನ್ನಷ್ಟು ದಿಗ್ಬಂಧನ ಹೊರಿಸುವ, ದಾಳಿ ಮಾಡುವ ಬೆದರಿಕೆಗಳನ್ನು ಹಾಕಲಾಗಿದೆ. ಡ್ರೋನ್ ತಂತ್ರಜ್ಞಾನ ಹಲವು ಪ್ರದೇಶಗಳಲ್ಲಿ ದೊಡ್ಡ ಮಿಲಿಟರಿ ದೇಶ ಮತ್ತು ಬಂಡುಕೋರರ ನಡುವಿನ ವ್ಯೂಹಾತ್ಮಕ ಸಮತೋಲನವನ್ನು ಏರುಪೇರು ಮಾಡಿದೆ. ಡ್ರೋನ್ ತಂತ್ರಜ್ಞಾನ ಸುಲಭವಾಗಿ ಬಂಡುಕೋರ ಗುಂಪುಗಳಿಗೆ ಲಭ್ಯವಿದ್ದು ಅದನ್ನು ಸಮರ್ಥವಾಗಿ ಬಳಸಿದರೆ ದೊಡ್ಡ ಮಿಲಿಟರಿ ಶಕ್ತಿಗಳ ಮೇಲೆ ತೀವ್ರ ಹಾನಿಯುಂಟು ಮಾಡಬಹುದು. ಅದನ್ನೇ ಹೌತಿ ಬಂಡುಕೋರರು ಮಾಡಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳಿಂದ ಸೌದಿ ಅರೇಬಿಯಾ ಮೊಟ್ಟ ಮೊದಲ ಬಾರಿಗೆ ತುಂಬಾ ಗಾಬರಿಯಾದಂತಿದೆ. ಈ ದಾಳಿಗಳಿಂದ ಯೆಮೆನ್ ಹೌತಿ ಬಂಡುಕೋರರು ಬಲಗೊಂಡಿದ್ದಾರೆ. ಇವರಿಂದ ಮತ್ತಷ್ಟು ದಾಳಿಗಳು ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹೀಗಾಗಿ, ಯೆಮೆನ್ ಮೇಲಿನ ಯುದ್ದ ನಿಲ್ಲಬಹುದು. ಯೆಮೆನ್ ನಲ್ಲಿ ಶಾಂತಿ ಮರುಕಳಿಸಬಹುದು ಎನ್ನಲಾಗಿದೆ. ಆದರೆ ಅಮೆರಿಕ ಮತ್ತು ಸೌದಿ ತಾಳ್ಮೆಗೆಟ್ಟು ಇರಾನನ್ನು ಕೆಣಕಿದರೆ ಕೊಲ್ಲಿ ಪ್ರದೇಶ ಮತ್ತೆ ಯುದ್ಧಕ್ಕೆ ಗುರಿಯಾಗಬಹುದು. ಆದರೆ ಈ ಪ್ರದೇಶದ ದೇಶಗಳು ಯುದ್ಧವನ್ನು ಬೆಂಭಲಿಸುವಂತೆ ಕಾಣುತ್ತಿಲ್ಲ. ■



JANASHAKTHI KANNADA VARA PATRIKE September 23-29, 2019 Price: Rs. 10/- Date of Publication: 20 September 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಪ್ರಮುಖ ಸ್ವಾತಂತ್ರ್ಯ ಪೂರ್ವ ರೈತ ಚಳುವಳಿಗಳ ವಿಶ್ಲೇಷಣೆಗಳನ್ನು ಒಳಗೊಂಡ ಪ್ರೊ. ಧನಗೆರೆ ಅವರ 'ಭಾರತದ ರೈತ ಚಳುವಳಿಗಳು 1920-1950' ಎಂಬ ಕ್ಲಾಸಿಕ್ ಕೃತಿಯ ಕನ್ನಡ ಆವೃತ್ತಿಯನ್ನು ಕ್ರಿಯಾ 2012ರಲ್ಲಿ ಪ್ರಕಟಿಸಿತ್ತು. ಈ ಪುಸ್ತಕದ ಮುನ್ನುಡಿಯಿಂದ ಆಯ್ದ ಭಾಗಗಳು ಪುಸ್ತಕದ ಸಮಗ್ರ ಪರಿಚಯವನ್ನು ಮಾಡುತ್ತದೆ.

ಪುಸ್ತಕ ಪರಿಚಯ

ಸ್ವಾತಂತ್ರ್ಯಪೂರ್ವ ರೈತ ಚಳುವಳಿಗಳಿಂದ ಏನು ಕಲಿಯಬಹುದು?


('ಭಾರತದ ರೈತ ಚಳುವಳಿಗಳು 1920-1950' ಮುನ್ನುಡಿಯ ಆಯ್ದ ಭಾಗಗಳು)

'ಭಾರತದ ರೈತ ಚಳುವಳಿಗಳು 1920-1950' ಕೃತಿಯಲ್ಲಿ ಒಂಬತ್ತು ಅಧ್ಯಾಯಗಳಿವೆ. ಮೊದಲ ಅಧ್ಯಾಯ ಒಟ್ಟು ಅಧ್ಯಯನದ ಚೌಕಟ್ಟನ್ನು ವಿವರಿಸುತ್ತದೆ. ಅಧ್ಯಯನಕ್ಕೆ ಅಗತ್ಯ ಹಿನ್ನೆಲೆ ಕೊಡಲು ಎರಡನೇ ಅಧ್ಯಾಯ 1920ಕ್ಕೂ ಹಿಂದಿನ ಕೃಷಿ ಸಂರಚನೆ, ರೈತಾಪಿ ಅತೃಪ್ತಿಗೆ ಕಾರಣಗಳು ಮತ್ತು ರೈತ ದಂಗೆಗಳ ಸ್ಥೂಲ ಚಿತ್ರಣ ಕೊಡಲಾಗಿದೆ.

1920ಕ್ಕೂ ಹಿಂದಿನ ಅವಧಿ ಅಂದರೆ ಇಲ್ಲಿ ಮೊಗಲ್ ಕಾಲ, ಬ್ರಿಟಿಷ್ ವಸಾಹತೀಕರಣ ಮತ್ತು ರಾಷ್ಟ್ರೀಯ ಚಳುವಳಿ ಬೆಳೆದ ಅವಧಿ. ಮುಂದಿನ ಐದು ಅಧ್ಯಾಯಗಳಲ್ಲಿ 1920-1950 ಅವಧಿಯ ಪ್ರಮುಖ ಐದು ರೈತ ದಂಗೆಗಳ ವಿಶ್ಲೇಷಣೆಗೆ ಮೀಸಲಾಗಿದೆ. ಕೇರಳದ ಮಲಬಾರಿನ ಮೋಪ್ಲಾ ದಂಗೆ, ಗುಜರಾತಿನ ಬಾರ್ಡೋಲಿ ಸತ್ಯಾಗ್ರಹ, ಉತ್ತರ ಪ್ರದೇಶದ ಅವಧ ಪ್ರಾಂತ್ಯದ ರೈತ ಚಳುವಳಿಗಳು, ಬಂಗಾಳದ ತೆಭಾಗ ಮತ್ತು ತೆಲಂಗಾಣ ರೈತರ ಸಶಸ್ತ್ರ ಹೋರಾಟ – ಪ್ರೊ. ಧನಗೆರೆ ಆರಿಸಿಕೊಂಡ ಈ ಅವಧಿಯ ಪ್ರಮುಖ ರೈತ ಚಳುವಳಿಗಳು. ಇವುಗಳ ನಡುವೆ 1927-1945 ಅವಧಿಯಲ್ಲಿ ರೈತ ಚಳುವಳಿ ಮತ್ತು ಸಂಘಟನೆಗಳಲ್ಲಿ ಎಡಪಂಥೀಯರ ಪಾತ್ರದ ಬಗೆಗೂ ಪಕ್ಷಿನೋಟ ಬೀರುವ ಒಂದು ಅಧ್ಯಾಯ ಇದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಚೌಕಟ್ಟಿನಲ್ಲಿ ಹಾಕಿಕೊಂಡ ಪ್ರಶ್ನೆಗಳ ಹಿನ್ನೆಲೆಯಲ್ಲಿ ಈ ಐದೂ ರೈತ ಚಳುವಳಿಗಳ ವಿಶ್ಲೇಷಣೆಗಳಿಂದ ಹೊರಡುವ ಒಟ್ಟು ಮಹತ್ವದ ತೀರ್ಮಾನಗಳನ್ನು ಕೊನೆಯ ಅಧ್ಯಾಯದಲ್ಲಿ ಕೊಟ್ಟಿದ್ದಾರೆ. ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ಹಾಗೂ ರಾಜಕೀಯ ಶಾಸ್ತ್ರಜ್ಞರಾಗಿರುವ ಡಾ.ವಿಜೂ ಕೃಷ್ಣನ್ ಸ್ವಾತಂತ್ರ್ಯ ನಂತರದ ರೈತ ಚಳುವಳಿಗಳು ಮತ್ತು ಅವುಗಳ ಅಧ್ಯಯನಗಳ ನೆಲೆಯಿಂದ ಪ್ರೊ. ಧನಗೆರೆ ಅವರ ಈ ಕೃತಿ ಬಗ್ಗೆ ಮಾಡಿರುವ ವಿಮರ್ಶೆ ಈ ಪುಸ್ತಕದ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದೆ.

ಇಲ್ಲಿ ಆರಿಸಿರುವ ಐದು ರೈತ ಚಳುವಳಿಗಳು ವಿವಿಧ ಪ್ರದೇಶಗಳಲ್ಲಿ ಹೊಮ್ಮಿದ ಪ್ರಮುಖ ರೈತ ಚಳುವಳಿಗಳು ಎನ್ನುವ ಕಾರಣಕ್ಕೆ ಮಾತ್ರ ಆಯ್ಕೆ ಆದವುಗಳಲ್ಲ. ಭೂಮಿಯ ಒಡೆತನ, ಗ್ರಾಮೀಣ ಕೃಷಿರಂಗದಲ್ಲಿ ವರ್ಗಗಳ ರಚನೆ, ವಿವಿಧ ವರ್ಗಗಳ ಪಾತ್ರ, ಚಾರಿತ್ರಿಕ ಹಿನ್ನೆಲೆ, ರೈತರನ್ನು ಅಣಿ ನೆರೆಸುವ ವ್ಯೂಹ ಮತ್ತು ತಂತ್ರಗಳು, ಚಳುವಳಿಗೆ ತಕ್ಷಣದ ಕಾರಣವಾದ ಸಮಸ್ಯೆ, ಅದಕ್ಕೆ ಕಂಡುಕೊಂಡ ಪರಿಹಾರ, ಅಖಿಲ ಭಾರತ ಮಟ್ಟದಲ್ಲಿ ಚಳುವಳಿಯ ಒಟ್ಟು ಪರಿಣಾಮಗಳು – ಇವೆಲ್ಲದರಲ್ಲಿ ಇವು ವೈವಿಧ್ಯಮಯವಾಗಿರುವುದು ಮಾತ್ರವಲ್ಲ ಹಲವು ಚಳುವಳಿಗಳಿಗೆ ಪ್ರಾತಿನಿಧಿಕವೂ ಆಗಿದೆ. ಇವು ಕ್ರಾಂತಿಕಾರಿ ಹೋರಾಟ ಅಥವಾ ಅದಕ್ಕೆ ಹತ್ತಿರ ಬಂದ ಭಾರತದ ರೈತ ಚಳುವಳಿಗಳೂ ಹೌದು.

ಮೊದಲನೆಯ ಅಧ್ಯಾಯವಾದ 'ಅಧ್ಯಯನದ ಚೌಕಟ್ಟಿ'ನಲ್ಲಿ ಈ ಅಧ್ಯಯನ ಮಾರ್ಕ್ಸ್‌ವಾದಿ ದೃಷ್ಟಿಕೋಣದಿಂದ ಮಾಡಿರುವುದಾಗಿ ಹೇಳಿದೆ. ಆದ್ದರಿಂದ ಸಮಾಜದಲ್ಲಿ ಮತ್ತು ಸಮಾಜ ಬದಲಾವಣೆಯ ಕ್ರಾಂತಿಕಾರಿ ಹೋರಾಟದಲ್ಲಿ ರೈತರ ಮತ್ತು ರೈತಚಳುವಳಿಗಳ ಪಾತ್ರದ ಬಗ್ಗೆ ಮಾರ್ಕ್ಸ್‌ವಾದಿ ವಿಶ್ಲೇಷಣೆಯ ಒಂದು ಪಕ್ಷಿನೋಟವನ್ನು ಕೊಡಲಾಗಿದೆ. ಈ ಬಗ್ಗೆ ಮಾರ್ಕ್ಸ್‌ವಾದಿ ವಿಶ್ಲೇಷಣೆಯ ವಿಕಾಸದ ಭಾಗವಾಗಿ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಮಾವೋರ ವಿಶ್ಲೇಷಣೆಗಳನ್ನು ನಿರೂಪಿಸಲಾಗಿದೆ. ಇವರಲ್ಲದೆ ರೈತರ ಮತ್ತು ರೈತ ಚಳುವಳಿಗಳ ಸಾಮಾಜಿಕ ಅಧ್ಯಯನಗಳನ್ನು ಮಾಡಿದ ಪ್ರಮುಖ ಸಮಾಜವಿಜ್ಞಾನಿ ಸಂಶೋಧಕರಾದ ಮೂರ್, ಶಾನಿನ್, ಅಲವಿ, ಎರಿಕ್ ವೊಲ್ಫ್, ಥೋರ್ನರ್



ಅವರ ವಿಶ್ಲೇಷಣೆಗಳ ಈ ಅಧ್ಯಯನಕ್ಕೆ ಪ್ರಸ್ತುತವಾದ ಅಂಶಗಳ ಸ್ಥೂಲ ಪರಿಚಯವನ್ನೂಕೊಡಲಾಗಿದೆ. ಪ್ರಮುಖವಾಗಿ ಥೋರ್ನರ್ ಅವರು ರಚಿಸಿರುವ ಭಾರತದ ಕೃಷಿ ವರ್ಗ ವಿಭಜನೆಯ ಮಾದರಿಯನ್ನು ವಿವರಿಸಲಾಗಿದೆ. ಈ ಅಧ್ಯಯನ ಕೆಳಗಿನ ಮೂರು ಪ್ರಶ್ನೆಗಳನ್ನು ಕೇಳಿಕೊಂಡು ಅದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತದೆ:

1. ಕ್ರಾಂತಿಕಾರಿ ಅಥವಾ ಅದಕ್ಕೆ ಸಮೀಪವೆಂದು ಗುರುತಿಸಲ್ಪಡುವ ಚಳುವಳಿಗಳಲ್ಲಿ ವಿವಿಧ ರೈತ ವರ್ಗಗಳು ಯಾವ ಪಾತ್ರ ವಹಿಸಬಹುದು?
2. ರೈತ ದಂಗೆಗೆ ಅಥವಾ ಚಳುವಳಿಗಳಿಗೆ ನೆರವಾಗುವ ಸಮಾಜ ರಚನೆಗಳು ಮತ್ತು ಚಾರಿತ್ರಿಕ ಸನ್ನಿವೇಶಗಳು ಯಾವುವು ?
3. ಒಂದು ನಿರ್ದಿಷ್ಟ ಕಾಲ ಮತ್ತು ಸ್ಥಳದ ಶಾಂತಿಯುತ ಹಾಗೂ ಸಾಂವಿಧಾನಿಕ ಚಳುವಳಿಗೆ ಕಾರಣವಾಗುವ ರೈತರ ಅಣಿ ನೆರೆಸುವಿಕೆಯೇ, ಇನ್ನೊಂದು ಸ್ಥಳ ಮತ್ತು ಕಾಲದಲ್ಲಿ ಯಾಕೆ ಸ್ಥಾಪಿತ ಅಧಿಕಾರಕ್ಕೆ ವಿರುದ್ಧವಾಗಿ ಬಹಿರಂಗವಾಗಿದಂಗೆಯೇಳುವ ಪ್ರತಿಭಟಿಸುವ ರೂಪವನ್ನು ಪಡೆಯುತ್ತದೆ?

ಇವಲ್ಲದೆ ಆಗ ಅಕಾಡೆಮಿಕ್ ವಲಯಗಳಲ್ಲಿ ಬಹಳ ಚಾಲ್ತಿಯಲ್ಲಿದ್ದ 'ಮಧ್ಯಮ ರೈತರ ವರ್ಗ ರೈತ ಚಳುವಳಿಗಳಿಗೆ ನಾಯಕತ್ವ ಕೊಡುವ ವರ್ಗ' ಎಂಬ ಪ್ರಮೇಯದ ಸಿಂಧುತ್ವವನ್ನೂ ಈ ಐದು ರೈತ ಚಳುವಳಿಗಳ ಹಿನ್ನೆಲೆಯಲ್ಲಿ ಪರಿಶೀಲಿಸುವುದೂ ಅಧ್ಯಯನದ ಉದ್ದೇಶಗಳಲ್ಲೊಂದು ಹೇಳಲಾಗಿದೆ.

. . . . .

ಮೇಲೆ ಹೇಳಲಾದ ಐದು ಚಳುವಳಿಗಳಿಗೆ ಮೀಸಲಾದ ಅಧ್ಯಾಯಗಳಲ್ಲಿ ಆಯಾ ಚಳುವಳಿಯ ಸ್ಥೂಲ ಘಟನಾವಳಿಗಳ ನಿರೂಪಣೆ ಇದೆ. ಇದಲ್ಲದೆ ಚಳುವಳಿಯ ಸಾಮಾಜಿಕ–ಆರ್ಥಿಕ ಮತ್ತು ಚಾರಿತ್ರಿಕ ಹಿನ್ನೆಲೆ, ಈ ಚಳುವಳಿಗಳ ಪರಿಚಯ ಇಲ್ಲದ ಓದುಗರಿಗೂ ವಿಶ್ಲೇಷಣೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಚಳುವಳಿಯ ನಿರೂಪಣೆಯಲ್ಲಿ ಬರುವ ಸ್ಥಳಗಳನ್ನು ತೋರಿಸುವ ನಕ್ಷೆಗಳನ್ನು ಸೇರಿಸಿರುವುದು ಸಹ ಸಹಾಯಕಾರಿಯಾಗಿದೆ. ಪ್ರತಿಯೊಂದು ಚಳುವಳಿಯ ವಿಶಿಷ್ಟ ಅಂಶಗಳನ್ನು ಹೇಳುವುದಲ್ಲದೆ, ಈ ಮುಂದಿನ ಐದು ಅಂಶಗಳ – ಪರಂಪರಾನುಗತವಾದ ಸಾಮಾಜಿಕ ರಚನೆ ಮತ್ತೂ

ಭೂಮಿಯ ಮೇಲೆ ಹತೋಟಿಗಳ ಸಂಬಂಧ, ಕೃಷಿ ವಾಣಿಜ್ಯೀಕರಣದ ಮಟ್ಟ, ವರ್ಗೇತರ ಸಾಮಾಜಿಕ ಬಂಧಗಳು, ಸೈದ್ಧಾಂತಿಕ ದೃಷ್ಟಿಕೋಣದ ಪಾತ್ರ, ಮತ್ತು ರೈತ ಚಳುವಳಿಗಳ ಸಂಘಟನೆ ಹಾಗೂ ನಾಯಕತ್ವದ ಲಕ್ಷಣಗಳು – ವಿಶ್ಲೇಷಣೆ ಮಾಡಲಾಗಿದೆ. ಆ ಮೂಲಕ ಮೇಲೆ ಹೇಳಿದ ಎರಡನೇ ಮತ್ತು ಮೂರನೇ ಪ್ರಶ್ನೆಗೆ ನಿರ್ದಿಷ್ಟ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಅಧ್ಯಯನ ವಿಪುಲವಾದ ದೇಶೀಯ ವಿದೇಶೀಯ ಆಕರಗಳಲ್ಲದೆ ಭಾರತೀಯ ಭಾಷೆಗಳಲ್ಲಿ ಇರುವ ಮೂಲ ಆಕರಗಳನ್ನು ಆಧರಿಸಿ ಇರುವುದೂ ಒಂದು ವಿಶೇಷ.

ಈ ಪುಸ್ತಕದ ಮಹತ್ವದ ಭಾಗ ಕೊನೆಯ ಅಧ್ಯಾಯ. ಈ ಪುಸ್ತಕದಲ್ಲಿ ಮಾಡಲಾದ ಪ್ರಮುಖ ರೈತ ದಂಗೆಗಳ ವಿವರವಾದ ವಿಶ್ಲೇಷಣೆಯ ಆಧಾರದ ಮೇಲೆ, ಮೊದಲ ಅಧ್ಯಾಯದಲ್ಲಿ ಹಾಕಿಕೊಳ್ಳಲಾದ ಪ್ರಶ್ನೆಗಳಿಗೆ ನಿರ್ದಿಷ್ಟ ಉತ್ತರ ಹುಡುಕಲು ಪ್ರಯತ್ನಿಸಲಾಗಿದೆ. ಇದಕ್ಕಾಗಿ ರೈತ ದಂಗೆಗಳ ಅಕಾಡೆಮಿಕ್ ಅಧ್ಯಯನಗಳು ರೂಪಿಸಿರುವ ಆರು ಮಾದರಿಗಳನ್ನು ವಿವರಿಸಿ ಬಳಸಲಾಗಿದೆ. ಈ ಮಾದರಿಗಳನ್ನು ದಂಗೆಯ – ಉದ್ದೇಶ, ಸಂಘಟಿಸುವ ವಿಧಾನ, ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಇದ್ದ ಮೂಲ ಸಿದ್ಧಾಂತ, ದಂಗೆಯ ವ್ಯೂಹ ಮತ್ತು ಅನುಸರಿಸುವ ತಂತ್ರಗಳು, ಮೂಲ ರಚನೆಯಲ್ಲಿ ಕ್ರಾಂತಿಕಾರಿ ಬದಲಾವಣೆಯ ಸಾಧ್ಯತೆ, ನಾಯಕತ್ವದ ಲಕ್ಷಣಗಳು – ಇವೇ ಮುಂತಾದ ಅಂಶಗಳನ್ನು

ಇಟ್ಟುಕೊಂಡು ರೂಪಿಸಲಾಗಿದೆ. ಮೇಲೆ ಹೇಳಿದ ಪ್ರಮುಖ ರೈತ ದಂಗೆಗಳು ಈ ಮಾದರಿಗಳಲ್ಲಿ ಯಾವುದಕ್ಕೆ ಹೆಚ್ಚು ಹತ್ತಿರ ಇದ್ದವು ಎಂಬ ವಿಶ್ಲೇಷಣೆಯನ್ನು ಮಾಡಲಾಗಿದೆ.

. . . . . .

ರೈತ ಮತ್ತು ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿಗಳ ಕಾರ್ಯಕರ್ತರು, ನಾಯಕರು

ಈ ಸ್ವಾತಂತ್ರ್ಯಪೂರ್ವ ರೈತ ಚಳುವಳಿಗಳ ಓದಿನಿಂದ ತಮ್ಮ ಚಳುವಳಿಗಳಿಗೆ ಸ್ಫೂರ್ತಿ

ಪಡೆಯಬಹುದು. ಸ್ವಾತಂತ್ರ್ಯಪೂರ್ವ ರೈತ ಚಳುವಳಿ (ರೈತರು, ಚಳುವಳಿಯ ಕಾರ್ಯಕರ್ತರು, ನಾಯಕರು) ಮತ್ತು ಅವನ್ನು ಸಾಮ್ರಾಜ್ಯಶಾಹಿ–ವಿರೋಧಿ ಪ್ರಜಾಸತ್ತಾತ್ಮಕ ರಾಜಕೀಯ ಚಳುವಳಿಯ ಜತೆ ಬೆಸೆಯುವಲ್ಲಿ ಎದುರಿಸಿದ ಹಲವು ಪ್ರಮುಖ ಸಮಸ್ಯೆಗಳು ಈಗಲೂ ಪ್ರಸ್ತುತ. ಪ್ರೊ.ಧನಗೆರೆಯವರ ವಿಶ್ಲೇಷಣೆಯಿಂದ ಹೊರಡುವ ಕೆಲವು ಸಾಮಾನ್ಯೀಕೃತ ತೀರ್ಮಾನಗಳನ್ನು, – ಇಂದಿನ ಸನ್ನಿವೇಶ, ತಮ್ಮ ಅನುಭವ ಮತ್ತು ವಿಶ್ಲೇಷಣೆಯ ಆಧಾರದಲ್ಲಿ – ಪರೀಕ್ಷಣೆಗೆ ಒಡ್ಡಿ ತಮ್ಮ ಚಟುವಟಿಕೆಗೆ ಮಾರ್ಗದರ್ಶಿಯಾಗಿ ಬಳಸಲು ಸಾಧ್ಯ. ಯಾವುದೇ ಒಂದು ರೈತ ಚಳುವಳಿಯನ್ನು ಹೇಗೆ ಸಮಗ್ರವಾಗಿ ವಿಶ್ಲೇಷಣೆಯನ್ನು ಮಾಡಬಹುದು ಮತ್ತು ಮಾಡಬೇಕು ಎಂಬುದನ್ನು ಇಲ್ಲಿನ ವಿಶ್ಲೇಷಣೆಯ ಮಾದರಿಗಳಿಂದ ಕಲಿಯಬಹುದು. ಒಂದು ರೈತ ಚಳುವಳಿಯನ್ನು ಹೇಗೆ ಪ್ರಾರಂಭಿಸುವುದು, ಅದಕ್ಕೆ

ಬೇಕಾದ ಅಧ್ಯಯನ ಮತ್ತು ಪೂರ್ವ ತಯಾರಿಗಳು ಏನು ಎಂಬ ಬಗೆಗೂ ಇಲ್ಲಿ ಹಲವು ಸೂಚನೆಗಳಿವೆ.

ಇತಿಹಾಸ ಮತ್ತು ಸಮಾಜ ವಿಜ್ಞಾನಗಳ ವಿದ್ಯಾರ್ಥಿಗಳು ಸಂಶೋಧಕರು ಅಧ್ಯಾಪಕರು–ಇವರೆಲ್ಲರಿಗೂ ಇದು ಒಂದು ಅತ್ಯಪೂರ್ವ ಆಕರ ಗ್ರಂಥ. ವಿದ್ಯಾರ್ಥಿಗಳಿಗೆ ಅವರ ಪಠ್ಯಪುಸ್ತಕಗಳಿಗೆ ಪೂರಕವಾಗಿ ಹೆಚ್ಚಿನ ಮಾಹಿತಿ ಒದಗಿಸುವ ಗ್ರಂಥ. ರೈತ ಮತ್ತು ಇತರ ಪ್ರಜಾಸತ್ತಾತ್ಮಕ ಚಳುವಳಿಗಳ ಬಗ್ಗೆ ಗಂಭೀರ ಅಧ್ಯಯನ ಕರ್ನಾಟಕದಲ್ಲಿ ಅಪರೂಪ ಎಂದರೆ ತಪ್ಪಾಗಲಾರದು. ಚಳುವಳಿಗಳ ಬಗ್ಗೆ ಗಂಭೀರ ಅಧ್ಯಯನ ಕೈಗೊಳ್ಳಲು ಸಂಶೋಧಕರು ಅಧ್ಯಾಪಕರುಗಳಿಗೆ ಈ ಪುಸ್ತಕ ಸ್ಫೂರ್ತಿದಾಯಕವಾಗಬಲ್ಲುದು. ಅಂತಹ ಅಧ್ಯಯನ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**